4. ನಿಯಮ 159ರ ಮುಂದುವರೆದ ಚರ್ಚೆ

ರಾಜ್ಯದಲ್ಲಿ ಬಹುತೇಕ ಎಲ್ಲಾ ಜಿಲ್ಲೆಗಳಲ್ಲಿ ಮಳೆಯ ಅಭಾವದಿಂದ ಬರಗಾಲ ಹಾಗೂ ಕಾಮಗಾರಿ ಕೆಲಸ ಕುರಿತು

+ಶ್ರೀ ಬಿ. ಸೋಮಶೇಖರ್ (ಮಳವಳ್ಳಿ) : ಮಾನ್ಯ ಅಧ್ಯಕ್ಷರೆ, ಸರ್ಕಾರ ಈಗಾಗಲೇ ಬರ ಪರಿಹಾರ ಕಾರ್ಯಕ್ರಮವನ್ನು ಸಮರೋಪಾದಿಯಲ್ಲಿ ಮಾಡಬೇಕೆಂದು ಹೇಳಿ, ಅನೇಕ ಘೋಷಣೆಗಳನ್ನು ಮಾಡುತ್ತಾ ಬಂತು. ಒಂದು ವರ್ಷದ ಹಿಂದೆ ಸರ್ಕಾರದವರು ಸಚಿವ ಸಂಪುಟದಲ್ಲಿ ಒಮದು ತೀರ್ಮಾನವನ್ನು ಮಾಡಿತು, ಅದು ಏನೆಂದರೆ ಸುಮಾರು 24 ಜಿಲ್ಲೆಗಳಲ್ಲಿ ಸುಮಾರು 152 ತಾಲ್ಲೂಕುಗಳಲ್ಲಿ 100 ದಿವಸಗಳ ಕಾಮಗಾರಿ ಕಾರ್ಯಕ್ರಮವನ್ನು ಆರಂಭಿಸುವುದನ್ನು ಮಾಡುತ್ತೇವೆಂದು ಹೇಳಿದರು. ಅದರಲ್ಲಿ ನಮ್ಮ ರೈತರ ಕಾಯಕಕ್ಕೆ ಟೈಮ್ ಟೇಬಲ್ ಅನ್ನು ಹಾಕಿಕೊಂಡರು.

(ಶ್ರೀ ಯು.ಆರ್. ಸಭಾಪತಿಯವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಎರಡು ಲಕ್ಷ ಟನ್ ಆಹಾರ ಧಾನ್ಯವನ್ನು ಬಿಡುಗಡೆ ಮಾಡಲು, ಕೇಂದ್ರ ಸರ್ಕಾರ ಒಪ್ಪಿದೆ. ಅದು ಆಗಸ್ಟ್ 16ನೇ ತಾರೀಖಿನಿಂದ ಜಾರಿಗೆ ಬರುತ್ತದೆಂದು ಹೇಳಿ, ಇದರ ಜೊತೆಗೆ 9 ತಾಲ್ಲೂಕುಗಳನ್ನು ಸೇರಿಸುತ್ತೇವೆಂದು ಸ್ಟೇಟ್‌ಮೆಂಟ್ ಅನ್ನು ಸರ್ಕಾರದವರು ಕೊಟ್ಟರು. ಈ ಒಂದು ಕಾರ್ಯಕ್ರಮ ಏನಾಯಿತು? ಯಾವ ಮಟ್ಟದಲ್ಲಿ ಇದೆ. ಇದಕ್ಕೆ ಎಷ್ಟು ಹಣ ಖರ್ಚು ಆಗಿದೆ. ಇದರಲ್ಲಿ ಎಷ್ಟು ಕೆರೆಗಳನ್ನು ಅಭಿವೃದ್ಧಿ ಮಾಡಿದ್ದಾರೆಂಬುದನ್ನು ಸರ್ಕಾರದವರು ಹೇಳಬೇಕಾಗುತ್ತದೆ. ಏಕೆಂದರೆ ಈ ರೈತ ಕಾಯಕ ಕೆರೆಯನ್ನು ನಾವು ಪರಿಶೀಲನೆ ಮಾಡಿದಾಗ, ಎಷ್ಟು ಕೆರೆಗಳು ಅಭಿವೃದ್ಧಿಯಾಗಿದೆ. ಎಂಬುದನ್ನು ಅಳತೆ ಮಾಡಲು ಯಾವುದೇ ಒಂದು ವಿಧಾನವಿಲ್ಲ. ಯಾವುದೇ ಒಂದು ಕಾರ್ಯಸೂಚಿ ಇಲ್ಲ. ಅದರಲ್ಲಿ ಬಹುತೇಕ ಕೆಲಸಗಳನ್ನು ಜೆಸಿಬಿಗಳ ಮುಖಾಂತರ ಮಾಡುವಂಥಾದ್ದನ್ನು ನಾವು ನೋಡಿದ್ದೇವೆ. ಈ ಜೆಸಿಬಿಯಲ್ಲಿ ಒಂದು ಗಂಟೆಗೆ 600 ರೂಪಾಯಿಗಳು ಬಾಡಿಗೆ ಕೊಡುತ್ತಾರೆ. 10 ಗಂಟೆಗಳು ಮಾಡಿದರೆ 6,000 ರೂಪಾಯಿಗಳು ಆಗುತ್ತದೆ. ಮೂರು ದಿವಸಗಳ ಜೆಸಿಬಿಯಲ್ಲಿ ಕೆಲಸ ಮಾಡಿದರೆ ಒಂದು ಲಕ್ಷ ರೂಪಾಯಿಗಳಂತೆ ಒಂದು ಕೆರೆಗೆ ನಿಗದಿ ಮಾಡಿದರೆ, ಮೂರು ದಿವಸಗಳು ಕೆಲಸವಾಗಿದೆ. ಎಂದು ಲೆಕ್ಕ ತೋರಿಸಿ ಮುಚ್ಚಿಬಿಟ್ಟರೆ, ಯಾರು ಕೇಳುವ ಹಾಗೆ ಇಲ್ಲ, ಮತ್ತೆ ಸ್ವಲ್ಪಮಟ್ಟಿಗೆ ಮಳೆ ಬಂದು, ನೀರು ಬಂದರೆ, ಆ ಕೆಲಸವಾಗಿದೆ. ಎಂದು ಬಿಲ್ ಮಾಡಿರುವಂತಹ ಅನೇಕ ನಿದರ್ಶನಗಳನ್ನು ನಾವು ನೋಡುತ್ತಿದ್ದೇವೆ. ಹೀಗಾಗಿ ಅನೇಕ ತಾಲ್ಲೂಕುಗಳಲ್ಲಿ ಸರಿಯಾಗಿ ಕೆಲಸ ಸರಿಯಾಗಿ ಆಗಿಲ್ಲವೆಂದು, ದೂರುಗಳು ಬಂದಿವೆ, ಲ್ಯಾಂಡ್ ಆರ್ಮಿ ಕಾರ್ಪೋರೇಷನ್‌ನಲ್ಲಿ ಸುಮಾರು 130 ರೂಪಾಯಿಗಳನ್ನು ಕೊಟ್ಟು 6,8000 ಮೆಟ್ರಿಕ್ ಟನ್‌ಗಳಷ್ಟು ಆಹಾರ ಧಾನ್ಯಗಳನ್ನು ಬಿಡುಗಡೆ ಮಾಡಿದ್ದಾರೆ. ಆದರೆ ಈ ಲ್ಯಾಂಡ್ ಆರ್ಮಿ ಕಾರ್ಪೋರೇಷನ್‌ರವರು ಮಾಡತಕ್ಕಂಥಾದ್ದು, ಅವರೇ ಕೂಲಿ ಕಾರ್ಮಿಕರನ್ನು ಕೆಲಸಕ್ಕೆ ತೆಗೆದುಕೊಂಡು ಮಾಡಸಬೇಕೆಂದು ಇದೆ. ಆದರೆ ಅವರು ಸಣ್ಣಪುಟ್ಟ ಕಂಟ್ರಾಕ್ಟ್‌ದಾರರಿಗೆ ಸಬ್‌ಲೀಜ್‌ಗೆಕೊಟ್ಟು ಕೆಲಸ ಮಾಡಿಸಿರತಕ್ಕಂಥಾದ್ದು ನಾವು ನೋಡಿದ್ದೇವೆ. ಅದುದರಿಂದ ಸರ್ಕಾರ ಈ ರೈತ ಕಾಯಕಕ್ಕೆ ಎಷ್ಟು ಹಣವನ್ನು ಖರ್ಚು ಮಾಡಿದ್ದಾರೆ, ಎಷ್ಟು ಕೆರೆಗಳು ಆಗಿವೆ, ಮತ್ತೆ ಎಷ್ಟು ಜನರಿಗೆ ಕೈಗೆಲಸವನ್ನು ಕೊಟ್ಟಿದ್ದಾರೆ. ಎನ್ನುವುದನ್ನು ಹೇಳಬೇಕಾಗುತ್ತದೆ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಸುಮಾರು 10 ಕೋಟಿ man day ನಾವು ಸೃಷ್ಟಿ

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣ ಪರಿಷ್ಕರಿಸಿಲ್ಲವೆಂದು ಸೂಚಿಸುತ್ತದೆ.)

ಮಾಡಿದ್ದೇವೆಂದು ಹೇಳಿದರು, ಇವರು ಇಷ್ಟನ್ನು ಸೃಷ್ಟಿ ಮಾಡಿದ್ದರೆ, ಇದರ ಉದ್ದೇಶವಿದದ್ದು ಕೆಲಸವಿಲ್ಲದ ಕೈಗಳಿಗೆ ಕೆಲಸವನ್ನು ಕೊಡಬೇಕೆಂಬುದು ಇದು ಕೂಲಿಗಾಗಿ ಕಾಳು ಎಂಬ ಯೋಜನೆ ಇರುವಂಥಾದ್ದು. ಆದರೆ ಇಡೀ ರಾಜ್ಯದಾದ್ಯಂತ ಹತ್ತು ಕೋಟಿ ಜನರಿಗೆ ಅಲ್ಲ, ಒಂದು ಲಕ್ಷ ಜನರಿಗೂ ಕೆಲಸವನ್ನು ಕೊಟ್ಟಿದೆ, ಎಂದು ನಾವು ನೇರವಾಗಿ ಹೇಳುವುದಕ್ಕಾಗುವುದಿಲ್ಲ. ಇದನ್ನು ದಲಿತ ಸಂಘರ್ಷ ಸಮಿತಿಯವರು ಸಹ, ಒಂದು ಆರೋಪವನ್ನು ಮಾಡಿದ್ದಾರೆ. ಇಲ್ಲಿ ಬಡವರು ಯಾರು ಕೆಲಸವಿಲ್ಲದೇ ಇದ್ದಾರೆ, ಅವರಿಗೆ ಈ ಕೆಲಸವನ್ನು ಕೊಡದೇ, ಇದು ಸಂಪೂರ್ಣವಾಗಿ ಜೆಸಿಬಿಯ ಪಾಲಿ ಆಗಿದೆ, ಗುತ್ತಿಗೆದಾರರ ಪಾಲಾಗಿದೆ. ಇದನ್ನು ತನಿಖೆ ಮಾಡಬೇಕೆಂದು ಅವರು ಹೇಳಿರುವಂಥಾದ್ದು ಅವರು ಧರಣಿಮಾಡಿರತಕ್ಕದ್ದು ನಮ್ಮ ಗಮನಕ್ಕೆ ಬಂದಿದೆ. ಆದುದರಿಂದ ಸರ್ಕಾರ ಇದರ ಬಗ್ಗೆ ಎಷ್ಟು ಈ ಅವ್ಯವಹಾರದ ಬಗ್ಗೆ ತನಿಖೆಯಾಗಿದೆ. ಯಾರ ಮೇಲೆ ಕ್ರಮ ತೆಗೆದುಕೊಂಡಿದೆ. ಎಂಬುದನ್ನು ಸರ್ಕಾರ ಹೇಳಬೇಕಾಗುತ್ತದೆ. ಇನ್ನು ಅಕ್ಷರ ದಾಸೋಹಕ್ಕೆ ಕೇಂದ್ರ ಸರ್ಕಾರದಿಂದ ಅಕ್ಕಿ ಬರುವಂಥಾದ್ದು, ಈಗಾಗಲೇ ಸುಮಾರು 2–3 ವರ್ಷಗಳಿಂದ ಕೇಂದ್ರ ಸರ್ಕಾರದಿಂದ ಅಕ್ಕಿ ಬಂದಿದೆ, ಈಗ ತಾವು ಒಂದು ಮಗುವಿಗೆ ಸುಮಾರು 200ಗ್ರಾಂ ಒಂದು ದಿವಸಕ್ಕೆ ಎಂದರೆ ಒಂದು ತಿಂಗಳಿಗೆ ಸುಮಾರು 3 ಕೆ.ಜಿ. ಅಕ್ಕಿ ಎಂದು ಮಾಡಿದ್ದೀರಿ, ಅದರಲ್ಲಿ 30 ದಿವಸಗಳು ಶಾಲೆ ನಡೆಯುವುದಿಲ್ಲ. ಸುಮಾರು 25 ದಿವಸಗಳು ಶಾಲೆ ನಡೆದಾಗ ಅದರಲ್ಲಿ ಎರಡೂವರೆ ಕೆ.ಜಿ. ಮಾತ್ರ ಅಕ್ಕಿ ಮಕ್ಕಳಿಗೆ ಬರುತ್ತಾ ಇದೆ. 2001–02ರಲ್ಲಿ 1,56,000 ಮೆಟ್ರಿಕ್ ಟನ್ ಅಷ್ಟು ಅಕ್ಷರ ದಾಸೋಹಕ್ಕೆ ಎಂದು ಕೇಂದ್ರ ಸರ್ಕಾರದಿಂದ ಅಕ್ಕಿ ಬಂದಂಥಾದ್ದು, ಅದರಲ್ಲಿ ನೀವು ಲಿಫ್ಟ್ ಮಾಡಿರುವಂಥಾದ್ದು 1,35,000 ಮೆಟ್ರಿಕ್ ಟನ್, ಅದರಲ್ಲೂ ನೀವು ಸುಮಾರು 20,000 ಮೆಟ್ರಿಕ್ ಟನ್ ಅಕ್ಕಿಯನ್ನು ನೀವು ಲಿಫ್ಟ್ ಮಾಡಿಲ್ಲ. ಹಾಗೆ 2002–2003ರಲ್ಲಿ ಕೇಂದ್ರಸರ್ಕಾರ ಬಿಡುಗಡೆ ಮಾಡಿರುವಂತಹ ಅಕ್ಕಿ 1,57,000 ಸಾವಿರ ಮೆಟ್ರಿಕ್ ಟನ್, ನೀವು ಅದರಲ್ಲಿ ಲಿಫ್ಟ್ ಮಾಡಿರುವಂಥಾದ್ದು 1,17,000 ಸಾವಿರ ಮೆಟ್ರಿಕ್ ಟನ್ ಮಾಡಿದ್ದೀರಿ, ಅಂದರೆ ತಾವು ಏನು ಸರ್ಕಾರ ಮಹತ್ತರವಾದಂತಹ ಕಾರ್ಯಕ್ರಮವನ್ನು ಬಡವರ ಪರ ಹಾಕಿಕೊಂಡಿದ್ದೇವೆಂದು ಹೇಳಿದ್ದೀರಿ, ಅದರಲ್ಲೂ ನೀವು ಎರಡು ವರ್ಷಗಳಿಂದ ನೀವು ಸುಮಾರು 37,000 ಸಾವಿರ ಮೆಟ್ರಿಕ್ ಟನ್ ಅನ್ನು ಕೇಂದ್ರ ಸರ್ಕಾರ ಬಿಡುಗಡೆ ಮಾಡಿದರೂ ಅದನ್ನು ಲಿಫ್ಟ್ ಮಾಡದೇ ಇರುವಂಥಾದ್ದು, ನಮ್ಮ ಗಮನಕ್ಕೆ ಬಂದಿದೆ. ಮತ್ತೆ ಇದಕ್ಕೆ ಹಣ ಈಗ ಅಂಕಿಅಂಶಗಳ ಪ್ರಕಾರ 2001–02 2002–03ರಿಂದ ಸುಮಾರು 8,20,000 ಸಾವಿರ ಮೆಟ್ರಿಕ್ ಟನ್ ಕೇಂದ್ರ ಸರ್ಕಾರ ಬಿಡುಗಡೆ ಮಾಡಿದೆ, ಈ ಹಣಕ್ಕೆ ತಕ್ಕಂತೆ ಮ್ಯಾಚಿಂಗ್ ಗ್ರಾಂಟ್ಸ್ ಎಂದು ನಾನು ಏನು ಹೇಳುತ್ತೇವೆ. ಅದನ್ನು ಬಿಡುಗಡೆ ಮಾಡುವಂಥಾದ್ದು ರಾಜ್ಯಸರ್ಕಾರಕ್ಕೆ ಸೇರಿದಂತಹ ಕೆಲಸ. ಆದರೆ ರಾಜ್ಯ ಸರ್ಕಾರ ಎಂಟು ಲಕ್ಷಕ್ಕೂ ಹೆಚ್ಚಿಗೆ ಆಹಾರ ಧಾನ್ಯವನ್ನು ಬಿಡುಗಡೆ ಮಾಡಿರುವುದಕ್ಕೆ, ರಾಜ್ಯ ಸರ್ಕಾರದಿಂದ ಎಷ್ಟು ಹಣ ಬಿಡುಗಡೆಯಾಗಿದೆ. ಆ ಮ್ಯಾಚಿಂಗ್ ಗ್ರಾಂಟ್ಸ್ ಎಷ್ಟು ಅನ್ನುವುದನ್ನು ಹೇಳಬೇಕಾಗುತ್ತದೆ. ಮೊನ್ನೆಸರ್ಕಾರ ಮಂಡಿಸಿರುವಂತಹ ಉತ್ತರದಲ್ಲಿ 2002–03 ಮತ್ತು 2003–04ರಲ್ಲಿ ಎಷ್ಟು ಕೇಂದ್ರದಿಂದ ಹಣ ಬಿಡುಗಡೆ ಯಾಗಿದೆ, ಎಷ್ಟು ಖರ್ಚು ಮಾಡಿದ್ದಾರೆ. ಎನ್ನುವ ಮಾಹಿತಿಯನ್ನು ನೋಡಿದಾಗ, 2002–03ರಲ್ಲಿ ಸುಮಾರು 192 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ. ಅದರಲ್ಲಿ ಖರ್ಚು ಆಗಿರುವಂಥಾದ್ದು ಸುಮಾರು 140 ಕೋಟಿ ರೂಪಾಯಿಗಳು, ಹೋದ ವರ್ಷ ಅದರಲ್ಲಿ 52 ಕೋಟಿ ರೂ ಖರ್ಚು ಆಗಿಲ್ಲ. ಇದು ಕೇಂದ್ರ ಸರ್ಕಾರದಿಂದ ಬಂದಿರುವಂತಹ ಹಣ, ಹಾಗೆ ಈ ವರ್ಷ

ಸುಮಾರು 106 ಕೋಟಿ ರೂಪಾಯಿಗಳು ರಿಲೀಸ್ ಆಗಿದೆ, ಅದರಲ್ಲಿ ನೀವು 78ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ.

12.40 ಪಿ.ಎಂ.

ಈ ವರ್ಷ 28 ಕೋಟಿ ರೂ ಖರ್ಚು ಮಾಡಿಲ್ಲ. ಕೇಂದ್ರ ಸರ್ಕಾರದಿಂದ ಸಂಪೂರ್ಣವಾಗಿ ಸಿಆರ್‌ಎಫ್ ಎನ್‌ಸಿಸಿಎಫ್ ಈ ಎರಡು ಹೆಡ್‌ಗಳಲ್ಲಿ ಬಿಡುಗಡೆ ಮಾಡಿರತಕ್ಕಂಥದ್ದು 52.28 ಕೋಟಿ ರೂ ಒಟ್ಟು 80 ಕೋಟಿ ರೂಪಾಯಿಗಳ ಹಣವನ್ನು ಖರ್ಚು ಮಾಡಿಲ್ಲ, ಅದು ಸಂಪೂರ್ಣವಾಗಿ ಕೇಂದ್ರದಿಂದ ಬಂದಿರುವ ಹಣ. 8 ಲಕ್ಷ ಮೆಟ್ರಿಕ್ ಟನ್‌ಗೆ ತಾವು ಎಷ್ಟು ಹಣವನ್ನು ಒದಗಿಸಿಕೊಡಬೇಕಾಗಿತ್ತು ಎನ್ನುವುದನ್ನು ನೋಡಿದರೆ ಸುಮಾರು 500 ಕೋಟಿ ರೂಪಾಯಿಗಳ ಹಣವನ್ನು ತಾವು ಒದಗಿಸಬೇಕಾಗಿತ್ತು. 500 ಕೋಟಿ ರೂ.ನಲ್ಲಿ ಕೇಂದ್ರ ಸರ್ಕಾರ 300 ಕೋಟಿ ರೂ ಕೊಟ್ಟಿದೆ ಅದರಲ್ಲಿ ಇನ್ನು 80 ಕೋಟಿ ರೂ ಖರ್ಚು ಮಾಡಿಲ್ಲ. ಸುಮಾರು 500 ಕೋಟಿ ರೂ ಏನು ಮ್ಯಾಚಿಂಗ್ ಗ್ರಾಂಟ್ ಅನ್ನು ನೀವು ಕೊಡಬೇಕಾಗಿತ್ತು ಅದನ್ನು ಬಿಡುಗಡೆ ಮಾಡಿಲ್ಲ ಮತ್ತೆ ಪ್ಲಾನ್ ಸ್ಕೀಂಗಳಿಗೆ ಸೇರಿಸಿ, ಕೇಂದ್ರ ಸರ್ಕಾರದಿಂದ ಬರುವ ಕೂಲಿಗಾಗಿ ಕಾಳು ಯೋಜನೆ ಇರಬಹುದು. ಕುಡಿಯುವ ನೀರಿನ ಯೋಜನೆ ಇರಬಹುದು ಪ್ಲಾನ್ ಸ್ಕೀಂನಲ್ಲಿ ಸೇರಿಸಿರುವ ಹಣವನ್ನು ಖರ್ಚು ಮಾಡಬೇಕೆಂದು ತಾವೇನು ಹೇಳಿದ್ದೀರಿ ಅದನ್ನು ಕೂಡ ಖರ್ಚು ಮಾಡಿಲ್ಲ. ಸರ್ಕಾರದಲ್ಲಿ ಏನೊಂದು ವಿಫಲತೆಯನ್ನು ನಾನು ಕಾಣುತ್ತಿದ್ದೇನೆಂದರೆ ಕೇಂದ್ರ ಸರ್ಕಾರದಿಂದ ಬಂದಂಥ ಹಣವನ್ನು ಸಂಪೂರ್ಣವಾಗಿ ನೀವು ಕೊಡದೆ, ನಿಮ್ಮ ರಾಜ್ಯ ಸರ್ಕಾರದಿಂದ ಒಂದು ರೂಪಾಯಿನ್ನು ಕೊಡದೆ, ಮ್ಯಾಚಿಂಗ್ ಹಣವನ್ನು ನೀಡದೆ ಕೇಂದ್ರ ಸರ್ಕಾರವನ್ನು ದೂರುವುದು ಅಷ್ಟೊಂದು ಸಮಂಜಸವಲ್ಲ. ಅದಕೆಕ ಮತ್ತೊಂದು ಉದಾಹರಣೆಯನ್ನು ನಾನು ಕೊಡಬಲ್ಲೆ. ಸರ್ಕಾರ ಈ ಬರಪರಿಹಾರ ಕಾರ್ಯಕ್ರಮವನ್ನು ಬೇಜವಾಬ್ದಾರಿಯಿಂದ ನಿಭಾಯಿಸಿದೆ ಎಂದರೆ, ಇವತ್ತು ದೆಹಲಿಯಿಂದ ಒಂದು ಸುದ್ಧಿ ವರದಿಯಾಗಿದೆ. 55,000 ಮೆಟ್ರಿಕ್‌ಟನ್ ಬಿಡುಗಡೆ ಮಾಡುತ್ತೇವೆಂದು ನಾವು ಸೂಚನೆ ಕೊಟ್ಟಿದ್ದರು ಆ ಅಕ್ಕಿಯನ್ನು ನೇರವಾಗಿ ಕೇಂದ್ರ ಸರ್ಕಾರ ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಿದ್ದಾರೆ ಈ ತಿಂಗಳ 30ನೇ ತಾರೀಖು ಕೇಂದ್ರದಲ್ಲಿ ತೀರ್ಮಾನವಾಗಿದ್ದರೂ ಕೂಡ ನೀವು ಕೊಟ್ಟಿರತಕ್ಕ ಮಾಹಿತಿ ತಪ್ಪಾಗಿ 55,500 ಮೆಟ್ರಿಕ್ ಟನ್ ನಮೂದಿಸಿ ತಪ್ಪು ಮಾಹಿತಿಯನ್ನು ಕೊಟ್ಟು, ಅವರು ಮತ್ತೆ ಸ್ಪಷ್ಟನೆಗೆ ಕಳುಹಿಸಿ, ಏನು ನೀವು ಜೂನ್ ತಿಂಗಳಲ್ಲಿ 55,000 ಮೆಟ್ರಿಕ್ ಟನ್ ಖರ್ಚು ಮಾಡಬೇಕಾಗಿತ್ತೊ ಅದು ಸುಮಾರು ಎರಡು ತಿಂಗಳ ಕಾಲ ಮುಂದು ಹೋಗುವಂತಹ ಪರಿಸ್ಥಿತಿ ಉದ್ಭವವಾಗಿದೆ. ಕಂದಾಯ ಇಲಾಖೆಯಲ್ಲಿ ಒಂದು ಪ್ರತ್ಯೇಕವಾದ ಸೆಲ್ ಇದೆ ಜಿಲ್ಲಾ ಮಂತ್ರಿಗಳಿದ್ದಾರೆ, ಪ್ರತಿಯೊಂದು ಜಿಲ್ಲೆಗೆ ಸೂಪರ್‌ವೈಸ್ ಮಾಡಲು ಕಾರ್ಯದರ್ಶಿಗಳನ್ನು ನೇಮಕ ಮಾಡಿದ್ದೀರಿ. ಅದರ ಜೊತೆಗೆ ಒಂದು ಸೂಪರ್ ಕ್ಯಾಬಿನೆಟ್ ಸಬ್‌ಕಮಿಟಿಯನ್ನು ರಚನೆ ಮಾಡಿದ್ದೀರಿ. ಈ ಕಮಿಟಿಯಲ್ಲಿ ನಾಲ್ಕೈದು ಜನ ಮಂತ್ರಿಗಳಿದ್ದಾರೆ. ಇವರು ಈ ಸದನ ಪ್ರಾರಂಭವಾಗುವಾಗ ಎರಡು ಮೂರು ದಿವಸಗಳ ಮುನ್ನ ಹೆಲಿಕಾಪ್ಟರ್‌ನಲ್ಲಿ ಬರಪರಿಹಾರ ಕಾರ್ಯಕ್ರಮವನ್ನು ವೀಕ್ಷಣೆ ಮಾಡಲು ಹೋದರು. ಇಷ್ಟೊಂದು ತಿಂಗಳಲ್ಲಿ ಎಷ್ಟು ತಾಲ್ಲೂಕುಗಳಿಗೆ ಭೇಟಿ ಕೊಟ್ಟಿದ್ದೀರಿ. ಎಷ್ಟು ಮಾಹಿತಿಯನ್ನು ಕೇಂದ್ರ ಸರ್ಕಾರಕ್ಕೆ ಕೊಟ್ಟಿದ್ದೀರಿ ಇದಕ್ಕೆ ಯಾರು ಜವಾಬ್ದಾರರು? ಇವತ್ತು ಜೂನ್ ತಿಂಗಳಲ್ಲಿ 55,000 ಮೆಟ್ರಿಕ್ ಟನ್ ಅಕ್ಕಿ ಖರ್ಚಾಗಬೇಕಾಗಿತ್ತು. ಕೇಂದ್ರ ಸರ್ಕಾರಕ್ಕೆ ಸರಿಯಾದ ಮಾಹಿತಿಯನ್ನು ಕೊಟ್ಟು ತರಿಸಿಕೊಳ್ಳುವುದರಲ್ಲೂ ರಾಜ್ಯ ಸರ್ಕಾರ

ಸಂಪೂರ್ಣವಾಗಿ ಇದರಲ್ಲಿ ವಿಫಲವಾಗಿದೆ. ಇದನ್ನು ನೋಡಿದರೆ, ಮಾನ್ಯ ಖರ್ಗೆಯವರು ಒಂದು ಸಾರಿ ಹೇಳಿದರು. ರೈತ ಕಾಯಕ ಕೆರೆ ಇರಬಹುದು. ಸಣ್ಣ ನೀರಾವರಿ ಕಾಮಗಾರಿಗಳಿಗೆ ನಾವು ಹಣ ಬಿಡುಗಡೆ ಮಾಡುತ್ತೇವೆ. ಆದರೆ ಖಜಾನೆಯಲ್ಲಿ ಬಿಡುಗಡೆ ಮಾಡಿರುವುದಕ್ಕೂ ರಾಜ್ಯದಿಂದ ಬಿಡುಗಡೆ ಮಾಡಿರುವುದಕ್ಕೂ ಯಾವುದೇ ಹೊಂದಾಣಿಕೆ ಇಲ್ಲ. ಎನ್ನುವುದನ್ನು ಹೇಳಿದರು. ನಮಗೆಲ್ಲಾ ಗೊತ್ತಿರುವ ವಿಚಾರ ರಿಲೀಸ್ ಆರ್ಡರ್‌ಗಳನ್ನು ಅಡ್ಮಿನಿಸ್ಟ್ರೇಟಿವ್ ಇಲಾಖೆಗಳು ಕೊಡುತ್ತವೆ. ಅದಕ್ಕೆ ಬೇಕಾದ ಹಣವನ್ನು ಬಿಡುಗಡೆ ಮಾಡುವವರು ಖಜಾನೆಯವರು, ಆ ಖಜಾನೆಗೆ ಎ ಅಂಡ್ ಆರ್. ಬಜೆಟ್ ಅಂಡ್ ರಿಸೋರ್ಸಸ್ ಎಂದು ಒಂದು ವಿಂಗ್ ಹಣಕಾಸು ಇಲಾಖೆಯಲ್ಲಿದೆ ಅವರು ನೇರವಾಗಿ ಹಣವನ್ನು ಬಿಡುಗಡೆ ಮಾಡಬೇಕು. ನನ್ನ ದೃಷ್ಟಿಯಲ್ಲಿ ಇದಕ್ಕೆ ಬೇಕಾದ ಹಣ ಅಲ್ಲಿ ಬಿಡುಗಡೆ ಮಾಡಿಲ್ಲ. ಎರಡುಮೂರು ಲಕ್ಷ ಟನ್ ಅಕ್ಕಿ ಇನ್ನು ಜಿಲ್ಲಾಧಿಕಾರಿಗಳ ವಶದಲ್ಲಿದೆ. ಅದಕ್ಕೆ ಬೇಕಾದ ಹಣವನ್ನು ಬಿಡುಗಡೆ ಮಾಡದೆ ಅಲ್ಲಿಯೂ ಕೂಡ ಅಕ್ಕಿ ಹಾಗೆ ಇದೆ ಎನ್ನುವುದು ನನ್ನ ಆರೋಪ. ಸರ್ಕಾರದಲ್ಲಿ ಅವಶ್ಯಕವಿರುವ ಹಣವನ್ನು ಬಿಡುಗಡೆ ಮಾಡದೆ, ಅಕ್ಕಿಯನ್ನು ಸಂಪೂರ್ಣವಾಗಿ ಖರ್ಚು ಮಾಡದೆ, ಬಡವರಿಗೆ ಕೂಲಿಗಾಗಿ ಕಾಳು ಯೋಜನೆಯಡಿಯಲ್ಲಿ ಒಂದು ರೂಪಾಯಿಯನ್ನು ಕೊಟ್ಟಿಲ್ಲವೆನ್ನುವುದು ನನ್ನ ಜವಾಬ್ದಾರಿಯುತವಾದ ಹೇಳಿಕೆ. ಬಡವರ ಕೈಗೆ ನಾವು ಕೆಲಸ ಕೊಡದಿದ್ದರೆ, ಅಕ್ಕಿಯನ್ನು ವಿತರಣೆ ಮಾಡದಿದ್ದರೆ ಜೆಸಿಬಿ ಪಾಲಾದರೆ ಸುಮಾರು ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿ ಏನು ಪ್ರಯೋಜನ. ಕೂಲಿ ಕೆಲಸ ಸಿಗುತ್ತಿಲ್ಲವೆಂದು ಆ ಬಡವರು ಇವತ್ತು ಊರನ್ನು ಬಿಟ್ಟು ಹೋಗುತ್ತಿದ್ದಾರೆ. ದನಕರುಗಳು ಹೋಗುವುದು ಬೇರೆ, ಜನರು ವಲಸೆ ಹೋಗುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ನಮ್ಮ ಬರ ಪರಿಹಾರ ಕಾರ್ಯಕ್ರಮಗಳನ್ನು ಎಷ್ಟೊಂದು ವೇಗದಲ್ಲಿ ಆಗಬೇಕಾಗಿತ್ತು ಆ ಒಂದು ವೇಗದಲ್ಲಿ ಆಗಿಲ್ಲ. ಅಷ್ಟು ಪರಿಣಾಮಕಾರಿಯಾಗಿ ಆಗಿಲ್ಲವೆನ್ನುವುದು ನನ್ನ ಒಂದು ಆರೋಪ. ಬರ ಪರಿಹಾರ ಕಾರ್ಯಕ್ರಮದಲ್ಲಿ ಈ ಬಿತ್ತನೆ ಬೀಜವನ್ನು ಸಬ್ಸಿಡಿ ರೂಪದಲ್ಲಿ ಕೊಡುತ್ತೇವೆ ಎನ್ನುವ ಮಾತನ್ನು ಸರ್ಕಾರದವರು ಹೇಳಿದ್ದಾರೆ. ನೀವು ಹೇಳಿರತಕ್ಕದ್ದು ಸುಮಾರು 130 ತಾಲ್ಲೂಕುಗಳಲ್ಲಿ ಸಣ್ಣ ಹಾಗೂ ಮಧ್ಯಮ ಹಿಡುವಳಿದಾರರು ಸಬ್ಸಿಡಿ ರೂಪದಲ್ಲಿ ಬಿತ್ತನೆ ಬೀಜವನ್ನು ಕೊಡಲು ಸುಮಾರು 60 ಕೋಟಿ ರೂಪಾಯಿಗಳನ್ನು ಈಗಾಗಲೇ ಮೀಸಲಿಟ್ಟಿದ್ದು ಸುಮಾರು 38,500 ಕ್ವಿಂಟಾಲ್ ಬೀಜ ಸಂಗ್ರಹಣೆಯಾಗಿದೆ. ಎನ್ನುವುದನ್ನು ತಾವು ಹೇಳಿದ್ದೀರಿ. ಈ 38,500 ಕ್ವಿಂಟಾಲ್ ಬೀಜ ಎಲ್ಲಿ ಸಂಗ್ರಹಣೆಯಾಗಿದೆ ಸಬ್ಸಿಡಿ ರೂಪದಲ್ಲಿ ನೀವು ಎಷ್ಟು ಬೀಜವನ್ನು ಕೊಟ್ಟಿದ್ದೀರಿ? ನಮಗೆ ಬಂದ ಮಾಹಿತಿಯ ಪ್ರಕಾರ ಒಪನ್ ಮಾರ್ಕೆಟ್ ಏನು ಬೆಲೆ ಇದೆಯೋ ಅದಕ್ಕಿಂತ ಕಡಿಮೆ ದರದಲ್ಲಿ ಸಬ್ಸಿಡಿ ಎಂದರೆ ಸರ್ಕಾರದವರು ಕೊಡಬೇಕಾಗಿತ್ತು. ದುರ್ದೈವ ಒಪನ್ ಮಾರ್ಕೆಟ್‌ನಲ್ಲಿ 1250 ರೂಪಾಯಿ ಇದ್ದರೆ ಸಬ್ಸಿಡಿಯ ರೂಪದಲ್ಲಿ 1600 ರೂಪಾಯಿಗಳಿಗೆ ಒಂದು ಕ್ವಿಂಟಾಲ್ ಕೊಡುವಂತಹ ಪರಿಸ್ಥಿತಿ ಬಂದಿದೆ. ಅದರ ವಿವರಣೆ ಕೊಡುವುದಕ್ಕೆ ನಾನು ಹೋಗುವುದಿಲ್ಲ ಪಟ್ಟಿಯನ್ನು ತಾವು ತರಿಸಿಕೊಳ್ಳಬಹುದು.

ಶ್ರೀ ಕೆ. ಶ್ರೀನಿವಾಸಗೌಡ (ಕುಡುವನಹಳ್ಳಿ) : ಮಾನ್ಯ ಸಭಾಧ್ಯಕ್ಷರೆ, ಕೋಲಾರದಲ್ಲಿ ಎರಡು ದಿವಸಗಳಿಂದ ಮಳೆ ಜಾಸ್ತಿಯಾಗಿ ಬೀಜದ ರಾಗಿ ಸಿಗದೆ ದೊಡ್ಡ ಗಲಾಟೆಯಾಗಿದೆ. ಅದನ್ನು ನೀವು ಒದಗಿಸಿದ್ದೇವೆಂದು ಹೇಳುತ್ತಿದ್ದೀರಿ ಆದರೆ ನಮ್ಮ ಜಿಲ್ಲೆಯಲ್ಲಿ ಬೀಜದ ರಾಗಿ ಇಲ್ಲ; ನಾವು ಹೆಚ್ಚಾಗಿ ರಾಗಿಯನ್ನೇ ಬಿತ್ತನೆ ಮಾಡುವುದು. ಎರಡನೆಯದಾಗಿ ಒಂದು ಕೆ.ಜಿ. ಕಡಲೆಕಾಯಿಗೆ

23 ರೂಪಾಯಿ ಇದೆ. ಮಾರುಕಟ್ಟೆಯಲ್ಲಿ 15–16 ರೂಪಾಯಿಗಳಿಗೆ ಸಿಗುವಂತಹ ಕಡಲೆಕಾಯಿ 23 ರೂಪಾಯಿಗೆ ಒಂದು ಕೆ.ಜಿ ನಿಜವಾಗಿಯೂ ಇದನ್ನೇನು ಕೊಡಬೇಕೆಂದು ಮಾಡಿದ್ದೀರೋ ಅಥವಾ ಈ ರೈತರು ಕೊಳ್ಳದಿರಲಿ ಕಡೆಗೆ ಆ ಅಧಿಕಾರಿಗಳೇ ಆ ಸಬ್ಸಿಡಿ ಹಣವನ್ನು ಮಾರಿಕೊಳ್ಳಲೆಂದು ಏನಾದರೂ ಮಾಡುತ್ತಿದ್ದಾರೋ ಗೊತ್ತಿಲ್ಲ. ನಮ್ಮ ಕೃಷಿ ಮಂತ್ರಿಗಳು ಇಲ್ಲೆ ಇದ್ದಾರೆ. ಬಿತ್ತನೆ ರಾಗಿ ಜಿಲ್ಲೆಯಾದ್ಯಂತ ಬೇಕಾಗಿದೆ ಎಲ್ಲಿಂದಾದರೂ ತರಿಸಿ ಅದನ್ನು ಬಿಡುಗಡೆ ಮಾಡಬೇಕು ಎಂದು ಅವರಲ್ಲಿ ವಿನಂತಿ ಮಾಡುತ್ತೇನೆ.

ಶ್ರೀ ವಿ.ಎಸ್. ಕೌಜಲಗಿ (ಕೃಷಿ ಮಂತ್ರಿಗಳು) : ಬಿತ್ತನೆ ಕೆಲಸ ಪ್ರಾರಂಭವಾದ ಮೇಲೆ ರಾಗಿ ಸಿಗದೆ ಸ್ವಲ್ಪ ಬಿತ್ತನೆ ರಾಗಿಗೆ ತೊಂದರೆಯಾಗಿದೆ. ಮೊನ್ನೆ ನನ್ನ ಗಮನಕ್ಕೆ ಬಂದ ತಕ್ಷಣ ಎಲ್ಲಾದರೂ ರಾಗಿ ತಂದಿ ಕೊಡಿ ಎಂದು ಸೂಚನೆ ಕೊಡಲಾಗಿದೆ ಶೇಂಗಾದ ಬಗ್ಗೆ ತಾವು ಪ್ರಸ್ತಾಪ ಮಾಡಿದ್ದರಿ. ಆ ಬಗ್ಗೆ ಪರಿಶೀಲನೆ ಮಾಡುತ್ತೇನೆ.

ಶ್ರೀ ಆರಗಜ್ಞಾನೇಂದ್ರ : ಮಾನ್ಯ ಕೃಷಿ ಮಂತ್ರಿಗಳಿಗೆ ಗೊತ್ತಿದೆಯೋ ಏನೋ ಗೊತ್ತಿಲ್ಲ. ಒಂದು ಕ್ವಿಂಟಾಲ್ ಭತ್ತದ ಬೀಜಕ್ಕೆ ಈ ರಾಜ್ಯದಲ್ಲಿ 12,000 ರೂಪಾಯಿ ಅದೇನೋ ಭಾರಿ ಹೈಯೀಲ್ಡಿಂಗ್ ವರೈಟಿ ಎಂದು ಹೇಳುತ್ತಾರೆ, ಅದನ್ನು ಸರ್ಕಾರ ಮಾರಾಟ ಸಂಸ್ಥೆಯಿಂದ ಮಾರಾಟ ಮಾಡಿಸುತ್ತಿದ್ದೀರಿ ಅದರ ಉತ್ಪಾದನೆಯ ವೆಚ್ಚವೆಷ್ಟು ಅದನ್ನು ಏತಕ್ಕೆ ರೈತರಿಗೆ ಅಷ್ಟೊಂದು ದುಬಾರಿಯಲ್ಲಿ ಮಾರಾಟ ಮಾಡುತ್ತಿದ್ದೀರಿ ಎನ್ನುವ ಬಗ್ಗೆ ತಾವು ಇಲಾಖೆಯ ವತಿಯಿಂದ ತನಿಖೆ ಮಾಡಿಸಬೇಕು. ಔಷಧ ಬೆಲೆ ಕೇಳುವವರಿಲ್ಲ, ಭತ್ತದ ಬೀಜ ಬೆಲೆ ಕೇಳುವವರಿಲ್ಲ ಎಂದರೆ ಬೆಳೆಯುವಂತಹ ರೈತ ಹಾಳಾಗಿ ಹೋಗುತ್ತಾನೆ. ನಾವೆಲ್ಲಾ ಭತ್ತ ಬೆಳೆಯುವವರು ಒಂದು ಕ್ವಿಂಟಾಲ್ ಭತ್ತದ ಬೀಜಕ್ಕೆ 12,000 ರೂಪಾಯಿ ಎಂದರೇನು ಅರ್ಥ? ಏನು ಸ್ಪೆಶಲ್ ಆಗಿ ಬೆಳೆಯುತ್ತಾರೆ ಅದ್ಯಾವ ತಳಿ? ಒಂದು ಸಾರಿ ಬೀಜ ಮಾಡಿದರೆ ಮತ್ತೊಂದು ಸಾರಿ ಬೀಜಕ್ಕೆ ಬರುವುದಿಲ್ಲವಂತೆ, ರೈತರು ಬೀಜ ಭತ್ತವನ್ನು ಕೊಂಡುಕೊಂಡು ಮಾಡುತ್ತಿದ್ದರು ಅದಿಲ್ಲ ಈಗ; ಆ ಸಸಿಯನ್ನು ಒಂದು ಸಾರಿ ನೆಡುವುದಂತೆ, ದಯವಿಟ್ಟು ಈ ಬಗ್ಗೆ ತನಿಖೆ ಮಾಡಿಸಬೇಕು. ಇದರಿಂದ ರೈತರಿಗೆ ಹೆರಾಸ್‌ಮೆಂಟ್ ಆಗಬಾರದು. ರೈತರ ದೌರ್ಬಲ್ಯವನ್ನು ಯಾರೂ ಅಡ್ವಾನ್‌ಟೇಜ್ ಪಡೆದುಕೊಳ್ಳಲು ತಮ್ಮ ಕಾಲದಲ್ಲಿ ಯಾರಿಗೂ ಅವಕಾಶ ಕೊಡಬಾರದು ಎಂಬುದು ನನ್ನ ವಿನಂತಿ.

ಶ್ರೀ ವಿ.ಎಸ್. ಕೌಜಲಗಿ : ಭತ್ತದ ಬಗ್ಗೆ ಹೇಳುತ್ತೇನೆ. ಇನ್ನು ಬೀಜದ ಬಗ್ಗೆ ಒಂದು ವಿವರವಾದ ಹೇಳಿಕೆಯನ್ನು ನಾನು ಈ ಸದನದಲ್ಲಿ ಕೊಡುತ್ತೇನೆ.

ಶ್ರೀ ಬಿ. ಸೋಮಶೇಖರ್ : ಈ ಬೀಜ ವಿತರಣೆ ಮಾಡುವುದರಲ್ಲಿ ಅವ್ಯವಹಾರವಾಗಿದೆ ಇದರಲ್ಲಿಯೂ ಹಣ ಮಾಡುವಂತಹ ಒಂದು ದಂಧೆ ನಡೆದಿದೆ ಅಕ್ಕಿ ಕಾಳು ಬೇರೆ ಮಿಲ್‌ಗಳಿಗೆ ಹೋಗುವುದು ಬೇರೆ, ಕಳ್ಳ ಸಾಕಾಗಣಿಕೆ ಮಾಡುವುದು ಬೇರೆ. ಬಿತ್ತನೆ ಬೀಜದಲ್ಲು ಸಹ ಅವ್ಯವಹಾರವಾಗಿದೆ ಎನ್ನತಕ್ಕಂಥಾದ್ದು ಬಂದಿದೆ. ಸಬ್ಸಿಡಿಯಲ್ಲಿ ಬಿತ್ತನೆ ಬೀಜ ಕೊಡತಕ್ಕಂಥಾದ್ದನ್ನು ಕಡಿಮೆ ದರದಲ್ಲಿ ಕೊಡಬೇಕು. ಮಾನ್ಯ ಶ್ರೀನಿವಾಸಗೌಡರು ಹೇಳಿದ ಹಾಗೆ ಕೇವಲ ಶೇಂಗಾ ಬೀಜ ಒಂದೇ ಅಲ್ಲ, ಎಲ್ಲಾ ಬಿತ್ತನೆ ಬೀಜಗಳ ಪರಿಸ್ಥಿತಿಯೂ ಇದೇ ಆಗಿದೆ. ಕಡಲೆಕಾಯಿ ಬೆಲೆಯೇ 23 ರೂಪಾಯಿಗಳಾದರೆ, ಬಿತ್ತನೆ ಬೀಜದ ಬೆಲೆ ಎಷ್ಟಾಗುತ್ತದೆ. ಆದ್ದರಿಂದ, ಇದರ ಬಗ್ಗೆ ಸಂಪೂರ್ಣವಾಗಿ ವಿಚಾರಣೆಯಾಗಬೇಕು. ಇದರಲ್ಲಿ ಏನು ದಂಧೆಯಾಗಿದೆ ಎನ್ನುವುದನ್ನು ನಾವು ಹೇಳಬೇಕಾಗುತ್ತದೆ.

ರೈತ ಕಾಯಕ ಕೆರೆ ಯೋಜನೆಯಲ್ಲೂ ಏನಾಗಿದೆ ಎಂದು ವಿಚಾರಣೆಯಾಗಬೇಕಾಗಿದೆ. ಈ ಯೋಜನೆಯಲ್ಲಿ 180 ಕೆರೆಗಳನ್ನು ತೆಗೆದುಕೊಂಡಿದ್ದೇವೆ ಎಂದು ಕೇಳಿದಿರಿ. ಅದರಲ್ಲಿ ಎಂಟು ಕೆರೆಗಳು ಮಾತ್ರ ಸಂಪೂರ್ಣವಾಗಿ ಮುಗಿದಿವೆ. 69 ಕೆರೆಗಳನ್ನು ಲ್ಯಾಂಡ್ ಆರ್ಮಿ ಕಾರ್ಪೊರೇಷನ್ನಿನವರಿಗೆ ಕೊಟ್ಟಿದ್ದೀರಿ. 120 ಕೆರೆಗಳನ್ನು ಸಣ್ಣ ನೀರಾವರಿ ಇಲಾಖೆಯವರು ಮತ್ತು ಗುತ್ತಿಗೆದಾರರು ಮಾಡಿದ್ದಾರೆ. ಇದಕ್ಕೆ 48 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಬೇಕು ಎಂದು ಹೇಳಿದ್ದರೂ ಕೂಡ ಎರಡು ಕೋಟಿ ರೂಪಾಯಿ ಮಾತ್ರ ಬಿಡುಗಡೆಯಾಗಿದೆ ಎನ್ನುವ ಮಾಹಿತಿ ನಮಗಿದೆ. 46 ಕೋಟಿ ರೂಪಾಯಿ ಇನ್ನೂ ಬಿಡುಗಡೆಯಾಗಿಲ್ಲ. ಹೀಗಾಗಿ, ಹಣ ಬಿಡುಗಡೆಯಾಗಿದೆ, ಸರಿಯಾಗಿ ಅಕ್ಕಿ ವಿತರಣೆಯಾಗದೇ ಯಾವ ಕೆರೆಗಳಲ್ಲಿಯೂ ಹೂಳೆತ್ತಿಲ್ಲ, ಕೆಲವು ಕಡೆ ಕೆರೆಗಳಲ್ಲಿ ನೀರು ಬಂದಿದೆ. ಈ ವಿಚಾರದಲ್ಲಿ ಕಳ್ಳ ಬಿಲ್ಲುಗಳಾಗಿವೆ. ಒಂದು ಲಕ್ಷ ರೂಪಾಯಿ ಇಟ್ಟಿದ್ದಂಥ ಕಡೆಗಳಲ್ಲಿ 18–20 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿರಬಹುದು. ಆದರೆ ಒಂದು ಲಕ್ಷ, ಎರಡು ಲಕ್ಷ ರೂಪಾಯಿಗಳು ಖರ್ಚಾಗಿದೆ ಎನ್ನುವ ಸುಳ್ಳು ಲೆಕ್ಕವನ್ನು ಬರೆಯುವ ಮೂಲಕ ಹಣ ದುರುಪಯೋಗವಾಗಿದೆ ಎನ್ನುವ ಮಾಹಿತಿ ನಮಗಿದೆ. ಈ ಬಗ್ಗೆ ತಾವು ವಿವರವಾದಂಥ ವಿಚಾರಣೆಯನ್ನು ಮಾಡಿದ್ದರೆ, ಅದನ್ನು ಸದನದಲ್ಲಿ ಹೇಳಬೇಕು ಎಂದು ನಾನು ಹೇಳುತ್ತೇನೆ. ಒಂದು ಲಕ್ಷದ ಹದಿಮೂರು ಸಾವಿರ ಕಾಮಗಾರಿಗಳು ಕಂಪ್ಲೀಟ್ ಆಗಿವೆ. ಹತ್ತು ಕೋಟಿ ಮ್ಯಾನ್ ಪವರ್ ಸೃಷ್ಟಿಯಾಗಿದೆ ಎಂದು ಹೇಳಿದ್ದೀರಿ. ಅದರಲ್ಲಿ ಎಷ್ಟಾಗಿದೆ ಎನ್ನುವ ಸರಿಯಾದ ಮಾಹಿತಿಯನ್ನು ತಾವು ಕೊಡಬೇಕಾಗುತ್ತದೆ. ಏಕೆಂದರೆ, ಅನೇಕ ತಾಲ್ಲೂಕುಗಳಲ್ಲಿ, ಅನೇಕ ಪ್ರದೇಶಗಳಲ್ಲಿ ಅವ್ಯವಹಾರವಾಗಿದೆ ಎನ್ನುವುದು ತಿಳಿದು ಬಂದಿದೆ. ಬಿಜಾಪುರದಲ್ಲಿ ನಿನ್ನೆಯಿಂದ ಒಂದು ಧರಣಿ ಪ್ರಾರಂಭವಾಗಿದೆ. ಎರಡು ವರ್ಷಗಳ ಹಿಂದೆ ಇಂಡಿ ತಾಲ್ಲೂಕಿನ ಗುಬ್ಬೇವಾಡಿಯಲ್ಲಿ ಸುಮಾರು 15 ಎಕರೆ ಜಮೀನಿನಲ್ಲಿ ನೀರು ಕೊರೆದು, ಅದಕ್ಕೆ ಪರಿಹಾರವನ್ನು ಕೊಡುತ್ತೇವೆಂದು ವಿಧಾನ ಪರಿಷತ್ತಿನಲ್ಲಿ ಎರಡು ವರ್ಷಗಳ ಹಿಂದೆ ಮಾನ್ಯ ನೀರಾವರಿ ಸಚಿವರು ಭರವಸೆಯನ್ನು ಕೊಟ್ಟಿದ್ದರು. ಎರಡು ವರ್ಷಗಳಾದರೂ ಇವತ್ತಿಗೂ ಪರಿಹಾರವನ್ನು ಕೊಟ್ಟಿಲ್ಲವಾದ್ದರಿಂದ ಇವತ್ತು ಬಿಜಾಪುರದಲ್ಲಿ ಗುಬ್ಬೇವಾಡಿ ಗ್ರಾಮದ ಎಲ್ಲಾ ರೈತರು ಧರಣಿ ಕುಳಿತಿದ್ದಾರೆ. ಕೌನ್ಸಿಲ್‌ನಲ್ಲಿ ಕೊಟ್ಟಂಥ ಆಶ್ವಾಸನೆ ಇನ್ನೂ ಈಡೇರಿಲ್ಲ. ಅದನ್ನು ಯಾವಾಗ ಬಿಡುಗಡೆ ಮಾಡುತ್ತೀರಿ ಎಂದು ಹೇಳಬೇಕು. ಅದನ್ನು ಆದಷ್ಟು ಬೇಗ ಬಿಡುಗಡೆ ಮಾಡಬೇಕು ಎಂದು ನಾನು ಆಗ್ರಹ ಮಾಡುತ್ತಿದ್ದೇನೆ. ಸರ್ಕಾರ ಇವತ್ತು ಇನ್ನೊಂದು ಕೆಟ್ಟ ಸಂಪ್ರದಾಯವನ್ನು ಹಾಕಿದೆ. ಅದೇನೆಂದರೆ, ಮಳೆ ಬರುತ್ತಿಲ್ಲವಾದ್ದರಿಂದ ಮಳೆ ಬರುವುದಕ್ಕೆ ದೇವರಲ್ಲಿ ಪೂಜೆ ಮಾಡಿ, ಆಕಾಶದಲ್ಲಿ ಮಳೆಯನ್ನು ಸುರಿಸತಕ್ಕಂಥಾದ್ದಕ್ಕೆ ಒಂದು ಮೂಢನಂಬಿಕೆಯ ಕೆಲಸವನ್ನು ಮಾಡಿದೆ. ನಮಗೆಲ್ಲಾ ಗೊತ್ತಿರತಕ್ಕಂಥಾದ್ದು, ಸರ್ಕಾರ ಸಂವಿಧಾನಾತ್ಮಕವಾಗಿ ಕೆಲಸ ಮಾಡಬೇಕಾಗಿದೆ ಎನ್ನುವುದು. ಮಂತ್ರಿಗಳಾಗಲೀ, ಶಾಸಕರಾಗಲೀ ಪ್ರಮಾಣ ವಚನ ಸ್ವೀಕರಿಸತಕ್ಕಂಥಾದ್ದು ಹೇಗೆಂದರೆ, ನಾವು ಸಂವಿಧಾನದ ಅಡಿಯಲ್ಲಿ ಕೆಲಸ ಮಾಡುತ್ತೇವೆ. ಆಡಳಿತವನ್ನು ಮಾಡುತ್ತೇವೆ. ಸರ್ಕಾರವನ್ನು ನಡೆಸುತ್ತೇವೆ ಎಂದು ಪ್ರತಿಯೊಬ್ಬರೂ ಪ್ರಮಾಣ ಮಾಡುತ್ತೇವೆ. ಹೀಗೆಂದು ಮಂತ್ರಿಗಳು ಗವರ್ನರ್‌ರವರ ಆಫೀಸಿನಲ್ಲಿ ಮಾಡುತ್ತಾರೆ. ಶಾಸಕರುಗಳು ಇಲ್ಲಿ ಮಾಡುತ್ತಾರೆ. ಆದ್ದರಿಂದ, ಸರ್ಕಾರದ ಎಲ್ಲಾ ಸುತ್ತೋಲೆಗಳು ಮತ್ತು ಆದೇಶಗಳನ್ನು ಸಂವಿಧಾನದ ಅಡಿಯಲ್ಲಿ ಹೊರಡಿಸಬೇಕಾಗಿದೆ. ಆದರೆ ಇಲ್ಲಿ ಮುಜರಾಯಿ ಇಲಾಖೆಯಿಂದ ಒಂದು ಸುತ್ತೋಲೆ ಹೊರಡಿಸಿದ್ದಾರೆ. "ಕರ್ನಾಟಕ

ರಾಜ್ಯದಲ್ಲಿ ಒಳ್ಳೆಯ ಮಳೆ ಹಾಗೂ ಉತ್ತಮ ಬೆಳಗಾಗಿ 5.6.03ರಂದು ಕೊಲ್ಲೂರು ಮೂಕಾಂಬಿಕಾ ದೇವಸ್ಥಾನದಲ್ಲಿ ಚಂಡಿಹೋಮ, ಪರ್ಜನ್ಯ ಜಪ ಇತ್ಯಾದಿ ವಿಶೇಷ ಪೂಜೆ ನಡೆಸುವ ಬಗ್ಗೆ" ಎಂದು ಒಂದು ಸುತ್ತೋಲೆ ಇಷ್ಯೂ ಮಾಡಿದ್ದಾರೆ. ಇದನ್ನು ನೋಡಿ ನನಗೆ ನಗಬೇಕೋ, ಅಳಬೇಕೋ, ಏನು ಮಾಡಬೇಕೆಂದು ಗೊತ್ತಾಗುತ್ತಿಲ್ಲ Hi-tech Government has issued this superstitious order. I would like to know from the Government can a Government order or circular be issued on superstitious matter. Is there any provision in the Constitition? It is a shame on the part of the Government, to have issued this order.

ಶ್ರೀ ಶಿವಾನಂದ ಎಸ್ ಪ್ಾಟೀಲ್ : ಮಾನ್ಯ ಛೇರ್ಮನ್‌ರವರೇ, ತಮ್ಮ ಜಿಲ್ಲೆಯ ಒಬ್ಬರು ಮಂತ್ರಿಗಳು, ಮಳೆ ಬರಲಿ ಎಂದು ದೇವರ ಗುಡಿಯ ಸುತ್ತ ಉರುಳು ಸೇವೆ ಮಾಡಿದರು.

ಶ್ರೀ ಬಿ. ಸೋಮಶೇಖರ್ : ರಾಜಕಾರಣಿಗಳು ಏನಾದರೂ ಮಾಡಿಕೊಳ್ಳಲಿ. ಏಕೆಂದರೆ ಇವರು ಜನರನ್ನು ತೃಪ್ತಿಪಡಿಸಬೇಕಾಗುತ್ತದೆ. ಅದಕ್ಕಾಗಿ ಕೆಲವು ಸಲ ಏನಾದರೂ ನಾಟಕ ಮಾಡಬೇಕಾಗುತ್ತದೆ. ಆದರೆ ದೇವಸ್ಥಾನಗಳಲ್ಲಿ ಹೋಮ ನಡೆಯುತ್ತದೆ ಎಂದು ಐ.ಎ.ಎಸ್. ಅಧಿಕಾರಿಗಳನ್ನು ಕಾಯಿಸಿ, ಜಿಲ್ಲಾಧಿಕಾರಿಗಳು ದೇವಸ್ಥಾನದ ಹತ್ತಿರ ಹೋಗಿ ಅಲ್ಲಿ ಕಾಯ್ದು ನಂತರ ವಾಪಸ್ಸು ಬಂದಿರತಕ್ಕಂಥ ನಿದರ್ಶನಗಳೂ ಇವೆ. ಮೂಕಾಂಬಿಕಾ ದೇವಸ್ಥಾನದಲ್ಲಿ ಚಂಡಿಹೋಮ ಎಂದು ಹೇಳುವ ಬದಲು ನೀವು ಚರ್ಚ್‌ನಲ್ಲಿ ಪ್ರೇಯರ್ ಮಾಡಬೇಕು ಎಂದು ಏಕೆ ಹಾಕಲಿಲ್ಲ? ಮಸೀದಿಗಳಲ್ಲಿ ನಮಾಜ್ ಮಾಡಬೇಕು ಎಂದು ಏಕೆ ಹಾಕಲಿಲ್ಲ? ಇದು ಸೆಕ್ಯುಲರ್ ಗವರ್ನಮೆಂಟೇ ಎಮದು ನೀವೇ ಹೇಳಿ. ನಮ್ಮದು ಸೆಕ್ಯುಲರ್ ಪಾರ್ಟಿ, ಸೆಕ್ಯುಲರ್ ಗವರ್ನಮೆಂಟ್, ಸೆಕ್ಯುಲರ್ ಆಡಳಿತ ಎಂದು ಹೇಳುತ್ತೀರಲ್ಲಾ, ಸೆಕ್ಯುಲರ್ ಎಂದು ಹೇಳುವವರು ಮಾಡುವ ಕೆಲಸವೇ ಇದು? ಸಂವಿಧಾನದಲ್ಲಿ ಸೆಕ್ಯುಲರ್, ಸೋಷಿಯಲ್ ಎಂದೆಲ್ಲಾ ಇದೆ. ಮೂಕಾಂಬಿಕಾ ದೇವಸ್ಥಾನದಲ್ಲಿ ಪೂಜೆ ಮಾಡಿ, ಅದಕ್ಕೆ ತಗಲತಕ್ಕಂಥ ಹತ್ತು ಸಾವಿರ ರೂಪಾಯಿಗಳ ವೆಚ್ಚವನ್ನು ದೇವಸ್ಥಾನದ ಹಣದಲ್ಲಿ ಭರಿಸಿ ಎಂದು ನೀವು ಆದೇಶ ಹೊರಡಿಸಿದ್ದೀರಿ. ಚರ್ಚ್‌ನಲ್ಲಿ ಪ್ರೇಯರ್ ಮಾಡಿ ಮಸೀದಿಯಲ್ಲಿ ನಮಾಜ್ ಮಾಡಿ ಎಂದು ಏಕೆ ಇಷ್ಯೂ ಮಾಡಲಿಲ್ಲ? ಈ ಸರ್ಕಾರ ಸೆಕ್ಯುಲರ್ ಗವರ್ನಮೆಂಟೇ ಅಥವಾ ಸೂಪರ್‌ಸ್ಟೀಷಯಸ್ ಗವರ್ನಮೆಂಟೇ ಎನ್ನುವುದು ನನ್ನ ಒಂದು ಅನುಮಾನ. ಸರ್ಕಾರಕ್ಕೆ ನಾಚಿಕೆ, ಮಾನ ಮರ್ಯಾದೆ ಎನ್ನುವುದಿದ್ದರೆ, ಇದೊಂದಕ್ಕೇ ರಾಜೀನಾಮೆ ಕೊಡಬೇಕು. ಇದನ್ನು ಬಹಳ ದುಃಖದಿಂದ ಹೇಳಬೇಕಾಗಿದೆ. Can an order be issued like this?

ಶ್ರೀ ಹೆಚ್.ಎಂ. ರೇವಣ್ಣ : ಮುಖ್ಯಮಂತ್ರಿಗಳು ಮೂರು ಕಡೆಗಳಲ್ಲೂ ಪೂಜೆ ಮಾಡಿರುವಂಥಾದ್ದನ್ನು ನೋಡಿದ್ದೇವೆ.

ಶ್ರೀ ಬಿ. ಸೋಮಶೇಖರ್ : ಖಾಸಗಿಯಾಗಿ ನಾವೆಲ್ಲರೂ ದೇವಸ್ಥಾನಗಳಿಗೆ ಹೋಗುತ್ತೇವೆ. ಪೂಜೆ ಮಾಡುತ್ತೇವೆ. ಅದು ಅವರವರ ವೈಯಕ್ತಿಕವಾದಂಥ ಭಕ್ತಿ. ಆದರೆ ಒಂದು ರಿಲಿಜಿಯನ್ ಮುಖಾಂತರ ಆದೇಶದ ಪ್ರಕಾರ ಆಡಳಿತವನ್ನು ನಡೆಸುವುದು ಇದೆಯಲ್ಲಾ, ಇದು ಕರ್ನಾಟಕ ಇತಿಹಾಸದಲ್ಲಿ ಯಾವುದಾದರೂ ಇದೆಯೇ? ಕೆಲವು ಸಾರಿ ನಾವು ಹೋಗಿ ಭಾಷಣಗಳನ್ನು ಮಾಡಬಹುದು. ತಾವೆಲ್ಲಾ ಪೂಜೆ ಮಾಡಿ, ಸೇವೆ ಮಾಡಿ ಎಂದು ಖಾಸಗಿಯಾಗಿ ಹೇಳಬಹುದು.

ವೈಯಕ್ತಿಕವಾಗಿ ನಾವೂ ಮಾಡಬಹುದು. ಈಗ ಕೆಲವು ಮಂತ್ರಿಗಳು ವೈಯಕ್ತಿಕವಾಗಿ ನಮಾಜ್ ಮಾಡಲು ಹೋಗುತ್ತಾರೆ. ನಾವೂ ದೇವಸ್ಥಾನಗಳಿಗೆ ಪೂಜೆ ಮಾಡಲು ಹೋಗುತ್ತೇವೆ. ಆದರೆ ಇಲ್ಲಿ ಆದೇಶ ಹೊರಡಿಸುತ್ತೇವೆಯೇ? ಮುಸ್ಲಿಂ ಮಂತ್ರಿಗಳು ಹೋಗಿ ನಮಾಜ್ ಮಾಡಬೇಕು, ಕ್ರಿಶ್ಚಿಯನ್ ಮಂತ್ರಿಗಳು ಪ್ರೇಯರ್ ಮಾಡಬೇಕು ಎಂದು ಹೇಳುತ್ತೇವೆಯೇ? ಹೇಳುವುದಿಲ್ಲ. ಇವತ್ತು ಈ ಸೂಪರ್‌ಸ್ಟೀಷಿಯಸ್ ಆರ್ಡರನ್ನು ಇಷ್ಯೂ ಮಾಡುವ ಮೂಲಕ ಸರ್ಕಾರ ಸಂವಿಧಾನವನ್ನು ಉಲ್ಲಂಘನೆ ಮಾಡಿದೆ ಎನ್ನುವುದು ನನ್ನ ಆರೋಪ.

ಶ್ರೀ ಕೆ. ಶ್ರೀನಿವಾಸಗೌಡ (ಕುಡುವನಹಳ್ಳಿ) : ಈ ವಿಷಯದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಚರಿತ್ರೆಯೇ ಇದೆ. ಇವತ್ತು ಆಯೋಧ್ಯೆಯಲ್ಲಿ ಇಷ್ಟೆಲ್ಲಾ ಗಲಾಟೆಯಾಗುತ್ತದೆ. ಅದಕ್ಕೆ ಅವತ್ತು ಅಲ್ಲಿ ಪೂಜೆ ಮಾಡಿದಂಥವರು ಅಂದು ಪ್ರಧಾನ ಮಂತ್ರಿಗಳಾಗಿದ್ದಂಥ ರಾಜೀವ್ ಗಾಂಧಿಯವರು. ಆದ್ದರಿಂದ, ಕಾಂಗ್ರೆಸ್‌ಗೆ ಆ ಚರಿತ್ರೆ ಇಲ್ಲ ಎಂದು ಹೇಳಲು ಹೋಗಬೇಡಿ. ಕಾಂಗ್ರೆಸ್‌ಗೆ ಆ ಚರಿತ್ರೆಯೂ ಇದೆ. ರಾಮಮಂದಿರದಲ್ಲಿ ಅದನ್ನು ಹುಟ್ಟಿ ಹಾಕಿದವರೇ ಕಾಂಗ್ರೆಸ್‌ನವರು.

ಶ್ರೀ ಸಿ.ಆರ್. ಸಗೀರ್ ಅಹಮದ್ : ಅದನ್ನು ಒಡೆಸಲೂ ಕಾರಣಕರ್ತರು ನೀವೇ ಅಲ್ಲವೇ?

ಶ್ರೀ ಕೆ. ಶ್ರೀನಿವಾಸಗೌಡ (ಕುಡುವನಹಳ್ಳಿ) : ಅದಕ್ಕೂ ನೀವೇ ಕಾರಣ, ನಮ್ಮ ಸರ್ಕಾರವೇ ಅದಕ್ಕೆ ಕಾರಣ.

ಶ್ರೀ ಸಿ.ಆರ್. ಸಗೀರ್ ಅಹಮದ್ : ನೀವು ಇತಿಹಾಸವನ್ನು ಹೇಳುವುದಾದರೆ ಸ್ವಲ್ಪ ಸರಿಯಾಗಿ ಹೇಳಿ, ವಿ.ಪಿ. ಸಿಂಗ್‌ರವರ ಹೆಸರನ್ನು ಪದೇ ಪದೇ ತೆಗೆದುಕೊಳ್ಳುವಂಥ ನೀವುಗಳು, ಈ ರಾಜ್ಯಾದ್ಯಂತ ರಥ ಯಾತ್ರೆಗೆ ಅನುಮತಿ ಕೊಟ್ಟವರು ಯಾರೆಂದು ಹೇಳಿ.

ಶ್ರೀ ಎಸ್.ಎಸ್. ಪಾಟೀಲ್ : ಮಸೀದಿಯನ್ನು ಕೆಡವುವ ಮುನ್ನ ಕುಳಿತುಕೊಂಡು ಅದನ್ನು ಟಿ.ವಿ.ಯಲ್ಲಿ ನೋಡಿದವರು ನೀವು.

ಶ್ರೀ ಸಿ.ಆರ್. ಸಗೀರ್ ಅಹಮದ್ : ಯಾರು?

ಶ್ರೀ ಎಸ್.ಎಸ್. ಪಾಟೀಲ್ : ಮಸೀದಿಯನ್ನು ಕೆಡವುತ್ತಿರುವಾದ ನಿಮ್ಮ ಪ್ರಧಾನ ಮಂತ್ರಿಗಳು ಅದನ್ನು ಟಿ.ವಿ.ಯಲ್ಲಿ ನೋಡುತ್ತಿದ್ದರು.

ಶ್ರೀ ಸಿ.ಆರ್. ಸಗೀರ್ ಅಹಮದ್ : ಯಾರು ಎಂದು ಎಲ್ಲರಿಗೂ ಗೊತ್ತಿದೆ; ಈಗ ಏಕೆ ಸುಮ್ಮನೆ ಸೆಕ್ಯುಲರ್ ಎಂದು ಹೇಳಿಕೊಳ್ಳಲು ಹೋಗುತ್ತೀರಿ?

ಶ್ರೀ ಎಸ್.ಎಸ್. ಪಾಟೀಲ್ : ಮಸೀದಿ ಕೆಡವುದನ್ನು ನಿಮ್ಮ ಪ್ರಧಾನ ಮಂತ್ರಿಗಳು ಟಿ.ವಿ.ಯಲ್ಲಿ ನೋಡುತ್ತಿದ್ದರು. ಹೀಗಾಗಿ ಮಸೀದಿ ಕೆಡವುದರಲ್ಲಿ ನೀವೂ ಸೇರಿದ್ದೀರಿ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಸುಮ್ಮನೆ ಆ ತರಹವೆಲ್ಲಾ ಏಕೆ ಹೇಳುತ್ತೀರಿ? ಸರ್ಕಾರದಿಂದ ಆದೇಶ ಹೊರಡಿಸಿದ್ದಾರೆ ಎಂದು ಮಾನ್ಯ ಸೋಮಶೇಖರ್‌ರವರು ಹೇಳಿದರು. ಆ ದೇವಾಲಯಗಳು ಮುಜರಾಯಿ ಇಲಾಖೆಗೆ ಸೇರಿರುವುದರಿಂದ, ರಾಜ್ಯದ ಹಿತದೃಷ್ಟಿಯಿಂದ ಸರ್ಕಾರ ಆ ಒಂದು ಆದೇಶವನ್ನು ಹೊರಡಿಸಿರಬಹುದು. ರಾಜ್ಯ ಬರವನ್ನು ಎದುರಿಸುತ್ತಿರುವಂಥ ಸಂದರ್ಭದಲ್ಲಿ ಎಲ್ಲಾ ಧರ್ಮದವರೂ ಮಳೆ ಬರಬೇಕೆಂದು ಹೇಳುತ್ತಾರೆ. ಮಳೆ ಬರಬೇಕು ಎಂದು

ಪ್ರಾರ್ಥನೆ ಮಾಡುವುದರಲ್ಲಿ ತಾರತಮ್ಯ ನಡೆಯುತ್ತಿದೆ. ಅಂಥ ಒಂದು ಆದೇಶವನ್ನು ಹೊರಡಿಸಿ ನೀವು ತಪ್ಪು ಮಾಡಿದ್ದೀರಿ, ನೀವು ಸೆಕ್ಯುಲರ್ರೇ ಎಂದು ಹೇಳುವುದಾದರೆ, ಯಾರು ಸೆಕ್ಯುಲರ್ ಎನ್ನುವುದನ್ನು ನೀವಾದರೂ ಹೇಳಬೇಕಲ್ಲವೇ?

ಶ್ರೀ ಕೆ. ಶ್ರೀನಿವಾಸಗೌಡ (ಕುಡುವನಹಳ್ಳಿ) : ಅಯೋಧ್ಯೆಯಲ್ಲಿ ಪೂಜೆ ಮಾಡಿದವರೂ ನೀವೇ, ಅಲ್ಲಿ ಮಸೀದಿಯನ್ನು ಒಡೆಸಿದವರೂ ನೀವೇ.

ಶ್ರೀ ಸಿ.ಆರ್. ಸಗೀರ್ ಅಹಮದ್ : ನೀವು ಖಾಲಿ ನೋಡಿದವರಷ್ಟೇ. ಸ್ವಾಮಿ, ನನಗೂ ನಿಮ್ಮಷ್ಟೇ ಅನುಭವವಿದೆ. ಈ ಸದನದಲ್ಲಿ ಇದ್ದಂಥ ಕೇವಲ ಮೂರು ಜನ ಬಿ.ಜೆ.ಪಿ ಸದಸ್ಯರನ್ನು, ಇವತ್ತು 48ಕ್ಕೆ ಏರಿಸದವರೇ ನೀವು. ಬೇರೆಯವರಿಗೆ ಏಕೆ ಹೇಳಲು ಹೋಗುತ್ತೀರಿ?

ಶ್ರೀ ಸಿ. ಚೆನ್ನಿಗಪ್ಪ : ಅದನ್ನು ಮಾಡಿದವರು ಯಾರು ಎಂದು ಈ ರಾಜ್ಯದ ಜನರಿಗೆ ಗೊತ್ತಿದೆ. ಅದನ್ನು ನೀವು ಹೇಳಬೇಕಾದ್ದುದಿಲ್ಲ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾಡಿದವರು ನೀವೇ. ಸುಮ್ಮನೆ ಬೇರೆಯವರಿಗೆ ಏಕೆ ಹೇಳಲು ಹೋಗುತ್ತೀರಿ.

ಶ್ರೀ ಆರಗ ಜ್ಞಾನೇಂದ್ರ : ಹೋಗಲಿ ಬಿಡಿ. ಆ ಶ್ರೀರಾಮಚಂದ್ರ ನಿಮ್ಮಿಬ್ಬರಿಗೂ ಒಳ್ಳೆಯ ಮನಸ್ಸು ಕೊಡಲಿ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಅಲ್ಲ ಅಲ್ಲ, ಆ ಶ್ರೀರಾಮಚಂದ್ರ ನಿಮಗೆ ಮಾತ್ರ ಒಳ್ಳೆಯ ಮನಸ್ಸು ಕೊಟ್ಟಿದ್ದಾನೆಯೇ? ಅದು ನಿಮ್ಮ ಸ್ವತ್ತೇ? ಇಲ್ಲ ಶ್ರೀರಾಮಚಂದ್ರ ನಿಮ್ಮ ಆಸ್ತಿಯೇ? ಶ್ರೀರಾಮಚಂದ್ರ ನಮ್ಮ ಆಸ್ತಿಯೂ ಹೌದು. ನಿಮ್ಮ ಆಸ್ತಿ ಅಲ್ಲ.

ಗೊಂದಲ

ಶ್ರೀ ಮಲ್ಲಿಕಾರ್ಜುನ ಖರ್ಗೆ : ಈಗ ಶ್ರೀರಾಮ ಇಬ್ಬರಿಗೆ ಆಶೀರ್ವಾದ ಮಾಡಲಿ ಎಂದು ಹೇಳಿ ಶ್ರೀ ಆರಗ ಜ್ಞಾನೇಮದ್ರರವರು ಆಶೀರ್ವಚನ ಮಾಡಿದರು. ಆದರೆ ಶ್ರೀರಾಮ ಸಧ್ಯಕ್ಕೆ ವನಚಾಸದಲ್ಲಿದ್ದಾನೆ. ಇದು ಯಾವುದೂ ಕೂಡ ನೋಡುತ್ತಿಲ್ಲ.

ಶ್ರೀ ಆರಗ ಜ್ಞಾನೇಂದ್ರ : ಎಲ್ಲಾ ಸೇರಿ ಮನೆಯನ್ನೇ ಕಟ್ಟಿಬಿಡೋಣ ಸರ್. ವನವಾಸಕ್ಕೆ ಬೇಡ., ಅವನು ಗುಡಿಗೆ ಬರಲಿ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಶ್ರೀ ರಾಮಚಂದ್ರರವರು ವನವಾಸಕ್ಕೆ ಹೋಗಿದ್ದಾರೆ ಇವರ ಕಾಟದಿಂದಾಗಿಯೇ.

ಶ್ರೀ ಆರಗ ಜ್ಞಾನೇಂದ್ರ : ಬೀಳಿಸಿಬಿಟ್ಟಿರಿ, ಕಟ್ಟುವುದಕ್ಕೆ ಬಿಡಲಿಲ್ಲ. ಹಾಗಾಗಿ ವನವಾಸವಾಗಿದೆ. ನೀವು ಕಟ್ಟುವುದಕ್ಕೆ ಬಿಟ್ಟುಬಿಟರೆ ಗುಡಿಗೆ ಬಂದುಬಿಡುತ್ತಾನೆ.

ಶ್ರೀ ಶಿವಾನಂದ ಎಸ್. ಪಾಟೀಲ್ : ಸರ್ಕ್ಯುಲರ್ ಹೊರಡಿಸಿರುವ ವಿಚಾರದ ಬಗ್ಗೆ ಮಾನ್ಯ ರಂಗನಾಥ್‌ರವರ ಅಭಿಪ್ರಾಯ ಕೇಳಬೇಗಿತ್ತು. ಏಕೆಂದರೆ ಅವರು ಬಹಳ ಹಿರಿಯ ಸದಸ್ಯರು, ಅವರು ಒಂದು ನಿಮಿಷ ಹೇಳಿಬಿಡಲಿ ಶ್ರೀ ಸಗೀರ್ ಅಹಮದ್‌ರವರು ಏನೋ ಜಸ್ಟಿಫೈ ಮಾಡಿಕೊಂಡುಬಿಟ್ಟರು. ಶ್ರೀ ರಂಗನಾಥ್‌ರವರು ಜಸ್ಟಿಫೈ ಮಾಡಿಕೊಳ್ಳಲಿ.

ಶ್ರೀ ಬಿ. ಸೋಮಶೇಖರ್ : ಶ್ರೀ ಸಗೀರ್ ಅಹಮದ್‌ರವರು ಇದನ್ನು ಡಿಫೆಂಡ್ ಮಾಡಿಕೊಳ್ಳುತ್ತಾರೇಂದು ನಾನು ತಿಳಿದುಕೊಂಡಿರಲಿಲ್ಲ. ಐಯಾಂ ವೆರಿ ಸಾರಿ. ಮೊದಲನೆಯದಾಗಿ,

ಈ ಇಶ್ಯೂ ನಮ್ಮದೇ ಒಂದು ಪ್ರೈವೇಟ್ ವಿಷಯವಾಗುತ್ತದೆ ಒಂದು ವೇಳೆ ಮೂಕಾಂಬಿಕಾ ದೇವಸ್ಥಾನದಲ್ಲಿ ಚಂಡಿ ಹೋಮ ಮಾಡಿಸಿ, ಚರ್ಚ್‌ನಲ್ಲಿ ಪ್ರೇಯರ್ ಮಾಡಿ, ಗುರುದ್ವಾರಾದಲ್ಲಿ ಒಂದು ಪ್ರೇಯರ್ ಮಾಡಿ, ಮಸೀದಿಯಲ್ಲಿ ನಮಾಜ್ ಮಾಡಿ ಎಂದು ಸರ್ಕಾರದ ಮುಖಾಂತರ ಸರ್ಕ್ಯೂಲರ್ ಹೊರಡಿಸಿದ್ದರೆ, ತಪ್ಪು ಅದನ್ನೂ ಹೊರಡಿಸಬಾರದಾಗಿತ್ತು ಆದರೂ ಅದನ್ನು ಸ್ವಲ್ಪವಾದರೂ ಒಪ್ಪಬಹುದಾಗಿತ್ತು. ಇವತ್ತು ಸರ್ಕಾರ ಅದೆಲ್ಲವನ್ನೂ ಬಿಟ್ಟು, ಅಂದರೆ ಮೂಕಾಂಬಿಕಾ ದೇವಸ್ಥಾನದಲ್ಲಿ ಮಾತ್ರ ಪೂಜೆ ಮಾಡಿದರೆ ಮಳೆ ಬರುತ್ತದೆ. ಇನ್‌ಫೆಂಟ್ ಜೀಸಸ್ ಚರ್ಚ್‌ನಲ್ಲೊ, ಅಥವಾ ಇನ್ಯಾವುದಾದರೂ ಮಸೀದಿಯಲ್ಲಿ ನಮಾಜ್ ಮಾಡಿದರೆ ಬರುವುದಿಲ್ಲ ಎಂದು ಅರ್ಥ ತಾನೆ? ನೀವೇ ಒಂದು ಭಾಗವನ್ನು ಮಾಡಿ ಇದನ್ನು ಮಾಡಿರುವ ಹಾಗೆ ಇದು ಆಗಿದೆ. ನೀವೇ ಇದರಲ್ಲಿ ಒಂದು ಧರ್ಮ ಹೆಚ್ಚು. ಒಂದು ಧರ್ಮ ಕಮ್ಮಿ ಎಂದು ಗುರುತಿಸಿರತಕ್ಕಂಥದ್ದು ನಿಮ್ಮ ಸಂಪ್ರದಾಯವೇ? ನಿಮ್ಮ ಕಾಂಗ್ರೆಸ್ ಪಕ್ಷಕ್ಕೆ, ನಿಮ್ಮ ಸರ್ಕಾರಕ್ಕೆ ಇದು ಒಳ್ಳೆಯ ಶೋಭೆ ತರುತ್ತದೆಯೇ?

ಶ್ರೀ ಸಿ.ಆರ್. ಸಗೀರ್ ಅಹಮದ್ : ಇದು ಮೂಕಾಂಬಿಕಾ ದೇವಾಲಯದಲ್ಲಿ ಇರುವಂಥ ದೇವರ ಮೇಲೆ ನಮಗೆ ನಂಬಿಕೆ ಜಾಸ್ತಿ. ಇದು ಮುಜರಾಯಿ ದೇವಸ್ಥಾನವಾಗಿರುವುದರಿಂದ ಸರ್ಕಾರದ ಆದೇಶವನ್ನು ಹೊರಡಿಸುವುದರ ಮುಖಾಂತರ ಭಕ್ತಾದಿಗಳಿಂದ ಮಳೆ ಭರಿಸುವಂತೆ ಪ್ರಾರ್ಥನೆ ಮಾಡಿರುವಂಥದ್ದಾಗಿದೆ.

ಶ್ರೀ ಬಿ. ಸೋಮಶೇಖರ್ : ಹಾಗಾದರೆ ವಕ್ಫ್ ಬೋರ್ಡ್‌ನಿಂದ ಸರ್ಕ್ಯೂಲರ್ ಹೊರಡಿಸುವುದಕ್ಕೆ ಆಗುತ್ತಿರಲಿಲ್ಲವೇ? ಅದನ್ನು ವಕ್ಫ್ ಬೋರ್ಡ್‌ನಿಂದ ಇಶ್ಯೂ ಮಾಡುವುದಕ್ಕೆ ಆಗುತ್ತಿರಲಿಲ್ಲವೇ? ಹಾಗಾದರೆ this Muzrai or Religious Endowment Department is Governed under the Constition of India. Wakf is also governed under the Constitution of India. or is it governed under Pakistan Constitution? All the Departments are governed under the Constitution of India. ಇದನ್ನು ಡಿಫೆಂಡ್ ಮಾಡಿಕೊಳ್ಳಬಾರದು.

ಶ್ರೀ ಸಿ.ಆರ್. ಸಗೀರ್ ಅಹಮದ್ : ನಮ್ಮ ಮಾನ್ಯ ಬಿ. ಸೋಮಶೇಖರ್‌ರವರು ಹೇಳಿದ ಹಾಗೆ ಈ ಮುಜರಾಯಿ ಇಲಾಖೆಯ ಸರ್ಕಾರದ ಒಂದು ಸಂಸ್ಥೆ. ಹಾಗೆಯೇ ವಕ್ಫ್ ಮಂಡಳಿಯು ಸಹ ಸರ್ಕಾರದ ಒಂದು ಸಂಸ್ಥೆ. ಆದರೆ ವಿವಿಧವಾದಂಥ ಸರ್ಕಾರದ ಆದೇಶಗಳನ್ನು ಹೊರಡಿಸುವಂಥದ್ದರ ಬಗ್ಗೆ ವಿವಿಧವಾದಂಥ ಇಲಾಖೆಗಳು ಇವೆ. ನಮ್ಮ ವಕ್ಫ್ ಮಂಡಳಿಯ ಸಚಿವರು ಇವತ್ತು ಈ ಸದನದಲ್ಲಿ ಇದ್ದಾರೆ. ನಾವು ಮತ್ತು ಅವರು ಕುಳಿತು ಚರ್ಚೆ ಮಾಡಿ ಏನು ಮಾಡಿದ್ದೇವೆಂದರೆ ಈ ಇಲಾಖೆ ನಮ್ಮಲ್ಲಿಯೇ ಇರುವುದರಿಂದ ಇದಕ್ಕೆ ಆದೇಶ ಹೊರಡಿಸುವಂತೆ ಅವಶ್ಯಕತೆಯಿಲ್ಲ. ರಾಜ್ಯದಲ್ಲಿ ಬರವನ್ನು ಎದುರಿಸುವಂಥ ಸಂದರ್ಭದಲ್ಲಿ ಸಾಮೂಹಿಕವಾಗಿ ನಮ್ಮ ಪ್ರಾರ್ಥನೆಯನ್ನು ಸಲ್ಲಿಸುವಂಥದ್ದು ನಮ್ಮ ಕರ್ತವ್ಯ. ಆದೇಶ ಹೊರಡಿಸಿ ಪ್ರಾರ್ಥನೆ ಸಲ್ಲಿಸುವಂಥ ಅಗತ್ಯ ಇಲ್ಲ ಎಂದು ನಾನು ಚರ್ಚೆ ಮಾಡಿ ಎಲ್ಲಾ ಮಸೀದಿಗಳಲ್ಲೂ ಪ್ರಾರ್ಥನೆ ಮಾಡುವಂತೆ ನಾವು ಕೋರಿದ್ದೇವೆ. ಅದರ ಪ್ರಕಾರವೇ ಆಗಿದೆ. ಆದರೆ ಇದು ಮುಜರಾಯಿ ದೇವಾಲಯ ಆಗಿರುವುದರಿಂದ ಯಾರಿಗೆ ಕೇಳಬೇಕು ಸ್ವಾಮಿ. ತಾವು ಹಿಂದೆ ರೆವಿನ್ಯೂ ಮಂತ್ರಿಯಾಗಿದ್ದವರು, ತಾವು ಮುಜರಾಯಿ ಇಲಾಖೆಯ ಮಂತ್ರಿಯಾಗಿದ್ದವರು. ಯಾರಿಗೆ ಆದೇಶ ಕೊಡಬೇಕೆಂದು ತಾವು ಹೇಳಿದರೆ ನಾನು ಒಪ್ಪಿಕೊಳ್ಳುತ್ತೇನೆ. ತಾವು ಮಂತ್ರಿಯಾಗಿದ್ದರೂ ಇದೇ ರೀತಿಯಲ್ಲಿ ಆದೇಶ ಹೊರಡಿಸಬೇಕಾಗುತ್ತಿತ್ತು.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಒಂದ್ನಿಮಿಷ, ಸರ್ಕಾರವೇ ಆದೇಶ ಹೊರಡಿಸುವುದಕ್ಕಿಂತ ಮುಜರಾಯಿ ಮಂತ್ರಿಗಳೊಡನೆ ಇದನ್ನು ಚರ್ಚೆ ಮಾಡಿ ಪೂಜೆ ಮಾಡಿಸಿ ಎಂದು ಹೇಳಬೇಕಾಗಿತ್ತು. ಸರ್ಕ್ಯೂಲರ್ ಹೊರಡಿಸುವುದು ಬೇಕಾಗಿರಲಿಲ್ಲ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಅದನ್ನೂ ಮಾಡಿದ್ದೇವೆ. ಅದನ್ನು ಮಾಡಿಲ್ಲಂತಲ್ಲ ಮುಜರಾಯಿ ಮಂತ್ರಿಗಳೂ ಮಾಡಿದ್ದಾರೆ. ಮುಖ್ಯಮಂತ್ರಿಗಳೂ ಮಾಡಿದ್ದಾರೆ, ವಕ್ಫ್ ಮಂತ್ರಿಗಳೂ ಮಾಡಿದ್ದಾರೆ, ರಾಜ್ಯದಲ್ಲಿ ಇರುವಂಥ ಎಲ್ಲಾ ಮಂತ್ರಿಗಳು, ಶಾಸಕರುಗಳು ತಾವೂ ಸಹಿತ ಸೇರಿ ಪ್ರಾರ್ಥನೆ ಮಾಡಿರುವುದು ಉಂಟು. ಆದರೆ ಇದರಲ್ಲಿ ವಿಶೇಷ ಏನು ಬಂತು ಎನ್ನುವುದು ಇಲ್ಲಿ ಪ್ರಶ್ನೆ.

ಶ್ರೀ ಎಸ್.ಎಸ್. ಪಾಟೀಲ್ : ಇವರು ಪೂಜೆ ಮಾಡುವುದು ಮಳೆ ಬರಲಿ ಎಂದು ಅಲ್ಲ. ನಿಮ್ಮ ಪಾಪದ ಕೊಡ ತುಂಬಿದೆ, ಇಷ್ಟಾದರೂ ಪುಣ್ಯ ಮಾಡೋಣವೆಂದು ಮಾಡುವುದಕ್ಕೆ ಹೊರಟಿದ್ದೀರಿ. ಕೇವಲ ಮೂರು ವರ್ಷದಲ್ಲಿ ನಿಮ್ಮ ಪಾಪ ಕೊಡ ತುಂಬಿಬಿಟ್ಟಿದೆ. ಮೂರು ವರ್ಷ ಮಳೆ ಇಲ್ಲದಂತೆ ಕಳೆದಿರಿ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಹಿಂದೆ ಜನ ಆಡುತ್ತಿದ್ದರು, ಏನು ಆಡುತ್ತಿದ್ದರು ಎಂದು ಹೇಳಿದರೆ ಅದನ್ನು ಜನಕ್ಕೆ ಕೇಳಬೇಕಾಗುತ್ತದೆ. ಯಾರದು ಪಾಪದ ಕೊಡ ತುಂಬಿತ್ತು ಎನ್ನುವುದರ ಬಗ್ಗೆ ಕಾರಣ ಏನೆಂದರೆ, ನಿಮಗೆ ಅಧಿಕಾರಕ್ಕೆ ತಂದಾಗಲೆಲ್ಲಾ ಈ ರೀತಿ ಬರ ಬರುತ್ತದೆ ಎನ್ನುವ ಊಹೆ ಈ ರಾಜ್ಯದಲ್ಲಿ ಇತ್ತು. ಅದರಿಂದ ಜನ ನಿಮ್ಮನ್ನು ಆ ಕಡೆ ಕುಳಿತುಕೊಳ್ಳುವಂತೆ ಮಾಡಿರುವುದು. ಯಾವಾಗ ಕಾಲು ಇಡುತ್ತೀರೋ ಆ ಜನರ ಶಾಪ, ಆದ್ದರಿಂದ ಮಳೆ ಬರುತ್ತಿರಲಿಲ್ಲ ಎನ್ನುವ ಊಹೆ ಇತ್ತು.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಈಗ ಹೇಗಿದೆ ಅದು.

ಶ್ರೀ ಸಿ. ಚೆನ್ನಿಗಪ್ಪ : ಮೂರು ವರ್ಷದಿಂದ ಮಳೆ ಇಲ್ಲದೆ ರಾಜ್ಯದಲ್ಲಿ ಜನರು ಸಾಯುತ್ತಿದ್ದಾರೆ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ್ : ಮಾನ್ಯ ಸಗೀರ್ ಅಹಮದ್‌ರವರಲ್ಲಿ ಒಂದು ಮನವಿ. ಇವತ್ತು ಶುಕ್ರವಾರ, ಮಳೆ ಬರಲಿ ಎಂದು ಹೋಗಿ ಸ್ವಲ್ಪ ನಮಾಜು ಮಾಡುವುದಕ್ಕೆ ಹೇಳಿಬಿಡಿ ದಯಮಾಡಿ. ಇವತ್ತಾದರೂ ಹೋಗಿ ಮಾಡುವುದಕ್ಕೆ ಹೇಳಿ.

ಗೊಂದಲ

ಶ್ರೀ ಸಿ.ಆರ್. ಸಗೀರ್ ಅಹಮದ್ : ಇವತ್ತಿನವರೆಗೆ ನಮಗೆ ಈ ವಿಚಾರ ಯಾರೂ ಹೇಳಲಿಲ್ಲ. ನನ್ನ ಸ್ನೇಹಿತರು ಶುಕ್ರವಾರ ಎಂದು ನೆನಪು ಮಾಡಿಕೊಟ್ಟಿದ್ದಾರೆ. ಅದಕ್ಕೆ ನನ್ನ ಧನ್ಯವಾದಗಳನ್ನು ಅವರಿಗೆ ಸಮರ್ಪಣೆ ಮಾಡುತ್ತೇನೆ.

ಶ್ರೀ ಕೆ. ಶ್ರೀನಿವಾಸಗೌಡ (ಕುಡುವನಹಳ್ಳಿ) : ಮಾನ್ಯ ಚೇರ್‌ಮನ್‌ರವರೇ, ನಮ್ಮ ನಾಯಕರಾದ ಶ್ರೀ ಸೋಮಶೇಖರ್‌ರವರು ಪ್ರಸ್ತಾಪ ಮಾಡಿರುವಂಥ ವಿಷಯ ಬಹಳ ಗಂಭೀರ ಸ್ವರೂಪದ್ದಾಗಿರುತ್ತದೆ. ಸೆಕ್ಯುಲರ್‌ಗೋಸ್ಕರವೇ ನಾವು ಇಲ್ಲಿ ಹುಟ್ಟಿದ್ದೇವೆ. ಇನ್ನು ಉಳಿದವರೆಲ್ಲಾ ಸೆಕ್ಯುಲರ್‌ಗಳೇ ಅಲ್ಲ ಎಂದು ಹೇಳವಂಥ ಪಕ್ಷದ ಸರ್ಕಾರದವರು ನಿಮ್ಮಿಂದ ಈ ತರಹ ಸುತ್ತೋಲೆ ಹೋಗಿರುವುದನ್ನು ಬಹಳ ಗಂಭೀರವಾಗಿ ನೋಡಬೇಕಾಗುತ್ತದೆ. ನೀವು ಎಲ್ಲೆಲ್ಲೋ

ಸಂದುಗೊಂದುಗಳಲ್ಲಿ ಸೆಕ್ಯುಲರ್ ಎಂದು ಹೇಳುತ್ತೀರಲ್ಲಾ, ನಿಮ್ಮ ಅಂತರಾತ್ಮದಲ್ಲಿ ಏನಿದೆ ಎನ್ನುವುದನ್ನು ಈ ಸರ್ಕ್ಯುಲರ್ ತೋರಿಸುತ್ತದೆ.

ಶ್ರೀ ಕೆ. ಶ್ರೀನಿವಾಸಗೌಡ (ಕುಡುವನಹಳ್ಳಿ) : ಆ ಮೇಲೆ ಮಾತನಾಡಿ. ಶ್ರೀ ರೇವಣ್ಣನವರೇ, ನಾನು ಮಾತನಾಡಿ ಆದಮೇಲೆ ನೀವು ಮಾತನಾಡಿ. ಇವತ್ತು ನೀವು ಇಂಥದ್ದನ್ನು ಲಘುವಾಗಿ ತೆಗೆದುಕೊಳ್ಳುತ್ತಿದ್ದೀರಿ. ನೀವು ಆ ಸರ್ಕ್ಯುಲರ್ ಮುಖಾಂತರ ಎಲ್ಲಾ ಸಮಾಜಕ್ಕೂ ಕೊಟ್ಟು ಪ್ರಾರ್ಥನೆ ಮಾಡಬೇಕೆಂದು ಹೇಳಿದ್ದರೆ ಯಾರೂ ಇದನ್ನು ಮಾತನಾಡುತ್ತಿರಲಿಲ್ಲ. ಆದರೆ ಇದನ್ನು ನೀವು ಚುನಾವಣೆಗೋಸ್ಕರ ಬರೀ ಸೆಕ್ಯುಲರ್ ಎಂದು ಹೇಳುತ್ತೀರಿ, ಇನ್ನು ಉಳಿದಂತೆ ನೀವು ಬರೀ ಜಾತಿವಾದಿಗಳೆಂದು, ಕಾಂಗ್ರೆಸ್‌ನವರು ಜಾತಿವಾದಿಗಳೆಂದು ತೋರಿಸುವುದಕ್ಕೆ ಈ ಸರ್ಕ್ಯುಲರ್ ಒಂದೇ ಸಾಕ್ಷಿ ಸಾಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಶ್ರೀನಿವಾಸಗೌಡರೆ, ನಿಮಗೆ ಒಂದು ಪ್ರಶ್ನೆ ಕೇಳುತ್ತೇನೆ. ಅವರೇನೋ ರಾಂಗ್‌ಲಿ, ರೈಟ್‌ಲಿ ಮೂಕಾಂಬಿಕೆ ಮತ್ತೆ ಯಾವುದೋ ಎರಡು ದೇವಸ್ಥಾನಗಳು ಹೆಸರು ಬರುತ್ತದೆ...

Sri B. Somashekhar : You have to withdraw it or apologise.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಾನು ಹೇಳುವುದನ್ನು ಸ್ವಲ್ಪ ಕೇಳಿ. ಆ ಎರಡನ್ನು ಮಾತ್ರ ಏಕೆ ಬರೆದಿದ್ದೀರಿ ಎಂದು ಕೇಳಿದಿರಿ. ಆ ಎರಡೇ ಏಕೆ ಬರೆದರು, ಮುಂದೆ ಸೇರಿಸಬೇಕಾಗಿತ್ತು ಚರ್ಚ್ ಮಸೀದಿ ಅಂಥವುಗಳನ್ನು ಎಂದು ತಾವು ಹೇಳಿದಿರಿ. ಅವುಗಳನ್ನು ಸೇರಿಸಿದ್ದರೆ ಕಾನ್ಸ್ಟಿಟ್ಯೂಷನ್ ಆಗುತ್ತಿತ್ತೇ?

ಗೊಂದಲ

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮತ್ತೆ ಏಕೆ ಡಿಫೆಂಡ್ ಮಾಡಿಕೊಳ್ಳುತ್ತೀರಿ?

ಶ್ರೀ ಬಿ. ಸೋಮಶೇಖರ್ : ನಾನು ಹೇಳಿದ್ದು ಅದನ್ನೇ. ನಾನು ಮೊದಲೇ ಹೇಳಿದ್ದೇ, ಅದೇನೆಂದರೆ ಬಹುಶಃ ಈ ರೀತಿ ಸೇರಿಸಿದ್ದರೂ ತಪ್ಪು ಎಂದು. ಆದರೂ ಒಂದು ವೇಳೆ, ತಪ್ಪು ಎಂದು ಇದ್ದರೂ ಸಹ ನಾವು ಸ್ವಲ್ಪ ಸಮಾಧಾನ ಇಟ್ಟುಕೊಳ್ಳಬಹುದಿತ್ತು. ತಪ್ಪು ಎಂದು ಇದ್ದರೂ ಸಹ ಅದರಲ್ಲಿ ಸೆಕ್ಯುಲರ್ ಆರ್ಡರ್ಸ್ ಮಾಡಿದ್ದಾರೆಂದು ಗೊತ್ತಾಗುತ್ತಿತ್ತು. Because it is a violation of the Constitution. ಆದರೆ ಅದನ್ನೂ ಇಲ್ಲದೆ ಕೇವಲ ಮೂಕಾಂಬಿಕೆ ದೇವಸ್ಥಾನದಲ್ಲಿ ಪೂಜೆ ಮಾಡಿ ಅದಕ್ಕೆ ಖರ್ಚಾದಂಥ 10 ಸಾವಿರ ರೂಪಾಯಿಗಳನ್ನು ನೀವು ಭರಿಸಬೇಕೆಂದು ಹೇಳಿದ್ದೀರಲ್ಲಾ, ಇದನ್ನು ಯಾವುದಾದರೂ ಸೆಕ್ಯುಲರ್ ಗವರ್ನ್‌ಮೆಂಟ್ ಇಶ್ಯು ಮಾಡತಕ್ಕಂಥದ್ದಾ? ಇದನ್ನು ಡಿಫೆಂಡ್ ಮಾಡುವುದಕ್ಕೆ ಹೋಗಬೇಡಿ. ಯಾವುದೋ ತಪ್ಪಾಗಿದೆ. ಆಯಿತು. ವಿತ್‌ಡ್ರಾ ಮಾಡಿಕೊಳ್ಳುತ್ತೇವೆ. ಇದು ಸರಿಯಿಲ್ಲ ಎಂದು ಹೇಳಿದರೆ ಅದು ಔದಾರ್ಯತೆ ತೋರಿಸತಕ್ಕಂಥದ್ದು ಆಗುತ್ತದೆ ಮತ್ತು ಆ ರೀತಿಯ ಔದಾರ್ಯ ತೋರಿಸಬೇಕಾಗುತ್ತದೆ. ಇದನ್ನು ಬಿಟು ಡಿಫೆಂಡ್ ಮಾಡುವುದು ಇದೆಯಲ್ಲಾ....

ಶ್ರೀ ಸಿ.ಆರ್. ಸಗೀರ್ ಅಹಮದ್ : ತಾವು ಅಷ್ಟೇ ಸಮಾಧಾನದಿಂದ ಅದನ್ನು ಹೇಳಿದ್ದರೆ ನಮಗೂ ಅರ್ಥವಾಗುತ್ತದೆ.

ಶ್ರೀ ಬಿ. ಸೋಮಶೇಖರ್ : ನಾನು ಇನ್ನೇನು ಹೇಳಿದೆ?

ಶ್ರೀ ಸಿ.ಆರ್. ಸಗೀರ್ ಅಹಮದ್ : ಆದರೆ ರಾಜೀನಾಮೆ ಕೊಟ್ಟು ಮನೆಗೆ ಹೋಗಿಬಿಡಿ ಎಮದು ನೀವು ಹೇಳಿದರೆ ನಾವು ಅದಕ್ಕೆ ಇಲ್ಲಿ ಬಂದಿದ್ದೇವೆಯೇ?

ಶ್ರೀ ಬಿ. ಸೋಮಶೇಖರ್ : ಕೊಡಬೇಕು. because it is a violation of the constitution.

ಶ್ರೀ ಸಿ.ಆರ್. ಸಗೀರ್ ಅಹಮದ್ : ತಮ್ಮ ಕಾಲದಲ್ಲಿ ಎಂಥೆಂಥ ಉದಾಹರಣೆಗಳು ಇಲ್ಲ? ಇವತ್ತು ಈ ಸದನದಲ್ಲಿ ಮಾತನಾಡುವಂಥದ್ದರಲ್ಲಿ ದೇವಸ್ಥಾನದಲ್ಲಿ ಹುಂಡಿಯಲ್ಲಿ ಇದ್ದಂಥ ದುಡ್ಡನ್ನು ನೀವು ಡ್ರಾ ಮಾಡಿರುವಂಥ ವಿಚಾರಗಳು ಇಲ್ಲವೇ? ಈ ಸದನದಲ್ಲಿ ಅದರ ಬಗ್ಗೆ ಚರ್ಚೆ ನಡೆದಿಲ್ಲವೇ? ಹುಂಡಿಯಲ್ಲಿರುವ ಹಣವೆಲ್ಲಾ ಸರ್ಕಾರದ ಖಜಾನೆಗೆ ಜಮಾ ಮಾಡಬೇಕೆಂದು ಆದೇಶ ಮಾಡಿರುವಂಥದ್ದು ಈ ರಾಜ್ಯದಲ್ಲಿ ನಡೆದಿಲ್ಲವೇ?

ಶ್ರೀ ಎಸ್.ಎಸ್. ಪಾಟೀಲ್ : ದೇವಸ್ಥಾನದಲ್ಲಿ ಹುಂಡಿಯಲ್ಲಿರುವ ದುಡ್ಡು ಅದು ಸಾರ್ವಜನಿಕರ ದುಡ್ಡು. ಆ ಹಣವನ್ನು ತೆಗೆದುಕೊಂಡು ಬರ ಪರಿಹಾರಕ್ಕೆ ಉಪಯೋಗ ಮಾಡಿ. ನಾವು ಬೇಡ ಎಂದು ಹೇಳುವುದಿಲ್ಲ. ಆದರೆ ಆನ್‌ಲೈನ್ ಲಾಟರಿಯಿಂದ ಶಾಲಾ ಮಕ್ಕಳಿಗೆ ಊಟ ಹಾಕಬೇಡರಿ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಎಸ್.ಎಸ್. ಪಾಟೀಲರೆ, ಈ ವಿಚಾರ ನಿಮಗೂ ಗೊತ್ತಿದೆ ನಮಗೂ ಗೊತ್ತಿದೆ. ನಾವು ಯಾವ ದುಡ್ಡಿನಲ್ಲಿ ಊಟ ಹಾಕುತ್ತೇವೆ ದೇವರ ದುಡ್ಡಿನಲ್ಲಿ ಯಾರು ಊಟ ಮಾಡುತ್ತಿದ್ದಾರೆ ಎಲ್ಲವೂ ಗೊತ್ತೇ ಇದೆ. ದೇವರಂತೂ ದುಡ್ಡು ತಿನ್ನುವುದಿಲ್ಲ. ದೇವರ ದುಡ್ಡು ಯಾರು ತಿನ್ನುತ್ತಾರೆ ಎನ್ನುವುದು ಗೊತ್ತಿದೆಯಲ್ಲಾ. ದೇವರು ದುಡ್ಡು ತಿಂದಿದೆಯೇ ಯಾವತ್ತಾದರೂ? ದೇವರ ದುಡ್ಡನಂತೂ ಚೆನ್ನಾಗಿ ತಿನ್ನುತ್ತಾರೆ. ಏಕೆ ಮಾತನಾಡುವುದಕ್ಕೆ ಹೋಗುತ್ತೀರಿ?

ಶ್ರೀ ಎಸ್.ಎಸ್. ಪಾಟೀಲ್ : ದಿವಂಗರ ಜೆ.ಹೆಚ್. ಪಟೇಲರು ಹಿಂದೆ ಹೇಳುತ್ತಿದ್ದರು. ಅದೇನೆಂದರೆ–ಇವೆರಡೂ ಪಕ್ಷಗಳು ಒಂದೇ ನಾಣ್ಯದ ಎರಡು ಮುಖಗಳು ಎಂದು. ದೇಶಕ್ಕೇ ಒಂದು ಶಾಪ, ಒಂದು ಕ್ಯಾನ್ಸರ್ ಎಂದು ಅವರು ಹೇಳಿದ್ದರು.

ಗೊಂದಲ

ಶ್ರೀ ಸಿ.ಆರ್. ಸಗೀರ್ ಅಹಮದ್ : ನಮ್ಮ ಪಕ್ಷಗಳ ವಿಚಾರವನ್ನು ಅವರು ಹೇಳಿದರಲ್ಲಾ. ಇವರದ್ದು ಏಡ್ಸ್ ಪಕ್ಷ ಆದ ಹಾಗೆ ಆಗಿದೆ.

1.10 ಪಿ.ಎಂ

ಶ್ರೀ ಬಿ. ಸೋಮಶೇಖರ್ : ಪ್ರಜಾಪ್ರಭುತ್ವದಲ್ಲಿ ಎಷ್ಟು ಪಕ್ಷಗಳನ್ನಾದರೂ ಮಾಡಿಕೊಳ್ಳಬಹುದು. ಅದು ಅವರವರಿಗೆ ಬಿಟ್ಟಿದ್ದು. ಆದರೆ, ಸರ್ಕಾರ ಸಂವಿಧಾನಾತ್ಮಕವಾಗಿ ಕೆಲಸ ಮಾಡಬೇಕೆಂಬುದು ನಮ್ಮ ಉದ್ದೇಶ. ಸಂವಿಧಾನವನ್ನು ಯಾರೂ ಮುರಿಯಬಾರದು. ಸರ್ಕಾರದಿಂದ ಹೊರಗಡೆ ನಾವೇನಾದರೂ ಆಚರಣೆ ಮಾಡಬಹುದು. ಈಗ ಪೂಜೆಯಾದರೂ ಮಾಡಿ. ಮಳೆ ಏನಾದರೂ ಬಂದಿದೆಯೇ? ಡ್ಯಾಮ್‌ಗಳು ತುಂಬಿವೆಯೇ? ಅನಿಷ್ಟ ಕೂಡಿಕೊಂಡಿದೆ. ಕೆ.ಆರ್.ಎಸ್. ಲೆವೆಲ್ 124 ಅಡಿ. ನಮ್ಮ ಸರ್ಕಾರದಲ್ಲಿ ಪ್ರತಿ ವರ್ಷ ಕೆಆರ್‌ಎಸ್ ತುಂಬುತ್ತಿತ್ತು. ಮುಖ್ಯಮಂತ್ರಿಗಳು ಅವರ ಧರ್ಮಪತ್ನಿ ಮೂಲಕ ಪೂಜೆ ಮಾಡುವುದು ಪ್ರತೀತಿ. ಅದರಲ್ಲಿ ತಮಿಳುನಾಡಿಗೆ 205 ಟಿಎಂಸಿ ನೀರು ಬಿಡಬೇಕೆಂದು ಆದೇಶ ಹೊರಡಿಸಿದ್ದಾರೆ. ನಮ್ಮ ಸರ್ಕಾರದಲ್ಲೇನಾಗಿತ್ತೆಂದರೆ, ಮಳೆ

ಬಂದು ತುಂಬಿದ ನಂತರ ಹೆಚ್ಚುವರಿ ನೀರು ಇದೆಯಲ್ಲಾ ಆದರಲ್ಲೇ ಸುಮಾರು 202 ಟಿಎಂಸಿ ನೀರು ಹೊರಟು ಹೋಗುತ್ತಿತ್ತು. 3 ವರ್ಷಗಳಿಂದ 124 ಅಡಿ ಅಲ್ಲ. 81 ಟಿಎಂಸಿ ನೀರು ಇದೆ. ಏನು ಸ್ಟೋರೇಜ್ ಆಗಿದೆಯೋ ಅದರಲ್ಲಿ 205 ಟಿಎಂಸಿ ನೀರನ್ನು ಈ ಸರ್ಕಾರ ಬಿಡುತ್ತಾ ಹೋಗಿದೆ ಎಂದರೆ ಎಷ್ಟು ಪಾಪದ ಕೊಡ ಈ ಸರ್ಕಾರದ ಮೇಲಿದೆ ಎಂದರೆ ಮಳೆ ಬಂದಿಲ್ಲ. ಈಗಿರುವ ನೀರಿನಲ್ಲೇ ನೀರನ್ನು ಬಿಟ್ಟಿದ್ದಾರೆಂದರೆ ನಮ್ಮ ರಾಜ್ಯದ ರೈತರಿಗೆ ಅನ್ಯಾಯವಾಗಿರುವುದನ್ನು ನಾನು ಗಮನಕ್ಕೆ ತರುತ್ತಿದ್ದೇನೆ. ಆದುದರಿಂದ, ಈ ಒಂದು ಬರಗಾಲ ಪರಿಹಾರದಲ್ಲಿ ನಾವು ಅನೇಕ ದೂರುಗಳನ್ನು ಕೊಟ್ಟಿದ್ದೇವೆ. ತಾವು ಒಂದು ವ್ಯವಸ್ಥೆ ಮಾಡಿರುವುದು ಸಮಾಧಾನ. ಆಯಾಯ ಕ್ಷೇತ್ರದ ಶಾಸಕರು ಅವರು ಯಾವುದೇ ಪಕ್ಷಕ್ಕೆ ಸೇರಿದ್ದರೂ, ಅವರ ಅಧ್ಯಕ್ಷತೆಯಲ್ಲಿ ಟಾಸ್ಕ್ ಫೋರ್ಸ್ ಸಮಿತಿ ರಚಿಸಿ, ಅವರು ಆಯ್ಕೆ ಮಾಡುವ ಕೆಲಸ ಮಾಡಬೇಕೆಂದು ಮಾಡಿದ್ದೀರಿ. ಅದು ಸಮಾಧಾನಕರವಾದ ನಿಲುವು. ನಮ್ಮಲ್ಲಿ 90 ಜನ ವಿರೋಧ ಪಕ್ಷದವರಿರಬಹುದು. ಇನ್ನೂ ಬೇರೆ ಸುಮಾರು 130 ಜನ ಶಾಸಕರು ಆಡಳಿತ ಪಕ್ಷದವರಿರಬಹುದು; ಈಗ ನಾನು ಹೇಳುವುದು ಎಲ್ಲ ಆಡಳಿತ ಪಕ್ಷದವರ ಕ್ಷೇತ್ರದಲ್ಲಿ ಅವ್ಯವಹಾರವಾಗಿದೆ. ಇಲ್ಲಿ ಆಗಿಲ್ಲವೆಂದು ನಾನು ಹೇಳುವುದಿಲ್ಲ. ಎಲ್ಲಿ ಶಾಸಕರು ಸ್ವಲ್ಪಮಟ್ಟಿಗೆ ಮುತುವರ್ಜಿ ವಹಿಸಿದ್ದಾರೆ, ಅಲ್ಲಿ ಕಡಿಮೆ ಅವ್ಯವಹರವಾಗಿರಬಹುದು ಇನ್ನೂ ಕೆಲವೆಡೆ ಜಾಸ್ತಿ ಅವ್ಯವಹಾರವಾಗಿರಬಹುದು. ನಮ್ಮ ಸರ್ಕಾರ ಭ್ರಷ್ಟಾಚಾರವನ್ನು ನಿರ್ಮೂಲನೆ ಮಾಡುವುದಕ್ಕೆ, ಪಾರದರ್ಶಕ ಸರ್ಕಾರ ಕೊಡುವುದಕ್ಕೆ ಬದ್ಧವೆಂದು, ಧರ್ಮಯುದ್ಧ ಮಾಡುತ್ತೇವೆಂದು ಅನೇಕ ಸಾರಿ ಮುಖ್ಯಮಂತ್ರಿಗಳು ಘೋಷಣೆ ಮಾಡಿದ್ದಾರೆ. ಇವತ್ತು ನಾವು ಕೆಲವು ದೂರುಗಳನ್ನು ಕೊಟ್ಟಿದ್ದೇವೆ. ಅದನ್ನು ನೀವು ಯಾವುದೇ ಕ್ಷೇತ್ರಕ್ಕಾದರೂ ವಿಚಾರಣೆ ಮಾಡಿಸಿ, ನಮ್ಮದೂ ಮಾಡಿ, ನಾವು ಇಂಥವರದ್ದು ಮಾಡಿ, ಅಂಥವರದ್ದು ಮಾಡಿ ಎಂದು ಹೇಳುವುದಿಲ್ಲ. ಆದರೆ, ಅಲ್ಲಿ ನಾವು ಜವಾಬ್ದಾರರಲ್ಲ. ಇಂಪ್ಲಿಮೆಂಟ್ ಮಾಡುವವರು ಇಂಜಿನಿಯರ್‌ಗಳಿರಬಹುದು ಮತ್ತು ಅಧಿಕಾರಿಗಳಿರಬಹುದು. ಯಾವುದೇ ಒಬ್ಬ ಅಧಿಕಾರಿ ಅಲ್ಲಿ ದುರುಪಯೋಗ ಮಾಡಿದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ನಾವು ಹೇಳುತ್ತಿದ್ದೇವೆಯೇ ಹೊರತು ಶಾಸಕರ ಮೇಲೆ ಕ್ರಮ ತೆಗೆದುಕೊಳ್ಳಿ, ಶಾಸಕರು ಇದರಲ್ಲಿ ಅವ್ಯವಹಾರ ಮಾಡಿದ್ದಾರೆ, ಅವರು ಇದರಲ್ಲಿ ಹಣ ತಿಂದಿದ್ದಾರೆ ಎಂದು ಯಾರೂ ಹೇಳುವುದಿಲ್ಲ. ನೀವು ಒಬ್ಬರ ಮೇಲೂ ಕ್ರಮ ತೆಗೆದುಕೊಳ್ಳದೆ, ಏನೂ ಅವ್ಯವಹಾರ ಆಗಿಲ್ಲ. ವಿಚಾರಣೆ ಮಾಡುವ ಅವಶ್ಯಕತೆ ಇಲ್ಲ, ಬಂದಿರುವ ವರದಿ ಮೇಲೇನೂ ಕ್ರಮ ತೆಗೆದುಕೊಳ್ಳುವ ಅವಶ್ಯಕತೆ ಇಲ್ಲವೆಂದು ಹೇಳಿದರೆ, ಅಧಿಕಾರಿಗಳಿಗೆ ಏನು ಮೆಸೇಜ್ ಹೋಗುತ್ತದೆ? ನಾವೇನೇ ಮಾಡಿದರೂ ನಮ್ಮ ಸರ್ಕಾರದಲ್ಲಿ, ಈ ಸರ್ಕಾರದಲ್ಲಿ ರಕ್ಷಣೆ ಇದೆ ಎಂದು, ತೂಕಡಿಸುವವನಿಗೆ ಹಾಸಿಗೆ ಹಾಸಿ ಕೊಟ್ಟಂತಾಗುತ್ತದೆ. ಆದ್ದರಿಂದ ನಾನು ಹೇಳುವುದು. ತಾವು ಡಿಫೆಂಡ್ ಮಾಡುವ ಪ್ರಯತ್ನ ಮಾಡಬೇಡಿ. ಕೆಲವರ ಮೇಲೆ ತೀವ್ರ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ ಮತ್ತು ಅನೇಕ ನಿದರ್ಶನಗಳನ್ನು ನಾವು ಕೊಟ್ಟಿದ್ದೇವೆ. ಲೋಕಾಯುಕ್ತದವರು ಸಹ ವರದಿಯನ್ನು ಕೊಟ್ಟಿದ್ದಾರೆ. ತಾವು ತಾಂತ್ರಿಕ ದೃಷ್ಟಿಯಿಂದ ಆ ವರದಿ ಹೀಗೇ ಇರಬೇಕು. ಹಾಗೇ ಇರಬೇಕೆಂದು ಹೇಳುವುದು ಸರಿಯಲ್ಲ. ಸರ್ಕಾರದ ಕರ್ತವ್ಯವೆಂದರೆ, ಒಂದು ಪತ್ರಿಕೆಯಲ್ಲಿ ಯಾವುದಾದರೊಂದು ವಿಚಾರ ಬಂದರೂ, ಅದರ ಆಧಾರದ ಮೇಲೆ ಎನ್‌ಕ್ವಯರಿ ಮಾಡಿ ಎಂದು ಹೇಳುತ್ತೇವೆ. ಇದು ಸರ್ಕಾರದ ವೈಖರಿ. ನಾವೂ ಮಾಡಿದ್ದೇವೆ. ನೀವೂ ಮಾಡುತ್ತಿದ್ದೀರಿ. ಯಾರಾದರೂ ಒಂದು ಅರ್ಜಿ ಬರೆದರೆ,

ಆ ಅರ್ಜಿ ಮೇಲೆ ಸೆಂಡ್ ಯುವರ್ ರಿಪೋರ್ಟ್, ವಿಚಾರಣೆ ಮಾಡಿ ವರದಿಯನ್ನು ಕಳುಹಿಸಿ ಕೊಡಿ ಎಂದು ಬರೆಯುತ್ತೇವೆ. ವರದಿಯಲ್ಲಿ ಸತ್ಯ ಬಂದರೆ, ಅದರ ಮೇಲೆ ಕ್ರಮ ತೆಗೆದುಕೊಳ್ಳುವುದು ನಮ್ಮ ಪದ್ಧತಿ. ಪ್ರತಿಯೊಂದನ್ನೂ ಲೋಕಾಯುಕ್ತದವರು ಪ್ರೊಸಿಜರ್ ಪ್ರಕಾರ ಎನ್‌ಕ್ವಯರಿ ಮಾಡಿ ಅವರ ಒಂದು ಶಿಫಾರಸು ಮಾಡಬೇಕು. ಇಲ್ಲದಿದ್ದರೆ ಸರ್ಕಾರ ಏನೂ ಕ್ರಮ ತೆಗೆದುಕೊಳ್ಳುವುದಿಲ್ಲವೆಂಬ ನಿಲುವು ಇದೆಯಲ್ಲಾ, ಅದು ನಿಜವಾಗಲೂ ಸರಿಯಾದ ನಿಲುವಲ್ಲ. ಲೋಕಾಯುಕ್ತದವರು ಎಸ್‌ಪಿಯವರಿಗೆ ಆದೇಶ ಕೊಟ್ಟಿದ್ದರು. ನಿಮ್ಮ ನಿಮ್ಮ ಜಿಲ್ಲೆಯೊಳಗೆ ಕೆಲವು ಕಾಮಗಾರಿಗಳನ್ನು ಪರಿಶೀಲಿಸಿ, ನಿಮ್ಮ ಅಭಿಪ್ರಾಯದೊಂದಿಗೆ ನೀವು ಸರ್ಕಾರಕ್ಕೆ ಕಳುಹಿಸಿಕೊಡಬೇಕೆಂದು ವರದಿ ಕೊಟ್ಟಿದ್ದರು. ಅದರ ಮೇಲೆ ಲೋಕಾಯುಕ್ತದವರು ಒಪಿನಿಯನ್ ಫಾರ್ಮ್ ಮಾಡದೇ ಇರಬಹುದು. ಅದು ಬೇರೆ ರೀತಿಯಲ್ಲಿ, ಲೋಕಾಯುಕ್ತದವರು ತಮ್ಮದೇ ಆದ ವರದಿ ಕೊಡುವುದು ಬೇರೆ. ಆದರೆ, ಇಲ್ಲಿ, ಲೋಕಾಯುಕ್ತದವರು ಏನು ಹೇಳಿದ್ದಾರೆಂದರೆ, ಇವತ್ತೂ ಹೇಳಿದ್ದಾರೆ. I personally did not visit these pleaces; but I had sent my officers-Police Inspectors and Sub Inspectors who are on deputation to Lok Ayuktha, to find out the drought relief works. They have made some remarks, which I have consolidated and forwarded to the Chief Minister. It means the same that the SPs of some districts have visited the spots and observed certain irregularities and sent a report and they have made remarks. what we are demanding from the Government. you take action; you place those remarks of the respective SPs on the table of the House so that we can discuss on the report.

ಎಂದು ಹೇಳಿರುವುದು ಅಷ್ಟೇ. ಅದನ್ನು ಕಳುಹಿಸಿಲ್ಲ. ಇದನ್ನು ಕಳುಹಿಸಿಲ್ಲ. ಅವರು ಅದೇ ರೂಪದಲ್ಲಿ ವರದಿ ಕಳುಹಿಸಿಕೊಡಬೇಕೆಂದು ಹೇಳಿದರೆ ಇದು ಸರ್ಕಾರ ನಡೆಸುವ ರೀತಿಯೇ? ನಾನು ಮೊದಲೇ ಹೇಳಿದ ಹಾಗೆ, ಒಂದು ವರದಿ ಪತ್ರಿಕೆಯಲ್ಲಿ ಬಂದರೂ ಅದರ ಮೇಲೆ ಕ್ರಮ ತೆಗೆದುಕೊಂಡ ನಿದರ್ಶನಗಳಿವೆ. ಸುಪ್ರೀಂಕೋರ್ಟಿನವರು ಒಂದು ಪತ್ರಿಕಾ ವರದಿ ಮೇಲೆ ಸೂ–ಮೋಟೋ ಪಬ್ಲಿಕ್ ಇಂಟರೆಸ್ಟ್ ಲಿಟಿಗೇಷನ್ ಆಗಿ ಪರಿವರ್ತನೆ ಮಾಡಿ ಕ್ರಮ ತೆಗೆದುಕೊಂಡಿದ್ದನ್ನು ನೋಡಿದ್ದೇವೆ. ಆದರೆ, ಸರ್ಕಾರಗಳು ಒಂದು ಟೆಕ್ನಿಕಾಲಿಟೀಸ್ ಮೇಲೆ ನಿಂತು ಅವ್ಯವಹಾರವಾಗಿರುವುದನ್ನು ಮುಚ್ಚಿಡುವ ಪ್ರಯತ್ನ ಸರಿಯಲ್ಲ. ಆದ್ದರಿಂದ, ತಾವು ಇವತ್ತು ಅವರು ಕೊಟ್ಟಿರುವ ವರದಿಗಳನ್ನು ಸದನದ ಮುಂದಿಡಬೇಕಾಗುತ್ತದೆ. ನಾವು ಅನೇಕ ದೂರುಗಳನ್ನು ಮಾಡಿರುವುದರಿಂದ ಅದು ವಿರೋಧ ಪಕ್ಷದ ಕ್ಷೇತ್ರದಲ್ಲಿರಬಹುದು, ಆಡಳಿತ ಪಕ್ಷದವರ ಕ್ಷೇತ್ರದಲ್ಲಿರಬಹುದು. ಶಾಸಕರು ದಯವಿಟ್ಟು ತಮ್ಮ ಮೇಲೆ ಆರೋಪವೆಂದು ತಿಳಿಯುವುದು ಬೇಡ. ಆ ವರದಿ ಮೇಲೆ ಕ್ರಮ ತಗೆದುಕೊಳ್ಳುವುದರ ಜೊತೆಗೆ, ಜಂಟಿ ಸದನ ಸಮಿತಿಯನ್ನು ರಚಿಸಬೇಕೆಂಬುದು ನಮ್ಮ ಉದ್ದೇಶ. ಏತಕ್ಕೆಂದರೆ, ಜಂಟಿ ಸದನ ಸಮಿತಿಯಲ್ಲಿ ಎಲ್ಲಾ ಪಕ್ಷದ ಸದಸ್ಯರೂ ಇರುತ್ತಾರೆ. ಆ ಮನೆಯ ಸದಸ್ಯರೂ, ಈ ಮನೆಯ ಸದಸ್ಯರೂ ಇರುತ್ತಾರೆ. ಪಕ್ಷಭೇದ ಮರೆತು ನಿಷ್ಪಕ್ಷಪಾತವಾಗಿ ವರದಿಯನ್ನು ತರುತ್ತಾರೆ. ನಿಮ್ಮ ಒಂದು ಆಡಳಿತ ಪಕ್ಷದವರನ್ನೇ ಒಬ್ಬರನ್ನು ಅಧ್ಯಕ್ಷರನ್ನಾಗಿ ಮಾಡಿ. ಅವರು ಸುಮಾರು 8–10

ದಿನಗಳ ಕಾಲ ಪ್ರವಾಸ ಮಾಡಿ ಎಲ್ಲೆಲ್ಲಿ ದೂರು ಬಂದಿದೆ. ಏನೇನು ಕೆಲಸಗಳಾಗಿದೆ ಎನ್ನುವುದರ ಬಗ್ಗೆ ವರದಿ ಬಂದು, ಇನ್ನೂ ಸುಮಾರು 15 ದಿನಗಳಿರುತ್ತದೆ. ಅದನ್ನು ಇಲ್ಲಿಟ್ಟರೆ ಚರ್ಚೆ ಮಾಡಬಹುದು. ತೆಗೆದುಕೊಳ್ಳಬಹುದು. ಆಗ ಸರ್ಕಾರ ಉತ್ತಮವಾದ ಕೆಲಸ ಮಾಡಿದೆ ಎಂದು ಮೆಚ್ಚಬಹುದು. ಇನ್ನೊಂದು ನಾನು ಏನು ಡಿಮಾಂಡ್ ಮಾಡುತ್ತಿರುವುದೆಂದರೆ, ಶ್ವೇತಪತ್ರ. ಶ್ವೇತ ಪತ್ರದ ಅವಶ್ಯಕತೆ ಏಕೆ ಇದೆ ಎಂದರೆ ಇವತ್ತು ಕೇಂದ್ರ ಸರ್ಕಾರದವರು ಒಂದು ಕಡೆ ಬಂದು ನಮ್ಮ ಕೇಂದ್ರ ಸರ್ಕಾರದ ಯೋಜನೆಗಳನ್ನು ಸಂಪೂರ್ಣವಾಗಿ ಖರ್ಚು ಮಾಡಿಕೊಂಡಿಲ್ಲ, ಆದ್ದರಿಂದ ನಾವು ಬೇರೆ ಹಣ ಕೊಟ್ಟಿಲ್ಲ. ಅಕ್ಕಿ ವಿತರಣೆ ಮಾಡಿಲ್ಲವೆಂದು ಕೇಂದ್ರ ಮಂತ್ರಿಗಳು ಹೇಳಿದ್ದಾರೆ. ಇಲ್ಲಿ ನೀವು ಕೇಂದ್ರದ ಜೊತೆ ಸಂಘರ್ಷಕ್ಕೆ ಸಿದ್ಧ, ನಾವು ಕೇಳಿದ ಹಣ ಕೊಟ್ಟಿಲ್ಲ. ಅನ್ಯಾಯ ಮಾಡಿದೆ ಎಂದು ಒಂದು ಕಡೆ ಹೇಳುತ್ತೀರಿ. ನಾನು ಕೆಲವು ಅಧ್ಯಯನ ಮಾಡಿದ ಪ್ರಕಾರ, ನೀವು ರಾಜ್ಯ ಸರ್ಕಾರದವರು ಸುಮಾರು 500 ಕೋಟಿ ರೂಪಾಯಿಗಳನ್ನು ನಿಮ್ಮ ಷೇರ್ ಪ್ರಕಾರ ಇಡಬೇಕಾಗಿತ್ತು. 2 ವರ್ಷಗಳಿಂದ 8 ಲಕ್ಷದ 20 ಸಾವಿರ ಅಕ್ಕಿಯನ್ನು ಏನು ಬಿಡುಗಡೆ ಮಾಡಿದ್ದಾರೆ. ಅದಕ್ಕೆ ಮ್ಯಾಚಿಂಗ್ ಗ್ರಾಂಟ್ ಆಗಿ 500 ಕೋಟಿ ರೂಪಾಯಿ ಬೇಕಾಗಿತ್ತು. ಕೇಂದ್ರ ಸರ್ಕಾರ ಈಗಾಗಲೇ 300 ಕೋಟಿ ರೂಪಾಯಿ ಬಿಡುಗಡೆ ಮಾಡಿದೆ. ಅದರಲ್ಲಿ ನೀವು 80 ಕೋಟಿ ರೂಪಾಯಿ ಖರ್ಚು ಮಾಡಿಲ್ಲ. ಇದಕ್ಕೆ ರಾಜ್ಯ ಸರ್ಕಾರ ಎಷ್ಟು ಹಣ ಬಿಡುಗಡೆ ಮಾಡಿದೆ? ಯಾವ್ಯಾವ ಹೆಡ್ ಕೆಳಗಡೆ ಕೇಂದ್ರ ಸರ್ಕಾರದಿಂದ ಎಷ್ಟೆಷ್ಟು ಹಣ ಬಂದಿದೆ? ನೀವು ಎಷ್ಟು ಬಿಡುಗಡೆ ಮಾಡಿದ್ದೀರಿ? ಎಷ್ಟು ಹಣ ಖರ್ಚಾಗಿದೆ? ಇದರ ಬಗ್ಗೆ ಸ್ಪಷ್ಟವಾದ ಮಾಹಿತಿ ಬೇಕಾಗುತ್ತದೆ. ಇಲ್ಲವೆಂದರೆ, ಕೇಂದ್ರ ಸರ್ಕಾರವನ್ನು ನೀವು ಬಯ್ಯುವುದು, ಅವರನ್ನು ನೀವು ದೂಷಣೆ ಮಾಡುವುದು ಸರಿಯಲ್ಲ. ಆದರೆ, ಕೇಂದ್ರ ಸರ್ಕಾರದ ಮೇಲೆ ಏನಾದರೂ ತಾವು ಸರಿಯಾಧ ನಿಖರವಾದ ಮಾಹಿತಿ ಪ್ರಕಾರ ಅವರು ಅನ್ಯಾಯ ಮಾಡಿದ್ದಾರೆ ಎಂದು ಹೇಳಿದರೆ ತಾವು ಕೊಟ್ಟ ಮಾಹಿತಿ ಪ್ರಕಾರ ಅವರು ಬಿಡುಗಡೆ ಮಾಡಿಲ್ಲವೆಂದರೆ ನಿಮ್ಮ ಜೊತೆ ನಾವೂ ಸಂಘರ್ಷಕ್ಕೆ ಬರುತ್ತೇವೆ. ಕೇಂದ್ರ ಸರ್ಕಾರದವರೂ ಹೆಚ್ಚಲ್ಲ ಯಾರೂ ಹೆಚ್ಚಲ್ಲ. ಆದರೆ, ನಿಖರವಾದ ಮಾಹಿತಿ ಇರಬೇಕಾಗುತ್ತದೆ. ಸುಮ್ಮನೆ ಗಾಳಿಯಲ್ಲಿ ಗುದ್ದಾಡಿದ ಹಾಗೆ, ಆರೋಪ ಮಾಡುವುದು ಸರಿಯಲ್ಲ. ಆಧಾರ ರಹಿತ ಆರೋಪವನ್ನು ಯಾರೂ ಮಾಡಬಾರದು. ನೀವೂ ಅವರ ಮೇಲೆ ಮಾಡಬಾರದು, ಅವರೂ ನಿಮ್ಮ ಮೇಲೆ ಮಾಡಬಾರದು. ಇವತ್ತು ರೈತರು ಸಾಯುತ್ತಿದ್ದಾರೆ. ಒಟ್ಟಿನಲ್ಲಿ ಬರ ಪರಿಹಾರದಲ್ಲಿ ಕಾಮಗಾರಿಗಳನ್ನು ಕೆಲವು ತಾಲ್ಲೂಕುಗಳಲ್ಲಿ ಸ್ವಲ್ಪ ಯಶಸ್ವಿಯಾಗಿ ಮಾಡಿರಬಹುದು. ಯಾವ ಕೂಲಿಯನ್ನೂ ಕೊಟ್ಟಿಲ್ಲ. ಕೆಲಸ ಮಾಡುವವರಿಗೆ ಯಾವ ಕೆಲಸವನ್ನು ಕೊಟ್ಟಿಲ್ಲ. ಜೆಸಿಬಿಯವರ ಪಾಲಾಗಿದೆ. ಕೆಲವು ಗುತ್ತಿಗೆದಾರರ ಪಾಲಾಗಿದೆ. ಕೆಲವು ಕಡೆ ಅಲ್ಲಿರುವ ಸ್ಥಳೀಯ ಕಾರ್ಯಕರ್ತರ, ಕಾಂಟ್ರಾಕ್ಟ್‌ದಾರರ ಪಾಲಾಗಿರಬಹುದು; ಆದ್ದರಿಂದ, 2–3 ಡಿಮಾಂಡ್‌ಗಳನ್ನು ನಾನು ಮಾಡುತ್ತಿದ್ದೇನೆ. ಅಕ್ರಮವನ್ನು ಎನ್‌ಕ್ವಯರಿ ಮಾಡಿ ಎಂದು ಕಳುಹಿಸಿರುವ ಲೋಕಾಯುಕ್ತ ಎಸ್‌ಪಿಯವರ ವರದಿಯನ್ನು ಬಹಿರಂಗ ಮಾಡುವುದು, ಶ್ವೇತಪತ್ರವನ್ನು ಹೊರಡಿಸುವುದು, ಮತ್ತೆ ಬೆಳೆ ಪರಿಹಾರ ಇನ್‌ಷೂರೆನ್ಸ್‌ಗೆ ಕೇವಲ 30 ಕೋಟಿ ರೂಪಾಯಿ ಇಟ್ಟಿದ್ದೀರಿ. 80 ಕೋಟಿ ರೂಪಾಯಿ ಇಡುತ್ತೇವೆಂದು ಹೇಳಿ, ಬಜೆಟ್‌ನಲ್ಲಿ ಕೇವಲ 30 ಕೋಟಿ ರೂಪಾಯಿ ಇಟ್ಟಿದ್ದೀರಿ. ನಮಗೆ 450 ಕೋಟಿ ರೂಪಾಯಿ ಪರಿಹಾರ ಬೇಕಾಗುತ್ತದೆ. ಆಂಧ್ರಪ್ರದೇಶದವರು ಸುಮಾರು 222 ಕೋಟಿ ರೂಪಾಯಿಗಳನ್ನು ಈಗಾಗಲೇ ತೆಗೆದುಕೊಂಡಿದ್ದಾರೆ. ಅದರಲ್ಲೂ ನಮ್ಮ ಸರ್ಕಾರ ವಿಫಲವಾಗಿದೆ. ಅದಕ್ಕೆ ನೀವು ಇನ್ನು ಬಜೆಟ್

ಪ್ರಾವಿಷನ್ ಮಾಡಿಲ್ಲ. ಅದನ್ನು ಏನು ಮಾಡುತ್ತೀರಿ, ಅದನ್ನು ಮಾಡಬೇಕು ಹಾಗೂ ರೈತರಿಂದ ತಾವೇನು ಈಗ ಸಾಲ ವಸೂಲಿ ಮಾಡುತ್ತಿದ್ದೀರಿ ಅದನ್ನು ಈ ತಕ್ಷಣವೇ ನಿಲ್ಲಿಸಬೇಕು. ಮಧ್ಯಮಾವಧಿಯನ್ನು ದೀರ್ಘಾವಧಿಯನ್ನಾಗಿಸುವುದರ ಜೊತೆಗೆ ಸಂಪೂರ್ಣವಾಗಿ ಬಡ್ಡಿಯನ್ನು ಮನ್ನಾ ಮಾಡಬೇಕು. ಇಲ್ಲದೇ ಹೋದರೆ ಯಾವ ರೈತರೂ ಕೂಡ ಬಡ್ಡಿಯನ್ನು ಕೊಡುವುದಕ್ಕಾಗುವುದಿಲ್ಲ. ಇಷ್ಟೊಂದು ಒತ್ತಾಯವನ್ನು ನಾವು ಮಾಡುತ್ತಾ, ಮತ್ತೊಮ್ಮೆ ಈ ಸರ್ಕಾರಕ್ಕೆ ಏನಾದರೂ ನೀವು ವಿರೋಧ ಪಕ್ಷಕ್ಕೆ ಬೆಲೆ ಕೊಡುವುದು ಇದ್ದರೆ, ಅಥವಾ ನಿಮಗೆ ನೀವು ಬೆಲೆ ಕೊಡತಕ್ಕಂಥದ್ದು ಇದ್ದರೆ, 1972ನೇ ಇಸ್ವಿಯಲ್ಲಿ ಕೇವಲ 5 ಜಿಲ್ಲೆಗಳಲ್ಲಿ ಸ್ವಲ್ಪ ಬರಗಾಲ ಬಂದಾಗ ನಿಮ್ಮ ಪಕ್ಷದ ಮುಖ್ಯಮಂತ್ರಿಗಳೇ ಎದ್ದು ನಿಂತು ಬಹಳ ಉದಾತ್ತವಾದ ಮನಸ್ಸಿನಿಂದ, ಆಯಿತು ಒನ್ ಮ್ಯಾನ್ ಎನ್‌ಕ್ವಯಿರಿ ಕಮಿಷನ್ ಮಾಡುತ್ತೇವೆಂದು ಹೇಳಿ ಅಂದಿನ ಕಾಲದಲ್ಲಿ ಒಬ್ಬ ಶಾಸಕರನ್ನು ನೇಮಕ ಮಾಡಿದ್ದರಿಂದ ಅವರು 8–10 ದಿವಸಗಳ ಕಾಲ ಆ ಭಾಗದಲ್ಲಿ ಪ್ರವಾಸ ಮಾಡಿ ಕೊಟ್ಟಂಥ ವರದಿಯ ಬಗ್ಗೆ ಚರ್ಚೆಯಾಯಿತು. ಇವತ್ತು ಅದಕ್ಕಿಂತ ಭೀಕರವಾದ ಬರಗಾಲ ಬಂದಿರುವಾಗ ಹೆಚ್ಚು ಆರೋಪದ ದೂರು ಇರುವಾಗ ಇದನ್ನು ವಿಚಾರಣೆ ಮಾಡುವುದಕ್ಕೋಸ್ಕರ ಒಂದು ಜಂಟಿ ಸದನ ಸಮಿತಿಯನ್ನು ನೇಮಿಸಬೇಕು. ಇದಕ್ಕೆ ನಾವೆಲ್ಲರೂ ಒತ್ತಾಯವನ್ನು ಮಾಡುತ್ತಿದ್ದೇವೆ. ಇತರೆ ಬೇಡಿಕೆಗಳ ಬಗ್ಗೆಯು ಗಮನ ಹರಿಸುವುದರ ಜೊತೆಗೆ ಸರ್ಕಾರ ಇದಕ್ಕೆ ಒಪ್ಪಬೇಕೆಂದು ಹೇಳುತ್ತಾ, ನನಗೆ ಅವಕಾಶ ಕೊಟ್ಟಂಥ ಮಾನ್ಯ ಛೇರ್ಮನ್‌ರವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಕರಿಯಣ್ಣ (ಹೊಳೆಹೊನ್ನೂರು) : ಮಾನ್ಯ ಛೇರ್ಮನ್‌ರವರೆ, ಇವತ್ತು ನಮ್ಮ ರಾಜ್ಯದಲ್ಲಿ ಕಳೆದ ಎರಡೂ–ಮೂರು ವರ್ಷಗಳಿಂದ ಬರಗಾಲ ಪರಿಸ್ಥಿತಿ ಬಂದಿದೆ. ಆದರೆ ಈ ಬರಗಾಲ ನಿಜಕ್ಕೂ ಅತ್ಯಂತ ವಿಷಾದಪಡತಕ್ಕಂಥ ಮತ್ತು ಭೀಕರವಾದ ಬರಗಾಲ ಅಂದರೆ, ಅದು ಅತಿಶಯೋಕ್ತಿಯಾಗಲಾರದು, ಕಾರಣ ನಾನು ಮಲ್ನಾಡು ಜಿಲ್ಲೆಯಿಂದ ಬಂದಂಥವನು. ಮಲ್ನಾಡು ಮತ್ತು ಬಯಲುಸೀಮೆ ಎರಡು ಪ್ರದೇಶಗಳೂ ನನ್ನ ಕ್ಷೇತ್ರದಲ್ಲಿ ಬಂದಿವೆ. ಹಾಗೆಯೇ ನೀರಾವರಿ ಪ್ರದೇಶವೂ ಇದ್ದು ನಮ್ಮಲ್ಲಿ ಭದ್ರಾ ಡ್ಯಾಂ ಹಾಗೂ ತುಂಗಾ ಅಣ್ಣೆಕಟ್ಟು ಇದ್ದು ಈ ತರಹದ ನೀರಾವರಿ ಪ್ರದೇಶದಿಂದ ಬಂದಂಥವನು. ಆದರೆ ಇವತ್ತಿನ ದಿವಸ ಎಂಥ ಭೀಕರ ಬರಗಾಲದ ಪರಿಸ್ಥಿತಿ ನೋಡಿದ್ದೇನೆಂದು ಹೇಳಿದರೆ ಇವತ್ತು ಭದ್ರಾ ಡ್ಯಾಂನಲ್ಲಿ ನೀರು ಇಲ್ಲದಂಥ ಪರಿಸ್ಥಿತಿ. ತುಂಗಾದಲ್ಲಿ ಕೂಡ ನೀರು ಇಲ್ಲದಂಥ ಪರಿಸ್ಥಿತಿ, ನಾನು ಹುಟ್ಟಿನಿಂದ ಸಹಿತ ತುಂಗಾ ನದಿ ಬತ್ತಿರುವುದನ್ನೇ ನೋಡಿರಲಿಲ್ಲ. ಇವತ್ತು ತುಂಗಾ ಹಾಗೂ ಭದ್ರಾ ನದಿಗಳೆರಡೂ ಬತ್ತಿ ಹೋಗಿರುವ ಪರಿಸ್ಥಿತಿಯನ್ನು ಕಂಡಂಥ ಭೀಕರವಾದಂಥ ಬರಗಾಲ. ಇಂಥ ಒಂದು ಪರಿಸ್ಥಿತಿಯಲ್ಲಿ ಹೇಳುವುದಾದರೆ ನಾನು ಯಾವಾಗಲೂ ಸಹಿತ ಇಂಥ ಭೀಕರವಾದ ಬರಗಾಲ ಪರಿಸ್ಥಿತಿಯನ್ನು ಕಂಡಿಲ್ಲ. ಹಾಗೆಯೇ ನಮ್ಮ ಚೆನ್ನಗಿರಿ ತಾಲ್ಲೂಕು ನನಗೆ ಸೇರುತ್ತದೆ ಅದು ಬಯಲುಸೀಮೆ ಪ್ರದೇಶವಾದರೂ ಅಲ್ಲಿ ನಾವು ಗ್ರೌಂಡ್ ವಾಟರ್ ತೆಗೆದು ಅಂದರೆ ಭೂಮಿಯ ಒಳಗಡೆ ಇರತಕ್ಕಂಥ ನೀರನ್ನು ತೆಗೆದು ಅಡಿಕೆ ತೋಟಗಳನ್ನು ಮಾಡತಕ್ಕಂಥ ಒಂದು ಪದ್ಧತಿಯಿದ್ದು, ಅಲ್ಲಿ ಸುಮಾರು 25 ಸಾವಿರದಿಂದ 55 ಸಾವಿರ ಎಕರೆಯವರೆವಿಗೂ ಅಡಿಕೆ ತೋಟಗಳನ್ನು ನಾವು ಬೋರ್‌ವೆಲ್‌ನಿಂದ ರೈತಾಪಿ ಜನಗಳು ಅಷ್ಟೊಂದು ಕಷ್ಟಪಟ್ಟು ಮಾಡಿದ್ದಾರೆ. ಇಂಥ ಪ್ರದೇಶದಲ್ಲಿ ಇವತ್ತು ಸುಮಾರು 7 ರಿಂದ 8 ಸಾವಿರ ಎಕರೆ ಅಡಿಕೆ ತೋಟದ ಪ್ರದೇಶ ಒಣಗಿದೆ. ರೈತ ಅವನು ತನ್ನ ಜೀವನದಲ್ಲಿ ಮತ್ತೊಮ್ಮೆ ಈ

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣ ಪರಿಷ್ಕರಿಸಿಲ್ಲವೆಂದು ಸೂಚಿಸುತ್ತದೆ.)

ತೋಟಗಳನ್ನು ಸೃಷ್ಟಿ ಮಾಡಿಕೊಳ್ಳುವುದಕ್ಕೆ ಆಗುತ್ತದೆಯೋ ಇಲ್ಲವೋ ಎನ್ನುವಂಥ ಪರಿಸ್ಥಿತಿ ಅಲ್ಲಿ ಒದಗಿದೆ. ಆ ಜನಗಳ ರೈತರ ಕಷ್ಟಗಳನ್ನು ನೋಡಿದರೆ, ಏನೋ ಒಂದು ವರ್ಷ ಜೋಳವಾಗಲಿ, ರಾಗಿಯಾಗಲಿ, ಬಾರದೇ ಹೋದರೆ ಬತ್ತಬಾರದೇ ಹೋದರೆ ಯಾರು ಬೇಕಾದರೂ ಸುಧಾರಿಸಬಹುದು. ಆದರೆ ಒಂದು ಅಡಿಕೆ ತೋಟ, ಒಂದು ತೆಂಗಿನ ತೋಟ ಮಾಡಬೇಕಾದರೆ ಸುಮಾರು ಹತ್ತು ವರ್ಷಗಳ ಶ್ರಮ ಪಡಬೇಕಾಗುತ್ತದೆ ಹಾಗೆಯೇ ನಾವು ಅದಕ್ಕೆ ಸಾಕಷ್ಟು ಹಣವನ್ನು ವ್ಯಯಿಸಬೇಕಾಗುತ್ತದೆ. ಆ ಕಾರಣದಿಂಥ ಒಂದು ಸಾರಿ ಅಡಿಕೆ ತೋಟ ಒಣಗಿ ಹೋದರೆ ಅವನ ಜೀವ ಮಾನವೇ ಹೋದಂಥ ಪರಿಸ್ಥಿತಿ ಸೃಷ್ಟಿಯಾಗತಕ್ಕಂಥ ಒಂದು ವಾತಾವರಣ ಅಲ್ಲಿ ನಮ್ಮಲ್ಲಿ ಭಯಾನಕವಾದಂಥ ವಾತಾವರಣ ಈ ಒಂದು ಭೀಕರವಾದ ಬರಗಾಲದಿಂದ ಬಂದಿದೆ. ನಾವು ಯಾವಾಗಲೂ ಸಹಿತ ಬರಗಾಲವನ್ನು ಯಾವ ರೀತಿ ನೋಡುತ್ತಿದ್ದೆವು ಅಂದರೆ ನಾವು ಅನೇಕ ಸಾರಿ ಕೇಳಿದ್ದೇವೆ. ಏಕೆಂದರೆ, ಸ್ವಲ್ಪ ಅಂಕಿಅಂಶಗಳನ್ನು ಕೊಟ್ಟು ನಮ್ಮ ಸರ್ಕಾರ, ಆ ಸರ್ಕಾರ, ಈ ಸರ್ಕಾರ ಎಂದು ಹೇಳತಕ್ಕಂಥ ಆಪಾದನೇ ಮಾಡದೇ, ನಾನು ಏನು ಹೇಳುತ್ತೇನೆಂದರೆ, ನಾವೆಲ್ಲರೂ ಚುನಾಯಿತ ಪ್ರತಿನಿಧಿಗಳು. ಇವತ್ತು ಈ ಭೀಕರವಾದ ಬರಗಾಲವನ್ನು ಎಲ್ಲರೂ ಸಹಿತ ಸಾಮೂಹಿಕವಾಗಿ ಎದುರಿಸಬೇಕಾಗುತ್ತದೆ. ರೈತರಿಗೆ ಧೈರ್ಯವನ್ನು ತುಂಬಬೇಕಾಗುತ್ತದೆ. ಅವರಿಗೆ ಬೇಕಾದಂಥ ಸವಲತ್ತುಗಳನ್ನು ಕೊಡಬೇಕಾಗುತ್ತದೆ. ಅದು ಬಿಟ್ಟು ನಾವು ಬೇರೆ ಬೇರೆ ದಾರಿಯಲ್ಲಿ ಹೋಗುತ್ತಿದ್ದಿವೇನೋ ಒಬ್ಬರ ಮೇಲೆ ಒಬ್ಬರು ಅಪಾದನೆ ಮಾಡಿಕೊಂಡು, ಆ ರೈತನ ಹಿತಕ್ಕೆ ಧಕ್ಕೆ ತರುವುದಕ್ಕೆ ಪ್ರಯತ್ನ ಮಾಡುತ್ತಿದ್ದಿವೇನೋ ಅಥವಾ ಅವನ ಕಷ್ಟಕ್ಕೆ ನಾವು ಆಗದೇ ಇರತಕ್ಕಂಥ ಪ್ರಯತ್ನ ಮಾಡುತ್ತಿದ್ದಿವೇನೋ ಅನ್ನತಕ್ಕಂಥ ವಾತಾವರಣ ಈ ಸದನದಲ್ಲಿರತಕ್ಕಂಥ ನಮಗೆ ಅನ್ನಿಸುತ್ತದೆ. ಏಕೆಂದರೆ, ಅಂಥ ಭೀಕರವಾದ ಪರಿಸ್ಥಿತಿಯನ್ನು ನಾವಿಂದು ನೋಡಿದ್ದೇವೆ. ಸಾಮಾನ್ಯವಾಗಿ 4–5 ಜಿಲ್ಲೆಗಳಲ್ಲಿ ಮಾತ್ರ ಸದಾಕಾಲ ಬರಗಾಲ ಇದೆ ಎಂದು ಕೇಳುತ್ತಿದ್ದೆವು. ಗುಲ್ಬರ್ಗಾ, ಬಳ್ಳಾರಿ, ಬಿಜಾಪುರ, ಕೋಲಾರ, ತುಮಕೂರು ಇರಬಹುದು, ಇಂಥ ಜಿಲ್ಲೆಗಳಲ್ಲಿ ಸ್ವಲ್ಪ ಕೆಲವೇ ತಾಲ್ಲೂಕುಗಳಲ್ಲಿ ಬರಗಾಲ ಒದೆ/ ಎನ್ನುವುದನ್ನು ಕೇಳಿದ್ದೆವು. ಇವತ್ತು 175 ತಾಲ್ಲೂಕು ಇರತಕ್ಕಂಥ ಈ ರಾಜ್ಯದಲ್ಲಿ ಸುಮಾರು 152 ತಾಲ್ಲೂಕಗಳಲ್ಲಿ ಬರಗಾಲ ಇದೆ. ಅದರಲ್ಲೂ ಸದಾಕಾಲ ಮಳೆ ಸುರಿಯತಕ್ಕಂಥ ಪ್ರದೇಶಗಳಾದ ಮಲ್ನಾಡು ಜಿಲ್ಲೆಗಳಲ್ಲಿ ಇವತ್ತು ಬರಗಾಲವನ್ನು ನೋಡುತ್ತೇವೆಂದರೆ ನಾವು ಚುನಾಯಿತ ಪ್ರತಿನಿಧಿಗಳು ಇದರ ಬಗ್ಗೆ ಆಪಾದನೆ ಮಾಡುವುದರ ಬದಲು ಇದರ ಮೂಲ ಹುಡುಕಿ ನಾವು ಏನಾದರೂ ರೈತರಿಗೆ ಸಹಾಯ ಮಾಡುವುದಕ್ಕೆ ಯೋಚನೆ ಮಾಡಿದರೆ ಚೆನ್ನಾಗಿತ್ತೆಂದು ಅನ್ನಿಸುತ್ತದೆ. ನಾನು ಚಿಕ್ಕ ಹುಡುಗನಾಗಿದ್ದಾಗ ನನಗೆ ಸ್ವಲ್ಪ ಬುದ್ಧಿ ಬಂದಾಗ ಆಗ 4–5 ವರ್ಷ ಇರಬಹುದು. ಶಿವಮೊಗ್ಗದಲ್ಲಿ ಮಳೆ ಬರುತ್ತದೆ ಎಂದರೆ ಸುಮಾರು ತಿಂಗಾಳಾನುಗಟ್ಟಲೆ ಮನೆಯಿಂದ ಆಚೆ ಬರುವ ಪರಿಸ್ಥಿತಿ ಇರಲಿಲ್ಲ. ಅಷ್ಟೊಂದು ಮಳೆ ಬರುತ್ತಿತ್ತು. ಛತ್ರಿ ಹಿಡಿದುಕೊಂಡು ಎಲ್ಲರೂ ಬರಬೇಕಾಗುತ್ತದೆ. ಎಲ್ಲರ ಕೈಯಲ್ಲೂ ಛತ್ರಿ, ರೇನ್ ಕೋಟುಗಳು, ಕಾಲಿಗೂ ಕೂಡ ರೈನ್ ಬೂಟುಗಳು, ಆದರೆ ಇವತ್ತು ಎಲ್ಲಿಯೂ ಛತ್ರಿ ಕಾಣುತ್ತಿಲ್ಲ. ರೇನ್ ಕೋಟುಗಳು ರೈನ್ ಬೂಟು ಕಾಣುತ್ತಿಲ್ಲ. ಇಂಥ ಒಂದು ವಾತಾವರಣ ಇದೆ. ಮೊದಲು ಎಲ್ಲಿ ನೋಡಿದರೂ ಕಪ್ಪೆಗಳ ಶಬ್ಧ ಕೇಳಿಸುತ್ತಿತ್ತು. ಈ ಕಪ್ಪೆಗಳನ್ನು ಚೈನಾ ದೇಶದವರು ಹಿಡಿದುಕೊಂಡು ಹೋಗುತ್ತಾರೆ ಏಕೆಂದರೆ ಅಲ್ಲಿ ತಿನ್ನುವುದಕ್ಕೆ ಬರುತ್ತದೆಂದು ಮೂಟೆಗಟ್ಟಲೆ ಹಿಡಿದುಕೊಂಡು ಹೋಗುತ್ತಾರೆಂದು ಆಪಾದನೆ ಇತ್ತು. ಇಂಥ ಒಂದು

ಸಮೃದ್ಧಿಯಾದಂಥ ಪರಿಸ್ಥಿತಿಯನ್ನು ನೋಡಿದ್ದೆವು, ನಮ್ಮ ನದಿಗಳು ತುಂಬು ಹರಿಯುತ್ತವೆಂದು ಹೇಳಿದರೆ ಸುತ್ತಮುತ್ತ ತಗ್ಗು ಪ್ರದೇಶಗಳ 10–15 ಗ್ರಾಮಗಳು ಮುಳುಗಿ ಹೋಗುತ್ತಿವೆ ಎಂದು ನಾವು ರಾತ್ರಿ ಹೋಗಿ ಮುಳುಗಡೆಯಾಗುವಂಥ ಪ್ರದೇಶಗಳಲ್ಲಿನ ಜನಗಳನ್ನು ಶಾಲೆಗಳ ಆವರಣದಲ್ಲೋ ಅಥವಾ ಬೇರೆ ಕಡೆ ವರ್ಗಾವಣೆ ಮಾಡಿ ಅವರನ್ನು ಬದುಕಿಸುತ್ತಿದ್ದೆವು. ಇವತ್ತು ಇಡೀ ಪ್ರಪಂಚದಲ್ಲಿ ಮಳೆಯ ವಾತಾವರಣ ಆದರೆ ಬದಲಿಯಾಗಿ ಪ್ರಪಂಚದ ಅನೇಕ ಕಡೆಗಳಲ್ಲಿ ಬರಗಾಲ ಬರುವುದರ ಜೊತೆಯಲ್ಲಿ ಇಡೀ ಭಾರತದಲ್ಲಿ ಸುಮಾರು 13–14 ರಾಜ್ಯಗಳಲ್ಲಿ ಇವತ್ತು ಬರಗಾಲದ ಪರಿಸ್ಥಿತಿ ಬಂದಿದೆ. ಕೇವಲ ಕರ್ನಾಟಕದಲ್ಲಿ ಅಲ್ಲ. ಯಾರೋ ಹೇಳುತ್ತಿದ್ದರು ನಮ್ಮ ಸರ್ಕಾರ ಇದ್ದಾಗ ನಾವು ಹೋಗಿ ಪೂಜೆ ಮಾಡುತ್ತಿದ್ದೆವು, ನಿಮ್ಮ ಸರ್ಕಾರ ಇದ್ದಾಗ ಬರಲಿಲ್ಲ ಎಂದು. ಹಾಗಾದರೆ ಬೇರೆ ರಾಜ್ಯಗಳಲ್ಲಿ ಅಂದರೆ ದಕ್ಷಿಣ ಭಾರತ ರಾಜ್ಯಗಳಲ್ಲಿ ತಮಿಳುನಾಡಿನಲ್ಲಿ ಏಕೆ ಮಳೆ ಬರಲಿಲ್ಲ. ಗೋವಾದಲ್ಲಿ ಕಳೆದ ವರ್ಷ ಮಳೆಯಾಗಿಲ್ಲ. ಆಂಧ್ರ ಪ್ರದೇಶದಲ್ಲೂ ಕಳೆದ ವರ್ಷ ಮಳೆಯಾಗಿಲ್ಲ. ಅವರೆಲ್ಲಾ ಏನಾಗಿ ಹೋದರು? ಈ ಮುಖ್ಯ ಮಂತ್ರಿಗಳು ಪೂಜೆಮಾಡಲಿಲ್ಲ ಆ ಮುಖ್ಯಮಂತ್ರಿಗಳು ಪೂಜೆ ಮಾಡಿದರು ಅಂತ ಮಳೆ ಆಯಿತಾ? ನಮ್ಮ ಸರ್ಕಾರ ನಮ್ಮ ಸರ್ಕಾರ ಎಂದು ಹೇಳುತ್ತಾರೆ.

ಶ್ರೀ ಶಿವಾನಂದ ಎಸ್. ಪಾಟೀಲ್ : ಮಾನ್ಯ ಕರಿಯಣ್ಣನವರು ಹೇಳಿದರು. ಹೋದವರ್ಷ ಕೂಡ 18 ರಾಜ್ಯಗಳಲ್ಲಿ ಬರಗಾಲ ಇತ್ತು ಈ ಸಾರಿ ಅಲ್ಲ.

ಶ್ರೀ ಕರಿಯಣ್ಣ : ಹೋದ ವರ್ಷ ಬರಗಾಲ ಇತ್ತು. ಈ ವರ್ಷವೂ 4–5 ರಾಜ್ಯಗಳಲ್ಲಿ ಮಳೆ ಬಂದಿಲ್ಲ. ಅದರಲ್ಲೂ ಆಂಧ್ರದಲ್ಲಿ ಕೂಡ ಅರ್ಧ ಮಳೆ ಬಂದಿದೆ ಇನ್ನು ಅರ್ಧಭಾಗ ಮಳೆ ಬಂದಿಲ್ಲ. ನೀವು ಹೇಳಿದ ಹಾಗೆ ಮಹರಾಷ್ಟ್ರದಲ್ಲಿ ಕೆಲವು ಸಮುದ್ರ ತೀರದಲ್ಲಿ ಇರತಕ್ಕಂಥ ಪ್ರದೇಶಗಳಲ್ಲಿ ಮಳೆ ಬಂದಿದೆ. ಕೆಲವು ಜಿಲ್ಲೆಗಳಲ್ಲಿ ಮಳೆ ಬಂದಿಲ್ಲ. ಹೀಗಾಗಿ ಇನ್ನೂ ಅನೇಕ ರಾಜ್ಯಗಳಲ್ಲಿ ಮಳೆ ಬಾರದೇ ಇರತಕ್ಕಂಥ ವಾತಾವರಣ ಇದೆ. ನಾವು ಚಿಕ್ಕ ವಯಸ್ಸಿನಲ್ಲಿದ್ದಾಗ ಆಗಲೂ ಒಂದು ಸಾರಿ ಭೀಕರ ಬರಗಾಲ ಬಂದಿತ್ತು. ನನಗೆ ಆರೇಳು ವಯಸ್ಸು ಇರಬಹುದು. ಆಗ ನಮ್ಮ ಲಾಲಬಹುದ್ದೂರ ಶಾಸ್ತ್ರಿಯವರು ಪ್ರಧಾನಿಯಾಗಿದ್ದರು, ಇಡೀ ರಾಜ್ಯದಲ್ಲಿ ಬಿದಿರು ಅಕ್ಕಿ ಬಂದಿದೆ ಎಂದು ಬಿದಿರಕ್ಕಿಯನ್ನು ಊಟ ಮಾಡತಕ್ಕಂಥದ್ದು, ಆಗ ನಾವು ಆ ಆಹಾರದಲ್ಲಿ ಸ್ವಾವಲಂಬನೆಯನ್ನು ಕಂಡುಕೊಂಡಿರಲಿಲ್ಲ. ಅಂಥ ಒಂದು ಕಾಲದಲ್ಲಿ ಅಮೇರಿಕಾದಿಂದ ಮುಸುಕಿನ ಜೋಳ, ಕೆಂಪುಜೋಳ ತಂದು ಹುಳ ಬಿದ್ದಿರತಕ್ಕಂಥ ಜೋಳವನ್ನೂ ತೂರಿ ತಿಂದಂಥ ದಿನಗಳನ್ನು ನೋಡಿದ್ದೇವೆ. ಆ ದಿವಸ ಲಾಲಬಹದ್ದೂರ ಶಾಸ್ತ್ರಿಗಳು "ಜೈ ಜವಾನ್ ಜೈ ಕಿಸಾನ್" ಎಂದು ಘೋಷಣೆ ಮಾಡಿದ್ದರು. ಆ ದಿನಗಳಲ್ಲಿ ಪಾಕಿಸ್ತಾನದವರು ನಮ್ಮ ಮೇಲೆ ಯುದ್ಧ ಮಾಡುವುದಕ್ಕೆ ಬಂದಿದ್ದರು ಆ ದಿವಸ ನಮ್ಮ ಸೈನಿಕರು ಬಹಳ ದಿಟ್ಟತನದಿಂದ ಎದುರಿಸಿ ನಮ್ಮ ಬಾರ್ಡ್‌ರ್ ಅನ್ನು ಉಳಿಸಿರತಕ್ಕಂಥ ದಿವಸ. ಹಾಗೆಯೇ ನಮಗೆ ಬಹಳ ಭೀಕರವಾದ ಬರಗಾಲ ಬಂದಿದ್ದರಿಂದ, ಅವರು ಕಿಸಾನ್ ಅವರನ್ನು ಅಂದರೆ ರೈತರನ್ನು ತಾವು ಬೆಳೆಯನ್ನು ಬೆಳೆಯಬೇಕೆಂದು ಹೇಳಿ, ಅಂದಿನ ದಿವಸ ವಾರದಲ್ಲಿ ಒಂದು ದಿನ ಉಪವಾಸ ಇರಬೇಕು ಎನ್ನುವ ನಿಯಮವನ್ನು ಪಾಲನೆ ಮಾಡಬೇಕೆಂದು ಅಂದಿನ ಪ್ರಧಾನ ಮಂತ್ರಿಗಳು ಹೇಳಿದಂಥದ್ದು ನಮಗೆ ಇವತ್ತೂ ಸಹ ಜ್ಞಾಪಕವಿದೆ. ಆದರೆ, ಇವತ್ತು ನಾವು ಆ ಪರಿಸ್ಥಿತಿಯಲ್ಲಿ ಇಲ್ಲ. ಇವತ್ತಿನದಿವಸ ಆಹಾರ ಪದಾರ್ಥಗಳನ್ನು ಉತ್ಪಾದನೆ ಮಾಡುವುದರಲ್ಲಿ ನಾವು ಸ್ವಾವಲಂಬನೆಯಾಗಿದ್ದೇವೆ. ಹಾಗೆಯೇ

ವ್ಯವಸಾಯಕ್ಕೆ ಹೆಚ್ಚಿನ ಆದ್ಯತೆ ಕೊಟ್ಟು ಇವತ್ತಿನದಿವಸ ಹೆಚ್ಚಾಗಿ ಆಹಾರ ಪದಾರ್ಥಗಳನ್ನು ಬೆಳೆದು ಸ್ಟಾಕ್ ಮಾಡತಕ್ಕಂಥ ಶಕ್ತಿ ನಮ್ಮ ರಾಷ್ಟ್ರ ಹೊಂದಿದೆ. ಇಂಥ ಸಂದರ್ಭದಲ್ಲಿ ಈ ರೀತಿಯಾದ ಒಂದು ಬರಗಾಲವನ್ನು ಎದರಿಸುವುದಕ್ಕೆ ಕೇಂದ್ರ ಸರ್ಕಾರವೂ ಕೂಡ ನಮಗೆ ಹೆಚ್ಚಿನ ಸಹಾಯ ಮಾಡಬೇಕಾಗುತ್ತದೆ. ಕೇಂದ್ರ ಸರ್ಕಾರ ನಮಗೆ ಏನು ಸಹಾಯ ಮಾಡಿಲ್ಲ ಎಂದು ನಾನು ಕೇಂದ್ರ ಸರ್ಕಾರವನ್ನು ದೂರುತ್ತಿಲ್ಲ. ಆದರೆ, ಇವತ್ತಿನದಿವಸ ಕೇಂದ್ರ ಸರ್ಕಾರ ಆಂಧ್ರಪ್ರದೇಶಕ್ಕೊಂದು ಮತ್ತು ತಮಿಳುನಾಡಿಗೊಂದು ಹಾಗೂ ಕರ್ನಾಟಕ ರಾಜ್ಯಕ್ಕೊಂದು ರೀತಿಯ ಮಲತಾಯಿಧೋರಣೆ ನೀತಿಯನ್ನು ಅನುಸರಿಸುತ್ತಿದೆ. ನಾವು ಕೇಳಿದ್ದೇ ಕೇವಲ 11 ಲಕ್ಷ ಟನ್ ಅಕ್ಕಿ, ಒಂದು ವೇಳೆ ಜಾಸ್ತಿ ಕೇಳಿದ್ದರೆ ಹೆಚ್ಚಾಗಿ ಕೊಡುತ್ತಿದ್ದರೆಂದು ಈ ಸದನದಲ್ಲಿ ಕೆಲವರು ಪ್ರಾಸ್ತಾಪಮಾಡಿರತಕ್ಕಂಥದ್ದನ್ನು ನಾನು ಕೇಳಿಸಿಕೊಂಡಿದ್ದೇನೆ. ಈ ಸಂದರ್ಭದಲ್ಲಿ ನಾನು ಹೇಳುವುದೇನೆಂದರೆ, ಬರಗಾಲದ ಪ್ರದೇಶಗಳಿಗೆ ಪರಿಹಾರ ನೀಡುವುದಕ್ಕೋಸ್ಕರ ಕೇಂದ್ರ ಸರ್ಕಾರ ಒಂದು ನಾರ್ಮ್ಸ್‌ನ್ನು ಫಿಕ್ಸ್ ಮಾಡಿದೆ. ಅದರ ಪ್ರಕಾರವೇ ಬಿ.ಪಿ.ಎಲ್. ಸರ್ವೆಗೆ ಒಳಪಟ್ಟಿರತಕ್ಕಂಥ ಜನಸಂಖ್ಯೆಯ ಆಧಾರದ ಮೇಲೆ ನಮಗೆ ಸಹಾಯಧನ ಮತ್ತು ಅಕ್ಕಿಯನ್ನು ಕೊಡುತ್ತೇವೆಂದು ಹೇಳಿದ ಮೇಲೆ ನಾವು ಲೆಕ್ಕಾಚಾರ ಮಾಡಿ ಪ್ರಾಮಾಣಿಕವಾದ ಮಾಹಿತಿಯನ್ನು ಕೊಟ್ಟಿದ್ದೇವೆ ಎನ್ನತಕ್ಕಂಥದ್ದು ನಮ್ಮ ಸರ್ಕಾರದ ವಾದವಾಗಿದೆ. ಆದರೆ ನಮಗೆ ಕೊಡಬೇಕಾಗಿತಕ್ಕಂಥದನ್ನೆ ಸರಿಯಾಗಿ ಕೊಟ್ಟಿಲ್ಲ. ಆದರೆ, ಬಿ.ಪಿ.ಎಲ್. ಸರ್ವೆಯಾಗಲಿ ಅಥವಾ ಯಾವುದೇ ಲೆಕ್ಕಾಚಾರದ ಮಾಹಿತಿಗಳನ್ನು ಕೊಡದೇ ಇರತಕ್ಕಂಥ ಆಂಧ್ರ ಪ್ರದೇಶಕ್ಕೆ 47 ಲಕ್ಷ ಟನ್ ಅಕ್ಕಿಯನ್ನು ಕೊಟ್ಟಿದ್ದಾರೆ. ಇವತ್ತಿನದಿವಸ ಇಲ್ಲಿ ವಿವಿಧ ಪಕ್ಷದ ಜನಪ್ರತಿನಿಧಿಗಳು ಇದ್ದುಕೊಂಡು ನಮ್ಮ ರಾಜ್ಯದಲ್ಲಿ ಬಂದಿರತಕ್ಕಂಥ ಬರಗಾಲದಿಂದ ನಮ್ಮ ರೈತರನ್ನು ಕಾಪಾಡುವುದಕ್ಕೆ ನಾವು ಮಾಡಿದ ಪ್ರಯತ್ನವಾದರೂ ಏನು ಎನ್ನತಕ್ಕಂಥದ್ದರ ಬಗ್ಗೆ ಯೋಚನೆ ಮಾಡಬೇಕು. ಈಗಾಗಲೇ ಭೀಕರವಾದ ಬರಗಾಲವನ್ನು ಎದುರಿಸುತ್ತಿದ್ದು, ಇನ್ನು ಮುಂದೆಯೂ ಕೂಡ ನಾವು ಭೀಕರವಾದ ಬರಗಾಲವನ್ನು ಎದುರಿಸಬೇಕಾಗಿರುವುದರಿಂದ ಕೇಂದ್ರ ಸರ್ಕಾರದಿಂದ ನಮಗೆ ಹೆಚ್ಚಿನ ಸಹಾಯ ಬೇಕೆಂದು ಆಂಧ್ರಪ್ರದೇಶದಲ್ಲಿರತಕ್ಕಂಥ ಜನಪ್ರತಿನಿಧಿಗಳೆಲ್ಲರೂ ಸಹಿತ ಸದನದಲ್ಲಿ ಸಾಮೂಹಿಕ ನಿರ್ಣಯ ಮಾಡಿದ್ದಾರೆ ಎನ್ನತಕ್ಕಂಥದ್ದನ್ನು ನಾನು ಕೇಳಿದ್ದೇನೆ. ಆದರೆ, ಇಲ್ಲಿ ಬರಗಾಲ ಪರಿಹಾರದಲ್ಲಿ ಬಹಳಷ್ಟು ಭ್ರಷ್ಟಾಚಾರ ಆಗಿದೆ ಮತ್ತು ತೆಗೆದುಕೊಂಡಿರತಕ್ಕಂಥ ಸಹಾಯಧನವನ್ನು ಸಮರ್ಪಕವಾಗಿ ಉಪಯೋಗಿಸಿಲ್ಲ. ಆದ್ದರಿಂದ, ಇದರ ಬಗ್ಗೆ ತನಿಖೆ ಮಡುವುದಕ್ಕಾಗಿ ಸದನ ಸಮಿತಿಯನ್ನು ರಚನೆ ಮಾಡಿ ಎಂದು ನಮ್ಮ ಸದನದಲ್ಲಿ ಒತ್ತಾಯ ಮಾಡುತ್ತಿದ್ದೀರಿ. ಆದರೆ, ಇವತ್ತಿನದಿವಸ ನಾವು ಯಾರಿಗೆ ದ್ರೋಹ ಮಾಡುತ್ತಿದ್ದೇವೆ ಎನ್ನತಕ್ಕಂಥದ್ದನ್ನು ತಾವುಗಳು ಯೋಚನೆ ಮಾಡಬೇಕಾಗುತ್ತದೆ. ನಾವು ಯಾರಿಗೆ ದ್ರೋಹ ಮಾಡುತ್ತಿದ್ದೇವೆ ಎನ್ನತಕ್ಕಂಥದ್ದನ್ನು ತಾವೇ ಈ ಸಂದರ್ಭದಲ್ಲಿ ಹೇಳಬೇಕು. ಇವತ್ತಿನ ದಿವಸ ಅಲ್ಲೊಂದು ಇಲ್ಲೊಂದು ಸಣ್ಣ ಪುಟ್ಟ ತಪ್ಪುಗಳಾಗಿವೆ. ಅಗಿಲ್ಲವೆಂದು ಹೇಳುವುದಕ್ಕೆ ನಾನು ತಯಾರಿಲ್ಲ. ಏಕೆಂದರೆ, ಸಾವಿರಾರು ಕೆಲಸ ಮಾಡುವಾಗ ಸಣ್ಣಪುಟ್ಟ ತಪ್ಪುಗಳು ಆಗುತ್ತವೆ. ನಾವು ಮನೆ ಕಟ್ಟಿದಾಗ ಅಥವಾ ಮದುವೆ ಮಾಡುವ ಸಂದರ್ಭದಲ್ಲಿ ಎಲ್ಲರಿಗೂ ಹೇಳುವಾಗ ನಾಲ್ಕೈದು ಪರ್ಸೆಂಟ್‌ನಷ್ಟು ಬಹಳ ಮುಖ್ಯವಾಗಿರತಕ್ಕಂಥ ವ್ಯಕ್ತಿಗಳಿಗೆ ನಾವು ಹೇಳುವುದನ್ನು ಮರೆತಿರುತ್ತೇವೆ. ಹಾಗೆಯೇ ಒಂದು ಕಾರ್ಯಕ್ಕೆ ತರಬೇಕಾಗಿರತಕ್ಕಂಥ ಸಾಮಾನುಗಳನ್ನೆ ತಂದಿರುವುದಿಲ್ಲ. ಈ ರೀತಿಯಾದ ಒಂದು ಸಣ್ಣ ಪುಟ್ಟ ತಪ್ಪುಗಳು ಆಗುತ್ತವೆ. ಈ ರೀತಿಯಾದ

ಒಂದು ಸಣ್ಣ ತಪ್ಪನ್ನು ದೊಡ್ಡ ತಪ್ಪೆಂದು ಪ್ರಮಾದ ಮಾಡತಕ್ಕಂಥದ್ದು ಸರಿಯಲ್ಲ. ಕರ್ನಾಟಕ ರಾಜ್ಯದಲ್ಲಿ ಬರಗಾಲ ಪರಿಹಾರ ಕಾರ್ಯದಲ್ಲಿ ಅತ್ಯಂತ ಭೀಕರವಾದ ಭ್ರಷ್ಟಾಚಾರ ನಡೆದಿದೆ ಎಂದು ಈ ಸಭೆಯಲ್ಲಿ ಚರ್ಚೆ ಆಗತಕ್ಕಂಥ ವಿಚಾರ ಇಡೀ ದೇಶದಲ್ಲಿರತಕ್ಕಂಥ ಅನೇಕ ಪತ್ರಿಕೆಗಳಲ್ಲಿ ಪ್ರಕಟವಾಗುತ್ತದೆ. ಮತ್ತೆ ಇದರಿಂದ ಕೇಂದ್ರ ಸರ್ಕಾರದಿಂದ ನಮಗೆ ಬರತಕ್ಕಂಥ ಸಹಾಯಧನವಾದರೂ ಸಿಗುತ್ತದೆಯೆ? ಇದರ ಬಗ್ಗೆ ತಾವೇ ಯೋಚನೆ ಮಾಡಿ? ಇವತ್ತಿನದಿವಸ ಬರಗಾಲದ ತುತ್ತಿಗೆ ಸಿಲುಕಿ ಕೊಂಡಿರತಕ್ಕಂಥ ರೈತರ ರಕ್ಷಣೆ ಮಾಡುವುದಕ್ಕೆ ನಾವು ಹೊರಟಿದ್ದೇವೆ ಎನ್ನತಕ್ಕಂಥದ್ದನ್ನು ತಾವು ಸಹಿತ ಯೋಚನೆ ಮಾಡಿ ತೀರ್ಮಾನ ತೆಗೆದುಕೊಳ್ಳತಕ್ಕಂಥದ್ದು ಒಳ್ಳೆಯದು. ಏಕೆಂದರೆ, ಇಲ್ಲಿರತಕ್ಕಂಥ ಎಲ್ಲಾ ಜನಪ್ರತಿನಿಧಿಗಳು ಅವರ ಪರವಾಗಿ ಬಂದಿದ್ದೇವೆ. ಆದ್ದರಿಂದ, ಅವರಿಗೆ ಕಷ್ಟ ಬಂದಿರತಕ್ಕಂಥ ಸಂದರ್ಭದಲ್ಲಿ ನಾವು ಅವರ ಪರವಾಗಿ ಯೋಚನೆ ಮಾಡಬೇಕಾಗುತ್ತದೆ. ನಮ್ಮ ಸರ್ಕಾರ ರಾಜಕಾರಣ ಮಾಡಿದೆ ಎಂದು ಅವರು ಹೇಳಿದ್ದಾರೆ. ಆದರೆ, ನಮ್ಮ ಸರ್ಕಾರ ಯಾವುದೇ ರೀತಿಯ ರಾಜಕಾರಣ ಮಾಡಿಲ್ಲ. ಅವರ ಸರ್ಕಾರ ಇದ್ದಿದ್ದರೆ ಯಾವರೀತಿಯಾದ ರಾಜಕಾರಣ ಮಾಡುತ್ತಿತ್ತು ಎನ್ನತಕ್ಕಂಥದ್ದು ನನಗೆ ಗೊತ್ತಿಲ್ಲ. ನಮ್ಮ ರಾಜ್ಯದಲ್ಲಿ ಬರಗಾಲ ಎರಡನೇ ವರ್ಷದಿಂದ ಮೂರನೇ ವರ್ಷಕ್ಕೆ ಕಾಲಿಟ್ಟಂಥ ಸಂದರ್ಭದಲ್ಲಿ ನಮ್ಮ ಪಕ್ಷದ ಸರ್ಕಾರ ಮತ್ತು ಸನ್ಮಾನ್ಯ ಮುಖ್ಯಮಂತ್ರಿಯವರು ಯಾವುದೇ ರೀತಿಯ ರಾಜಕಾರಣ ಮಾಡದೇ ಈ ಬರಗಾಲವನ್ನು ನಿಭಾಯಿಸುವುದಕ್ಕೋಸ್ಕರ ಆಯಾಯ ಕ್ಷೇತ್ರದ ಶಾಸಕರನ್ನು ಟಾಸ್ಕ್ ಫೋರ್ಸ್ ಸಮಿತಿಯ ಅಧ್ಯಕ್ಷರನ್ನಾಗಿ ಮಾಡಿದ್ದಾರೆ. ಈಗಾಗಲೇ ಮಾತನಾಡಿರತಕ್ಕಂಥ ಅನೇಕ ಜನ ಶಾಸಕರು ಈ ವಿಷಯವನ್ನು ಪ್ರಸ್ಥಾಪ ಮಾಡಿದ್ದಾರೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ : ಬರಗಾಲವನ್ನು ನಮ್ಮ ಸರ್ಕಾರ ಸಕ್ಸೆಸ್‌ಫುಲ್ ಆಗಿ ಎದುರಿಸಿದೆ ಎಂದು ತಾವು ಹೇಳುತ್ತಿದ್ದೀರಿ. ಆದರೆ, ಈ ಸಂದರ್ಭದಲ್ಲಿ ನಾನು ಕೇಳುವುದೇನೆಂದರೆ, ಎಷ್ಟು ಜಾನುವಾರುಗಳನ್ನು ಉಳಿಸಿಕೊಂಡಿದ್ದೀರಿ ಎನ್ನತಕ್ಕಂಥದ್ದನ್ನು ಈ ಸಂದರ್ಭದಲ್ಲಿ ತಾವು ಹೇಳಬೇಕಾಗುತ್ತದೆ.

ಶ್ರೀ ಕರಿಯಣ್ಣ : ಮಾನ್ಯ ಸದಸ್ಯರು ಈಗಾಗಲೇ ಸದರಿ ವಿಷಯದ ಬಗ್ಗೆ ಮಾತನಾಡಿದ್ದಾರೆ. ಅವರು ಮಾತನಾಡಿರತಕ್ಕಂಥದ್ದನ್ನು ನಾನು ಸ್ವಾಗತ ಮಾಡುತ್ತೇನೆ. ಕಾರಣ ಏನೆಂದರೆ, ಅವರ ಕ್ಷೇತ್ರದಲ್ಲಿ ನಿಜವಾಗಿಯೂ ಕೂಡ ಸಹಕಾರ ಕೊಟ್ಟಿದ್ದಾರೆ. ಮತ್ತು ಒಳ್ಳೆಯ ಕೆಲಸ ಮಾಡಿದ್ದಾರೆ. ಆದರೆ, ಇನ್ನು ಬಹಳಷ್ಟು ಮಾಡಬೇಕಾಗಿತ್ತು. ಆದರೆ ಮಾಡುವುದಕ್ಕೆ ಆಗಿಲ್ಲ. ಇನ್ನು ಸಹಿತ ನಮಗೆ ಹೆಚ್ಚಿಗೆ ಸಹಾಯ ಬೇಕಾಗಿತ್ತು ಎನ್ನತಕ್ಕಂಥ ವಿಷಯವನ್ನು ಅವರು ನನಗೆ ತಿಳಿಸಿದ್ದಾರೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ : ಬರಗಾಲ ತೀವ್ರತೆಯನ್ನು ನೀವು ಇನ್ನೂ ಅರಿತು ಕೊಂಡಿಲ್ಲ...

ಗೊಂದಲ

ಶ್ರೀ ಬಿ. ರಮಾನಾಥ್ ರೈ (ಸಾರಿಗೆ ಸಚಿವರು) : ನಿಮ್ಮ ಅಧ್ಯಕ್ಷತೆಯಲ್ಲಿಯೇ ಇವತ್ತಿನದಿವಸ ಟಾಸ್ಕ್‌ಫೋರ್ಸ್ ಸಮಿತಿ ರಚನೆ ಮಾಡಲಾಗಿದೆ. ಅಲ್ಲಿ ನೀವು ಏನು ಸಾಧನೆ ಮಾಡಿದ್ದೀರಿ ಎನ್ನತಕ್ಕಂಥದ್ದನ್ನು ತಾವು ಮೊದಲು ಹೇಳಿ? ಸುಮ್ಮನೆ ಏನೇನೋ ಮಾತನಾಡುವುದಕ್ಕೆ ಹೋಗಬೇಡಿ.

ಶ್ರೀ ಶಿವಾನಂದ ಎಸ್. ಪಾಟೀಲ್ : ಮಲೆನಾಡು ಪ್ರದೇಶದಿಂದ ಬಂದಿರತಕ್ಕಂಥ ಮಾನ್ಯ ರಮಾನಾಥ್ ರೈರವರು ಬರಗಾಲದ ಬಗ್ಗೆ ಮಾತನಾಡುತ್ತಿದ್ದಾರೆ. ನಿಮ್ಮ ಜಿಲ್ಲೆಯಲ್ಲಿ ಬರಗಾಲ ಬಂದಿದೆಯೇ? ನಿಮ್ಮನ್ನು ನೋಡಿದರೆ ಅಲ್ಲಿ ಬರಗಾಲ ಬಂದಿದೆ ಎಂದು ನಮಗೆ ಅನಿಸುವುದಿಲ್ಲ.

ಶ್ರೀ ಬಿ. ರಮಾನಾಥ್ ರೈ : ನೀವು ಆ ಊರಿಗೆ ಬಂದಿದ್ದರೆ ಪರಿಸ್ಥಿತಿ ಚಿಂತಾಜನಕ ಆಗುತ್ತಿತ್ತು.

ಗೊಂದಲ

ಶ್ರೀ ಕೆ. ಶ್ರೀನಿವಾಸ ಗೌಡ (ಕುಡುವನಹಳ್ಳಿ) : ಬರಗಾಲದ ಕಾಮಗಾರಿಯಲ್ಲಿ ಸಾಕಷ್ಟು ಭ್ರಷ್ಟಾಚಾರ ಆಗಿದೆ ಎಂದು ಈ ಸದನದಲ್ಲಿ ನಾವು ಹೇಳುತ್ತಿದ್ದೇವೆ. ಆದರೆ, ಅವೆಲ್ಲವನ್ನು ಮುಚ್ಚಿಟ್ಟುಕೊಂಡು ಕೇಂದ್ರ ಸರ್ಕಾರಕ್ಕೆ ವರದಿ ಕೊಡಬೇಕು ಎನ್ನತಕ್ಕಂಥ ಭಾವನೆಯನ್ನು ತಾವು ವ್ಯಕ್ತ ಮಾಡುತ್ತಿದ್ದೀರಿ. ಹಾಗೆಯೇ ಆಂಧ್ರಪ್ರದೇಶ ರಾಜ್ಯಕ್ಕೆ ಎಲ್ಲಾ ರೀತಿಯ ಸಹಾಯವನ್ನು ಒದಗಿಸಿಕೊಟ್ಟಿದ್ದೀರಿ ಎನ್ನತಕ್ಕಂಥದ್ದನ್ನು ತಾವು ಹೇಳುತ್ತಿದ್ದೀರಿ. ಆದರೆ, ಇವತ್ತಿನದಿವಸ ನಿಮ್ಮ ಪಕ್ಷದ ವಿರೋಧಪಕ್ಷದ ನಾಯಕರೇ 258 ದಿವಸಗಳವರೆಗೆ ಹಳ್ಳಿಹಳ್ಳಿಗಳಿಗೆ ಹೋಗಿ ಈ ಬರಗಾಲ ಕಾಮಗಾರಿಯಲ್ಲಿ ಇದೆಲ್ಲಾ ಆಗಿದೆ ಎಂದು ಹೇಳಿಕೊಂಡು ಬಂದಿದ್ದಾರೆ. ನಿಮ್ಮ ಪಕ್ಷದವರು ಈ ವಿಷಯವನ್ನು ಮಾತನಾಡಿದರೆ ತಪ್ಪಿಲ್ಲ. ಆದರೆ, ಇಲ್ಲಿ ವಿರೋಧಪಕ್ಷದಲ್ಲಿದ್ದವರು ಮಾತನಾಡಿದರೆ ತಪ್ಪೆ? ತಾವು ದಯವಿಟ್ಟು ಸಮಾಧಾನವಾಗಿ ಚಿಂತನೆ ಮಾಡಿ ಮಾತನಾಡಿದರೆ ಒಳ್ಳೆಯದು.

ಶ್ರೀ ಬಿ. ರಮಾನಾಥ್ ರೈ : ನೀವು ಏಕೆ ಈ ರೀತಿ ಮಾತನಾಡುತ್ತಿದ್ದೀರಿ ಎನ್ನತಕ್ಕಂಥದ್ದು ಅರ್ಥವಾಯಿತು. ಇದಕ್ಕೆ ವಿರೋಧ ಮಾಡಬೇಕೆಂಬ ದೃಷ್ಟಿಯಿಂದಲೇ ತಾವು ಈ ರೀತಿ ಮಾತನಾಡುತ್ತಿದ್ದೀರಿ.

ಶ್ರೀ ಕರಿಯಣ್ಣ : ಮಾನ್ಯ ಶ್ರೀನಿವಾಸ ಗೌಡರು ಬಹಳ ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ಏಕೆಂದರೆ, ಅವರೂ ಸಹಿತ ಶಾಸಕರಾಗಿದ್ದು, ಟಾಸ್ಕ್ ಫೋರ್ಸ್ ಸಮಿತಿಯ ಅಧ್ಯಕ್ಷರಾಗಿ ಬರಗಾಲ ಪರಿಹಾರಕ್ಕಾಗಿ ಬಂದಂಥ ಹಣವನ್ನು ಮತ್ತು ಅಕ್ಕಿ, ಕಾಳುಗಳನ್ನು ವಿತರಣೆ ಮಾಡತಕ್ಕಂಥ ಕೆಲಸವನ್ನು ಮಾಡಿಸಿದ್ದಾರೆ. ಬರಗಾಲದ ವಿಷಯಕ್ಕೆ ಸಂಬಂಧಪಟ್ಟಂತೆ ಮಾನ್ಯ ಸೋಮಶೇಖರ್‌ರವರು ಮತ್ತು ಮಾನ್ಯ ಸಿಂಧ್ಯಾರವರು ಹಾಗೂ ಮಾನ್ಯ ಎಸ್.ಎಸ್. ಪಾಟೀಲರು ಮತ್ತು ಮಾನ್ಯ ಶಿವಾನಂದ ಎಸ್. ಪಾಟೀಲರವರು ಮತ್ತು ಇನ್ನೂ ಅನೇಕ ಜನ ಶಾಸಕ ಮಿತ್ರರೂ ಕೂಡ ಮಾತನಾಡಿದ್ದಾರೆ. ಆದರೆ ಇವರೆಲ್ಲರೂ ಮಾತನಾಡತಕ್ಕಂಥ ಸಂದರ್ಭದಲ್ಲಿ ನಮ್ಮ ನಮ್ಮ ಕ್ಷೇತ್ರದಲ್ಲಿ ಇಷ್ಟಿಷ್ಟು ಭ್ರಷ್ಟಾಚಾರ ಆಗಿದೆ, ನೀವು ಇದನ್ನು ತನಿಖೆ ಮಾಡಿಸಬೇಕು ಎನ್ನುವಂಥ ವಿಚಾರವನ್ನು ಹೇಳಲಿಲ್ಲ. ಆದರೆ ರಾಜ್ಯದಲ್ಲಿ ಭ್ರಷ್ಟಾಚಾರವಾಗಿದೆ ಎನ್ನತಕ್ಕಂಥದ್ದನ್ನು ಮಾತ್ರ ಹೇಳುತ್ತಿದ್ದೀರಿ. ಟಾಸ್ಕ್ ಫೋರ್ಸ್ ಸಮಿತಿಗೆ ನಿಮ್ಮನ್ನು ಅಧ್ಯಕ್ಷರನ್ನಾಗಿ ಮಾಡಲಾಗಿದೆ. ತಾವೆಲ್ಲರೂ ಅಲ್ಲಿ ಭಾಷಣ ಮಾಡಿದ್ದೀರಿ. ಹಾಗೆಯೇ, ಅಲ್ಲಿ ನಡೆಯತಕ್ಕಂಥ ಕೆಲಸಗಳೆಲ್ಲವನ್ನು ತಾವೇ ವಹಿಸಿಕೊಟ್ಟಿದ್ದೀರಿ. ಆದ್ದರಿಂದ, ಯಾವ ಕ್ಷೇತ್ರದಲ್ಲಿ ಭ್ರಷ್ಟಾಚಾರ ಆಗಿದೆ ಎಂದು ಹೇಳಿದರೆ, ಅದನ್ನು ತನಿಖೆ ಮಾಡಿಸುವುದಕ್ಕೆ ಸರ್ಕಾರ ತಯಾರಿದೆ ಎಂದು ಮಾನ್ಯ ಗೃಹ ಸಚಿವರಾಗಿರತಕ್ಕಂಥ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಈಗಾಗಲೇ ಹೇಳಿದ್ದಾರೆ. ಇಷ್ಟು ಹೊತ್ತಿಗೆ ನೀವು ಯಾರಾದರೂ ದೂರು ಕೊಟ್ಟಿದ್ದರೆ ಖಂಡಿತ ತನಿಖೆ ಮಾಡಿಸುತ್ತಿದ್ದೆವು. ಮೂರು ತಿಂಗಳಿಂದ ಹೇಳದೆ ಈಗ ಚುನಾವಣೆ ದೃಷ್ಟಿಯಿಂದ ಈ ಶೃತಿಯನ್ನು ಎತ್ತುತ್ತಿದ್ದೀರಿ. ನಿಮ್ಮಗಳ ಕ್ಷೇತ್ರದಲ್ಲಿ ಏನಾದರೂ ಭ್ರಷ್ಟಚಾರ ಆಗಿದ್ದರೆ ಹೇಳಿ. ಆರೀತಿ ಏನಾದರೂ ಆಗಿದ್ದರೆ, ಅದನ್ನು ಸರ್ಕಾರ ಮುಚ್ಚಿಡುವುದಕ್ಕೆ ತಯಾರಿಲ್ಲ. ಅದನ್ನು ತನಿಖೆ ಮಾಡಿಸುವುದಕ್ಕೆ ನಾವು ಸಿದ್ಧರಿದ್ದೇವೆ. ಆದರೆ, ಇದನ್ನು ಬಿಟ್ಟು ಸಾರಾಸಗಟಾಗಿ ಭ್ರಷ್ಟಾಚಾರವಾಗಿದೆ ಎಂದು ಹೇಳುವುದು ನಿಮಗೆ ಸರಿ ಕಾಣುತ್ತದೆಯೆ?

ಏಕೆಂದರೆ ನಾನೂ ಸಹ ನನ್ನ ಕ್ಷೇತ್ರದಲ್ಲಿ ಕೆಲಸ ಮಾಡಿಸಿದ್ದೇನೆ. ನನ್ನ ಕ್ಷೇತ್ರಕ್ಕೆ ವಿರೋಧ ಪಕ್ಷದ ನಾಯಕರಾಗಿರತಕ್ಕಂತ ಮಾನ್ಯ ಜಗದೀಶ್ ಶೆಟ್ಟರ್‌ರವರೂ ಸಹ ಬಂದಿದ್ದರು. ಮಾನ್ಯ ಜಗದೀಶ್ ಶೆಟ್ಟರ್‌ರವರು ಕಾಂಗ್ರೆಸ್ ಪಕ್ಷದ ಕ್ಷೇತ್ರಕ್ಕೆ ಬಂದಿದ್ದಾರೆ. ನನ್ನ ಕ್ಷೇತ್ರದ ಪಕ್ಕದಲ್ಲಿಯೇ ವಿರೋಧಪಕ್ಷದ ಬಿ.ಜೆ.ಪಿ ಸದಸ್ಯರು ಆಗಿರತಕ್ಕಂಥ ಮಾನ್ಯ ಆರಗಜ್ಞಾನೇಂದ್ರ ರವರ ತೀರ್ಥಹಳ್ಳಿ ಕ್ಷೇತ್ರ ಇದೆ. ಇಲ್ಲಿಗೆ ಮಾನ್ಯ ಜಗದೀಶ್‌ಶೆಟ್ಟರ್‌ರವರು ಹೋಗಲಿಲ್ಲ. ಕಾಂಗ್ರೆಸ್‌ನವರು ಭ್ರಷ್ಟಾಚಾರ ಮಾಡಿರಬಹುದೆಂದು ನೋಡುವುದಕ್ಕೆ ಬಂದಿದ್ದರೋ ಏನೋ ಗೊತ್ತಿಲ್ಲ. ಅವರು ವಿರೋಧಪಕ್ಷದ ನಾಯಕರಾಗಿದ್ದು, ರಾಜ್ಯದಲ್ಲಿ ಆಗಿರತಕ್ಕಂಥ ಎಲ್ಲಾ ಕೆಲಸಗಳನ್ನು ನೋಡಬಹುದು. ಹಾಗೆಯೇ, ಕೇಂದ್ರ ಸರ್ಕಾರದಿಂದ ಹೆಚ್ಚಿನ ಸಹಾಯಧನ ಕೊಡಿಸುವುದಕ್ಕೆ ಹೋರಾಟ ಮಾಡತಕ್ಕಂಥ ಶಕ್ತಿ ಕೂಡ ಇದೆ. ಅವರು ನನ್ನ ಕ್ಷೇತ್ರಕ್ಕೆ ಬಂದಂಥ ಸಂದರ್ಭದಲ್ಲಿ ಅವರನ್ನು ಅತ್ಯಂತ ಆದರದಿಂದ ಸ್ವಾಗತ ಮಾಡಿದ್ದೇನೆ. ಈ ಸಂದರ್ಭದಲ್ಲಿ ನಾನು ಹೇಳುವುದೇನೆಂದರೆ, ಅಲ್ಲಿಗೆ ಬಂದಂಥ ಸಂದರ್ಭದಲ್ಲಿ ತೀರ್ಥಹಳ್ಳಿ ಕ್ಷೇತ್ರಕ್ಕೂ ಹೋಗಿ ನೋಡಿಕೊಂಡು ಬಂದಿದ್ದರೆ ಚೆನ್ನಾಗಿರುತ್ತಿತ್ತು. ನಾನು ಆರೋಪ ಮಾಡುತ್ತಿಲ್ಲ. ಆದ್ದರಿಂದ, ಮಾನ್ಯ ಅರಗಜ್ಞಾನೇಂದ್ರರವರು ದಯುವಿಟ್ಟು ತಪ್ಪು ತಿಳಿಯುವುದು ಬೇಡ. ಮಾನ್ಯ ಆರಗಜ್ಞಾನೇಂದ್ರರವರು ಸಹ ಟಾಸ್ಕ್ ಫೋರ್ಸ್ ಕಮಿಟಿಯ ಅಧ್ಯಕ್ಷರೂ ಕೂಡ ಆಗಿದ್ದಾರೆ. ಅವರ ಕ್ಷೇತ್ರ ಬರಗಾಲದ ಪಟ್ಟಿಯಲ್ಲಿ ಸೇರಿರಲಿಲ್ಲ. ತೀರ್ಥಹಳ್ಳಿ ತಾಲ್ಲೂಕನ್ನು ಬರಗಾಲದಪಟ್ಟಿಗೆ ಸೇರಿಸಿಕೊಳ್ಳಬೇಕೆಂದು ಜಿಲ್ಲಾ ಮಂತ್ರಿಗಳು ಮತ್ತು ನಾನು ಸರ್ಕಾರಕ್ಕೆ ಒತ್ತಾಯ ಮಾಡಿದ್ದೆವು. ಈಗ ತೀರ್ಥಹಳ್ಳಿಗೂ ಕೂಡ ಸಹಾಯ ಮಾಡಲಾಗಿದೆ. ಎಲ್ಲಿ ಭ್ರಷ್ಟಾಚಾರವಾಗಿದೆ ಎನ್ನತಕ್ಕಂಥದ್ದನ್ನು ಹೇಳಿದರೆ, ನಾವು ತನಿಖೆ ಮಾಡುವುದಕ್ಕೆ ತಯಾರಿದ್ದೇವೆಂದು ಸರ್ಕಾರ ಹೇಳಿಲ್ಲ. ಜಿಲ್ಲಾ ಮಟ್ಟದ ಕೆ.ಡಿ.ಪಿ. ಸಭೆಯಲ್ಲಿಯೇ ಹೇಳಲಾಗಿದೆ. ಆ ಸಂದರ್ಭದಲ್ಲಿ ಮಾನ್ಯ ವಿರೋಧಪಕ್ಷದ ನಯಕರಾಗಿರತಕ್ಕಂಥ ಶ್ರೀ ಡಿ.ಹೆಚ್. ಶಂಕರ್‌ಮೂರ್ತಿಯವರು ಮತ್ತು ಬಿ.ಜೆ.ಪಿ ಮುಖಂಡರು ಆಗಿರತಕ್ಕಂಥ ಮಾನ್ಯ ಯಡಿಯೂರಪ್ಪನವರು ಕೆಲವು ಆಪಾದನೆ ಮಾಡಿದ್ದರು. ಆನಂತರ, ತನಿಖೆ ಮಾಡಲು ನಮ್ಮ ಜಿಲ್ಲಾ ಮಂತ್ರಿಗಳು ಆದೇಶ ಮಾಡಿ ಇದನ್ನು ತನಿಖೆ ಮಾಡುವುದಕ್ಕೋಸ್ಕರ ಒಬ್ಬ ಐ.ಎ.ಎಸ್. ಮತ್ತು ಒಬ್ಬ ಸೂಪರಿಂಟೆಂಡಿಂಗ್ ಇಂಜಿನಿಯರ್‌ರವರನ್ನು ಕಳುಹಿಸಿ ಅಳತೆ ಮಾಡಿಸಿ ಎಲ್ಲಿ ಲೋಪದೋಷಗಳು ಆಗಿತ್ತೋ ಅದನ್ನು ಸರಿಪಡಿಸುವುದರ ಜೊತೆಯಲ್ಲಿ ಯಾರು ತಪ್ಪು ಮಾಡಿದ್ದರೋ ಅವರನ್ನು ಸಸ್ಪೆಂಡ್ ಮಾಡತಕ್ಕಂಥ ಕೆಲಸವನ್ನು ಸರ್ಕಾರ ಮಾಡಿದೆ. ಯಾವುದೇ ರೀತಿಯ ಭ್ರಷ್ಟಾಚಾರಕ್ಕೆ ಅವಕಾಶ ಕೊಟ್ಟಿಲ್ಲ. ಇದನ್ನು ಮಾನ್ಯ ಶ್ರೀನಿವಾಸಗೌಡರು ತಿಳಿದುಕೊಳ್ಳಬೇಕು.

1.40 ಪಿ.ಎಂ.

ಶ್ರೀ ಸಿ. ಚೆನ್ನಿಗಪ್ಪ : ಮಾನ್ಯ ಛೇರ್ಮನ್‌ರವರೆ, ಮೊನ್ನೆ ತಾನೇ ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿ ತಾಲ್ಲೂಕು ಪಂಚಾಯಿತಿ ಆಫೀಸಿನಿಂದ ಒಂದು ಲೋಡ್ ಅಕ್ಕಿಯನ್ನು ಸಾಗಿಸಬೇಕಾದರೆ, ದೊಡ್ಡಬಳ್ಳಾಪುರ ಪೊಲೀಸ್ ಸ್ಟೇಶನ್‌ದವರು ಒಂದು ಕೇಸ್‌ನ್ನು ರಿಜಿಸ್ಟರ್ ಮಾಡಿದ್ದಾರೆ. ಬೆಂಗಳೂರು ನಗರ ಜಿಲ್ಲೆಯ ಡಿ.ಡಿ. ಯವರು ಎನ್‌ಕ್ವಾಯರಿಗೆ ಆರ್ಡರ್‌ನ್ನು ಮಾಡಿದ್ದಾರೆ. ಆದರೆ ಈ ವಾರ ಅವರು ಸಾಗಿಸುವಾಗ ಸಿಕ್ಕಿರುವ ಅಕ್ಕಿಯ ಬಗ್ಗೆ ವರದಿಯನ್ನು ಕೊಟ್ಟರು ಕೂಡ ಇವತ್ತಿನವರೆಗೂ ಯಾವ ಆಕ್ಷನ್‌ನ್ನು ಕೂಡ ತೆಗೆದುಕೊಂಡಿರುವುದಿಲ್ಲ. ನಾವು ಎಲ್ಲೂ ಸವಿಸ್ತಾರವಾಗಿ ಕೆಲಸಗಳು ಆಗಿರುವುದಿಲ್ಲವೆಂದು ಹೇಳುವುದಕ್ಕೆ ಹೋಗುವುದಿಲ್ಲ. ಒಳ್ಳೆಯ ಕೆಲಸಗಳು ಆಗಿವೆ. ಇಂತಹ ಕೆಟ್ಟ

ಕೆಲಸಗಳು ಆಗಿರುವುದರ ಬಗ್ಗೆ ಎಷ್ಟು ಕೇಸ್‌ಗಳನ್ನು ಇವರು ರಿಜಿಸ್ಟರ್ ಮಾಡಿ ಸರ್ಕಾರದವರು ಅಂತಹವರ ಮೇಲೆ ಏನು ಕ್ರಮಗಳನ್ನು ಕೈಗೊಂಡಿರುತ್ತಾರೆಂಬುದನ್ನು ಹೇಳಬೇಕು.

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಛೇರ್ಮನರವರೆ, ಮಾನ್ಯ ಗೌರವಾನ್ವಿತ ಸದಸ್ಯರಾದ ಶ್ರೀ ಕರಿಯಣ್ಣನವರು ಬಹಳ ಖುಲ್ಲಾಖುಲ್ಲಾ ಒಪ್ಪಿಕೊಂಡಿದ್ದಾರೆ. ಏಕೆಂದರೆ ನಮ್ಮ ಕೆಲವು ವಿರೋಧ ಪಕ್ಷದವರು ಆಪಾದನೆಯನ್ನು ಮಾಡಿದರು. ಎಲ್ಲಾ ಹೋಗಿ ತನಿಖೆಯನ್ನು ಮಾಡಿದಾಗ ಎಲ್ಲಿ ಕೆಲಸ ಸರಿಯಾಗಿರಲಿಲ್ಲ. ಎಲ್ಲಿ ತೊಂದರೆಯಾಗಿತ್ತು. ಎಲ್ಲಿ ತಪ್ಪುಗಳಾಗಿತ್ತು. ಅಂತಹವರನ್ನು ಸಸ್ಪೆಂಡ್ ಮಾಡಿದ್ದೇವೆ. ಅಂತಹವರ ಮೇಲೆ ಕ್ರಮ ತೆಗೆದುಕೊಂಡಿದ್ದೇವೆ. ಸರಿ ಮಾಡಿದ್ದೇವೆ ಎನ್ನುವುದರ ಬಗ್ಗೆ ಅವರು ಒಪ್ಪಿಕೊಂಡಿದ್ದಾರೆ. ಅದೇ ರೀತಿ ಸುವೋಮೋಟೋ ಯಾರು ಹೋಗಿ ನೋಡಲಿಲ್ಲ. ವಿರೋಧಪಕ್ಷದವರು ಅದನ್ನು ರೈಸ್ ಮಾಡಿದ ಮೇಲೆ ಆಪಾದನೆ ಮಾಡಿದ ಮೇಲೆ ಹೋಗಿ ನೋಡಲಾಯಿತು. ಅದನ್ನು ಸರಿಪಡಿಸಲಾಯಿತು. ಸಸ್ಪೆನ್‌ಷನ್ ಕೂಡ ಆಯಿತು. ಇಲ್ಲಿ ಚರ್ಚೆಯಾಗಿರುವಂಥದ್ದು, ಇಡೀ ರಾಜ್ಯದಲ್ಲಿ ಬೇರೆ ಬೇರೆ ಕಡೆ ಎಲ್ಲಿ ತಪ್ಪಾಗಿದೆ. ಎಲ್ಲಿ ಏನು ತೊಂದರೆಯಾಗಿದೆ. ಸರ್ಕಾರದ ಗಮನ ಎಲ್ಲಿ ಬರಬೇಕಾಗಿತ್ತು. ಎನ್ನುವಂಥದ್ದು ಇದಾಗಿದೆ. ದಯವಿಟ್ಟು ನಾನು ಅವರಿಗೆ ಅಭಿನಂದನೆಯನ್ನು ಹೇಳುತ್ತೇನೆ.

ಶ್ರೀ ಕರಿಯಣ್ಣ (ಹೊಳೆಹೊನ್ನೂರು) : ಮಾನ್ಯ ಛೇರ್ಮನ್‌ರವರೆ, ದಯವಿಟ್ಟು ನಮಗೆ ನೀವು ಅಭಿನಂದನೆ ಹೇಳಬೇಕಾದುದು ಬೇಕಾಗಿಲ್ಲ. ನೀವು ನಿಮ್ಮ ಬೆನ್ನನ್ನು ನೋಡಿಕೊಳ್ಳುವುದಕ್ಕೆ ಕಾಣುವುದಿಲ್ಲ. ಬೇರೆಯವರು ನೋಡಿ ಹೇಳಿದ್ದನ್ನು ನೀವು ತಿಳಿದುಕೊಳ್ಳಬೇಕು. ಏಕೆಂದರೆ ಮೊನ್ನೆ ಮಾನ್ಯ ಜಗದೀಶ್ ಶೆಟ್ಟರ್‌ರವರು ಬಂದಾಗ ಅವರು ಸೊರಬಕ್ಕೆ ಹೋಗಿದ್ದರು ಶಿವಮೊಗ್ಗದಲ್ಲಿ ಇದ್ದಾಗ, ನನ್ನ ಕ್ಷೇತ್ರಕ್ಕೂ ಬಂದರು, ನನ್ನ ಕ್ಷೇತ್ರಕ್ಕೆ ಸುಮಾರು 7 ಗಂಟೆಯ ನಂತರ ಬಂದರು. ಜನರು ನಮ್ಮ ಪಕ್ಷದವರಾದರೂ ಕೂಡ ಅವರನ್ನು ಗೌರವದಲ್ಲಿ ಕಂಡು ನೋಡಿ ಸ್ವಾಮಿ ನಾವು ಕೆಲಸ ಮಾಡಿಸಿರುವುದು ಹೇಗೆ ಇದೆ ಎನ್ನುವುದನ್ನು ಅವರು ಹೊಳೆ ಹೊನ್ನೂರಿನಲ್ಲಿಯೂ ತೋರಿಸಿದ್ದಾರೆ. ಅವರು ಆಮೇಲೆ ಭಾಷಣವನ್ನು ಮಾಡಿ ಬಂದಿದ್ದಾರೆ. ಸುಮ್ಮನೆ ಆಪಾದನೆ ಮಾಡಿದ್ದು ಏಕೆ? ನನ್ನ ಕ್ಷೇತ್ರದಲ್ಲಿ ಅನಾವಶ್ಯಕವಾಗಿ ಆಪಾದನೆಯನ್ನು ಮಾಡಿದ್ದೀರಿ, ತೀರ್ಥಹಳ್ಳಿಯಲ್ಲಿ ಆ ಮಾತನ್ನು ಏಕೆ ಹೇಳಲಿಲ್ಲವೆಂದು ಕೇಳಿದೆ. ಆದರೆ ಅವರು ನಿಮ್ಮ ತೀರ್ಥಹಳ್ಳಿಯ ಬಗ್ಗೆ ಹೇಳಲಿಲ್ಲ. ಅದಕ್ಕೆ ನಾವು ಆಯಾಯ ಕ್ಷೇತ್ರದಲ್ಲಿ ಟಾಸ್ಕ್‌ಫೋರ್ಸ್ ಕಮಿಟಿಯ ಅಧ್ಯಕ್ಷರನ್ನಾಗಿ ಶಾಸಕರನ್ನೂ ಮಾಡಿದ್ದೇವೆ. ಆವರು ಸಮರ್ಪಕವಾಗಿ ಎಲ್ಲೆಲ್ಲಿ ಕೆಲಸವನ್ನು ಮಾಡಿದ್ದಾರೋ ಅಲ್ಲೆಲ್ಲಾ ಚೆನ್ನಾಗಿ ನಡೆದಿದೆ. ಹಾಗಾಗಿ ಈಗ ಭಾಷಣ ಮಾಡಿರತಕ್ಕಂಥ ಯಾವುದೇ ವಿರೋಧ ಪಕ್ಷದ ನಾಯಕರು, ಹಾಗೂ ಮುಖಂಡರುಗಳು ಈಗ ಭಾಷಣವನ್ನು ಮಾಡಿದ್ದಾರೆ. ಅವರು ಯಾರೂ ಸಹಿತ ತಮ್ಮ ಕ್ಷೇತ್ರದಲ್ಲಿ ಹಣ ದುರುಪಯೋಗವಾಗಿದೆ ಹಣವನ್ನು ತಿಂದುಹಾಕಿದ್ದಾರೆ. ಕಳಪೆ ಕೆಲಸವಾಗಿದೆ ತನಿಖೆ ಮಾಡಿಸಿ ಎಂದು ಹೇಳಲಿಲ್ಲ. ಇಷ್ಟೊಂದು ಜನ ಭಾಷಣವನ್ನು ಮಾಡಿದರೂ ಕೂಡ ಯಾರೂ ಹೇಳಲಿಲ್ಲ. ಸುಮ್ಮನೆ ಏಕೆ ಬೇರೆ ಬೇರೆಯವರ ಮೇಲೆ ಹೇಳುತ್ತೀರಿ? ಎಲ್ಲರೂ ಭಾಷಣವನ್ನು ಮಾಡಿರುತ್ತೀರಿ ನಾವು 365 ದಿವಸ ಸದನವನ್ನು ನಡೆಸಿದರೆ ಆಗುವುದಿಲ್ಲ. ಮಾತನಾಡಿದಂತಹ ಒಬ್ಬ ಮುಖಂಡರುಗಳು ಸಹಿತ ಆ ಮಾತು ಹೇಳಲಿಲ್ಲ. ಒಬ್ಬರು ಮಾತ್ರ ಹೇಳಿದರು. ಅದರ ಬಗ್ಗೆ ನಾವು ಸ್ವಾಗತವನ್ನು ಮಾಡುತ್ತೇವೆ. ಇನ್ನು ನಮಗೆ ಹೆಚ್ಚಿನ ಸಹಾಯ ಸಿಗಬೇಕಾಗಿತ್ತು. ನಮ್ಮ ಜನಗಳಿಗೆ ಕೆಲಸ ಸಿಕ್ಕಿಲ್ಲ. ನಮಗೆ ಇನ್ನು ಕುಡಿಯುವ ನೀರಿಗೆ ಬೇಕಾಗಿದೆ. ಅದಕ್ಕೆ ಏನಾದರೊಂದು ಪರ್ಯಾಯ

ಯೋಚನೆಯನ್ನು ಮಾಡಿ ನಮ್ಮ ಜನಗಳ ರಕ್ಷಣೆ ಮಾಡಿ ನಮಗೆ ಮೇವು ಸಿಗುತ್ತಿಲ್ಲ. ಮೇವಿಗೆ ಅವಕಾಶವನ್ನು ಮಾಡಿಕೊಡಿ. ಎನ್ನುವ ಉಪಯುಕ್ತವಾದ ಸಲಹೆ ಏನಿದೆ ಅದನ್ನು ಸ್ವಾಗತ ಮಾಡೋಣ. ಅದನ್ನು ನಾವು ಸಹಿತ ಕೇಳುವವರಿದ್ದೇವೆ. ಏಕೆಂದರೆ ನನಗೆ ಚನ್ನಗಿರಿ ಕ್ಷೇತ್ರ ಸೇರುತ್ತದೆ. ಕುಡಿಯುವ ನೀರಿನ ಪರಿಸ್ಥಿತಿ ಹೇಗಿದೆಯೆಂದರೆ 700 ರಿಂದ 1150 ಅಡಿ ಆಳದವರೆಗೆ ಹೋಗಿದೆ. ಇವತ್ತು ಕುಡಿಯುವ ನೀರಿನ ಪರಿಸ್ಥಿತಿ ಅಲ್ಲಿಗೆ ಹೋಗಿರುವುದರಿಂದ ಇವತ್ತು ನೀರು ಸಿಗದಿರುವಂಥ ಪರಿಸ್ಥಿತಿಯಾಗಿದೆ. ತೀರ್ಥಹಳ್ಳಿಯವರಿಗೆ ಒಂದು ಎಕರೆ ಅಡಿಕೆ ತೋಟ ಒಣಗಲಿಲ್ಲ. ನನ್ನ ಕ್ಷೇತ್ರದಲ್ಲೂ ಎಂಟು ಸಾವಿರ ಎಕರೆ ಅಡಿಕೆ ತೋಟ ಒಣಗಿ ಹೋಗಿದೆ.

ಶ್ರೀ ಆರಗ ಜ್ಞಾನೇಂದ್ರ : ನಮ್ಮ ಕಡೆ ನೀವು ಬರಲಿಲ್ಲ.

ಶ್ರೀ ಕರಿಯಣ್ಣ : ಏಕೆ ಬರಲಿಲ್ಲ? ಬಂದಿದ್ದೇವೆ. ನಾನು ಸುಳ್ಳು ಹೇಳುತ್ತಿಲ್ಲ. ನಾನು ಫೋಟೋ ಸಹಿತ ತಂದಿದ್ದೇನೆ.

ಶ್ರೀ ಆರಗ ಜ್ಞಾನೇಂದ್ರ : ನಾಳೆ ನಾನು ಫೋಟೋ ತೋರಿಸುತ್ತೇನೆ.

ಕರಿಯಣ್ಣ : ಮಾನ್ಯ ಛೇರ್ಮನ್‌ರವರೇ, ಆಮೇಲೆ ಪತ್ರಿಕೆಗಳಲ್ಲಿಯೂ ಸಹಿತ ನಿಮ್ಮ ತೀರ್ಥಹಳ್ಳಿಯದ್ದು ಹಾಕಲಿಲ್ಲ. ಪತ್ರಿಕೆಯವರು ಹೋಗಿ ಸಮೀಕ್ಷೆಯನ್ನು ಮಾಡಿ ಹಾಕಿದ್ದಾರೆ. ಈ ರೀತಿಯಾದ ಪರಿಸ್ಥಿತಿ ಇಲ್ಲಿ ಇರಬೇಕಾದರೆ ಒಂದೊಂದು ಊರಿನಲ್ಲಿ 78–9 ಬೋರ್‌ವೆಲ್‌ಗಳನ್ನು ನಾವು ಕೊರೆಸಿದ್ದೇವೆ. ನಮ್ಮ ನಮ್ಮ ಹಣವನ್ನು ಯಾವರೀತಿಯಾಗಿ ನಾವು ಉಪಯೋಗಿಸಿದ್ದೇವೆಂದರೆ, ಜಿಲ್ಲಾ ಪಂಚಾಯಿತಿ ಇರಬಹುದು, ತಾಲ್ಲೂಕು ಪಂಚಾಯಿತಿ ಇರಬಹುದು, ಗ್ರಾಮ ಪಂಚಾಯಿತಿಯ ಹಣ ಇರಬಹುದು. ಕುಡಿಯುವ ನೀರಿಗೆ ಹಣ ಬೇಕಾದಂಥ ಸಂದರ್ಭದಲ್ಲಿ ನೀವು ಸಹಿತ ಜಿಲ್ಲಾ ಪಂಚಾಯಿತಿಯಲ್ಲಿ ಚರ್ಚೆಯನ್ನು ಮಾಡಿರುತ್ತೀರಿ. ಆ ಪರಿಸ್ಥಿತಿಯಲ್ಲಿ ಕುಡಿಯುವ ನೀರಿಗೆ ಆದ್ಯತೆಯನ್ನು ಕೊಟ್ಟು ತಕ್ಷಣದಲ್ಲಿ ಬೋರ್‌ವೆಲ್‌ಗಳನ್ನು ತೆಗೆಯಿಸಬೇಕೆಂದು ಹೇಳಿ ತೆಗೆಸಿ, ಮೋಟಾರ್ ಹಾಗೂ ಅದಕ್ಕೆ ಪೈಪನ್ನು ಆಳವಡಿಸತಕ್ಕಂಥ ಕೆಲಸಗಳನ್ನು ನಾವು ಮಾಡಿ ತೋರಿಸಿದ್ದೇವೆ. ಇವತ್ತು ಆ ಜನಗಳನ್ನು ನೂರಕ್ಕೆ ನೂರರಷ್ಟು ಕಾಪಾಡುವುದಕ್ಕೆ ಆಗದೇ ಹೋದರು ಸಹಿತ ನೂರಕ್ಕೆ ಎಪ್ಪತ್ತು ಪರ್ಸೆಂಟ್ ಆದರೂ ಕಾಪಾಡತಕ್ಕಂಥ ಪ್ರಯತ್ನವನ್ನು ನಾವು ಮಾಡಿದ್ದೇವೆ. ಅಲ್ಲಿ ಚೆನ್ನಾಗಿ ಕೆಲಸಗಳು ಆಗಿರುತ್ತವೆ. ನಾವು ಎಲ್ಲೆಲ್ಲಿ ಮಾಡಿದ್ದೇವೆ ಅಲ್ಲೆಲ್ಲಾ ಚೆನ್ನಾಗಿ ಕೆಲಸಗಳು ಆಗಿವೆ. ಎರಡು ವರ್ಷ ಬರಗಾಲ ಬಂದು ಮೂರನೆಯ ವರ್ಷದ ಬರಗಾಲಕ್ಕೆ ಕಾಲಿಟ್ಟಂಥ ಇಂತಹ ಪರಿಸ್ಥಿತಿಯಲ್ಲಿ ನಾವು ರಾಜಸ್ಥಾನಕ್ಕೆ ಹೋಗಿದ್ದೆವು. ರಾಜಸ್ಥಾನದಲ್ಲಿ ಎರಡು ವರ್ಷಗಳಿಂದ ಬರಗಾಲ ಎಂದು ನಾನು ಕೇಳಿದ್ದೆ. ಅಲ್ಲಿ ವಿದ್ಯುಚ್ಛಕ್ತಿ ರಾತ್ರಿ ಹೊತ್ತು ಇರಲಿಲ್ಲ. 8 ರಿಂದ 15 ದಿವಸಕ್ಕೆ ಒಂದು ಸಲ ಕುಡಿಯುವುದಕ್ಕೆ ನೀರು ಸಪ್ಲೈ ಆಗುತ್ತದೆ ಎನ್ನುವಂಥ ಪರಿಸ್ಥಿತಿ ಇತ್ತು. ಇಲ್ಲಿ ಆ ವಾತಾವರಣ ಇಲ್ಲ. ಮೂರು ವರ್ಷ ಇಲ್ಲಿ ನಾವು ಬರಗಾಲವನ್ನು ಅನುಭವಿಸುತ್ತಿದ್ದೇವೆ. ಅವರು ಕೇವಲ ಎರಡು ವರ್ಷಕ್ಕೆ ಅಷ್ಟೊಂದು ತತ್ತರಿಸಿ ಹೋಗಿದ್ದರು. ನಾವು ಸರ್ಕಾರಿ ವಾಹನವನ್ನು ಕೊಡಿ ಎಂದು ಕೇಳಿದಾಗ, ಸ್ವಾಮಿ ಸರ್ಕಾರಿ ವಾಹನಗಳನ್ನು ನಾವು ನಿಲ್ಲಿಸಿದ್ದೇವೆ. ಸಾಮೂಹಿಕವಾಗಿ ಒಂದು ಮೆಟಡೋರ್‌ವ್ಯಾನ್ ಮಾಡಿ ಕೊಡುತ್ತೇವೆ ಹೋಗಿ ಎಂದು ಹೇಳಿದರು. ಏಕೆ ಎಂದು ಕೇಳಿದಾಗ, ನಮ್ಮ ಆರ್ಥಿಕ ಪರಿಸ್ಥಿತಿ ಸುಧಾರಣೆಯಾಗಿಲ್ಲ. ಸ್ವಾಮಿ ಬರಗಾಲ ಬಂದಿದೆ ಎಂದು ಹೇಳಿದರು. ಇಲ್ಲಿ ಆ ತರಹ ಆಗಲಿಲ್ಲ. ಇಲ್ಲಿ ನಿಮ್ಮ ಅಭಿವೃದ್ಧಿಯ ಎಲ್ಲಾ ಕೆಲಸಗಳು ನಡೆದಿವೆ. ಇವತ್ತು ನಮ್ಮ ಕೋಲಾರದ ಮಾನ್ಯ

ಶ್ರೀನಿವಾಸಗೌಡರು ಮಾತನಾಡಿದವರು ಈಗ ಅವರು ಇಲ್ಲಿ ಕಾಣಿಸುತ್ತಿಲ್ಲ. ನಿಮಗೆ ಮಂಗಳಾರತಿ ಎತ್ತುತ್ತಿದ್ದಾರೆಂದು ಮಾತನಾಡಿದರು. ಸ್ವಾಮಿ ನಿಮ್ಮ ಕಾಲದಲ್ಲೂ ಬರಗಾಲ ಬಂದಿತ್ತು. ಕೋಲಾರದಲ್ಲಿ ಕುಡಿಯುವ ನೀರಿಗೆ ನಿಮ್ಮದೇ ಸರ್ಕಾರ ಇತ್ತು. ನೀವು ಏಕೆ ಒಂದು ಅಣೆಕಟ್ಟನ್ನು ಚಿತ್ರಾವತಿ ನದಿಗೆ ಕಟ್ಟಿಸಿಕೊಳ್ಳಲಿಲ್ಲ. ಏಕೆ ನೀವು ಕಟ್ಟಲಿಲ್ಲ? ನಮ್ಮ ಸರ್ಕಾರ ಕಟ್ಟಿತು. ಆಂಧ್ರಪ್ರದೇಶದವರು ಇವತ್ತು ಅದಕ್ಕೆ ವಿರೋಧ ಮಾಡುತ್ತಿದ್ದಾರೆ. ಆದರೂ ಸಹಿತ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಅದಕ್ಕೆ ದಿಟ್ಟತನವಾದ ಒಂದು ಉತ್ತರವನ್ನು ಕೊಟ್ಟು ಯಾವುದೇ ಕಾರಣಕ್ಕೂ ಈ ಕೆಲಸವನ್ನು ನಿಲ್ಲಿಸುವುದಿಲ್ಲವೆಂದು ಹೇಳಿ, ಇವತ್ತು ಕುಡಿಯುವ ನೀರಿಗೋಸ್ಕರ ಆ ಅಣೆಕಟ್ಟನ್ನು ಕಟ್ಟುತ್ತಿದ್ದಾರೆ. ಇದನ್ನು ನಿಮ್ಮ ಕಾಲದಲ್ಲಿ ಏಕೆ ಮಾಡಲಿಲ್ಲ. ನಿಮ್ಮ ಕಾಲದಲ್ಲಿ ಬರಗಾಲ ಬಂದಿರಲಿಲ್ಲವೇ? ಮಾನ್ಯ ಜೆ.ಹೆಚ್. ಪಟೇಲ್‌ರವರು ಮುಖ್ಯಮಂತ್ರಿಗಳಾಗಿದ್ದಾಗ ನಮ್ಮ ರಾಜ್ಯದಲ್ಲಿಯೂ ಬರಗಾಲ ಬಂದಿತ್ತು. ಚನ್ನಗಿರಿ ತಾಲ್ಲೂಕಿನಲ್ಲಿ ಕುಡಿಯುವುದಕ್ಕೆ ನೀರು ಇರಲಿಲ್ಲ. ವಿದ್ಯುಚ್ಛಕ್ತಿಯ ಅಭಾವವಿತ್ತು. ಅದರ ಸಲುವಾಗಿ ಮೆರವಣಿಗೆ ಮಾಡಿದರು. ಏಕೆಂದರೆ ಒಂದೇ ಒಂದು ವರ್ಷ ಬರಗಾಲವಿತ್ತು. ಅದನ್ನೇ ನಿಮ್ಮ ಕೈಯಿಂದ ಸುಧಾರಿಸಿಕೊಳ್ಳುವುದಕ್ಕಾಗಲಿಲ್ಲ. ಇವತ್ತು ಮೂರು ವರ್ಷಗಳ ಕಾಲ ಬರಗಾಲ ಬಂದಿದ್ದನ್ನು ಈ ಸರ್ಕಾರ ಸುಧಾರಿಸಿಕೊಂಡು ನಿಮ್ಮ ಕುಡಿಯುವ ನೀರಿಗೆ ಇದೊಂದೇ ಅಲ್ಲ. ಭೀಮಾನದಿಗೆ ಬ್ಯಾರೇಜ್‌ಗಳನ್ನು ಕಟ್ಟಿದೆ. ಬರಗಾಲ ಇದ್ದರೂ ಸಹಿತ ನದಿಗಳಿಗೆ ಬ್ಯಾರೇಜ್‌ನ್ನು ಕಟ್ಟುವಂಥ ಕೆಲಸವನ್ನು ಮಾಡಲಾಗಿದೆ. ಇವತ್ತು ಪೂರ್ತಿಯಾಗಿ ಆಲಮಟ್ಟಿ ಅಣೆಕಟ್ಟನ್ನು ಕಟ್ಟಿ ನೀರನ್ನು ನಿಲ್ಲಿಸತಕ್ಕಂಥ ವ್ಯವಸ್ಥೆಯನ್ನು ಮಾಡಲಾಯಿತು. ಬರಗಾಲ ಇದ್ದರೆ ಆ ಹಣವನ್ನು ಇಲ್ಲಿಗೆ ಪರಿವರ್ತನೆ ಮಾಡಲಿಲ್ಲ. ಆ ನೀರನ್ನು ಸ್ಟಾಕ್ ಮಾಡುವುದಕ್ಕೋಸ್ಕರವಾಗಿ ಈ ಸರ್ಕಾರ ಆ ಕೆಲಸ ಮಾಡಿತು. ಇವತ್ತು ತುಂಗಾನದಿಗೆ ಅಣೆಕಟ್ಟನ್ನು ಕಟ್ಟುವುದಕ್ಕೆ ಸರ್ಕಾರ ಇವತ್ತು ದುಡ್ಡನ್ನು ಕೊಟ್ಟು ಅದು ಪೂರ್ತಿಯಾಗತಕ್ಕಂಥ ವ್ಯವಸ್ಥೆಯಲ್ಲಿ ಮಾಡಲಾಯಿತು. ಬರಗಾಲ ಇದ್ದರೂ ಸಹಿತ ಇದನ್ನು ಮಾಡಿತು. ನಾನು ಇವತ್ತು ಅಂಕಿ ಅಂಶಗಳನ್ನು ತಂದಿದ್ದೇನೆ ಕಳೆದ ವರ್ಷ ಕುಡಿಯುವ ನೀರಿಗೆ ಸುಮಾರು 27 ಜಿಲ್ಲೆಗಳಿಗೆ 11,155 ಲಕ್ಷ ರೂಪಾಯಿಗಳಿಗೆ ಬಿಡುಗಡೆ ಮಾಡಿ ನಿಮ್ಮ ನಗರ ಪ್ರದೇಶಗಳಿಗೆ ಕುಡಿಯುವ ನೀರಿಗೆ ವ್ಯವಸ್ಥೆಯನ್ನು ಮಾಡಿ ಕೊಟ್ಟಂಥ ಸರ್ಕಾರ ಇವತ್ತು ನೀವು ಹೇಳುತ್ತಿದ್ದೀರಿ. ಬರಗಾಲದಲ್ಲಿ ಏನೂ ಕೆಲಸವನ್ನು ಮಾಡಲಿಲ್ಲವೆಂದು ಈ ಸರ್ಕಾರ ಬರಗಾಲದಲ್ಲಿ ಯಾವ ರೈತರನ್ನೂ ನೋಡಲಿಲ್ಲ. ಕುಡಿಯುವ ನೀರಿಗೂ ಅವಕಾಶವನ್ನು ಮಾಡಲಿಲ್ಲ. ಏನೂ ಮಾಡಿಕೊಡಲಿಲ್ಲವೆಂದು ಹೇಳುತ್ತಿದ್ದೀರಿ. ಇವತ್ತು ಇಷ್ಟೊಂದು ಅನುಕೂಲವನ್ನು ಮಾಡಿಕೊಡಲಾಗಿದೆ. ಮಾರ್ಚ್ ತಿಂಗಳು ಕಳೆದ ನಂತರದಲ್ಲಿ ಇಲ್ಲಿಯವರೆಗೆ 2003–04ರಲ್ಲಿ ಸುಮಾರು 41 ಕೋಟಿ ರೂಪಾಯಿಗಳನ್ನು ಕುಡಿಯುವ ನೀರಿಗೋಸ್ಕರ ಈ ಸರ್ಕಾರ ಬಿಡುಗಡೆ ಮಾಡಿ ಅದು ಅರ್ಬನ್ ಏರಿಯಾದಲ್ಲಿ, ನಾಟ್ ರೂರಲ್ ಏರಿಯಾ, ಇನ್ನು ರೂರಲ್ ಏರಿಯಾದ್ದು ಬೇರೆ ಇದೆ. ಈ ತರಹದಲ್ಲಿ ಸಹಾಯ ಮಾಡಿರತಕ್ಕಂಥ ಸರ್ಕಾರ ಇದನ್ನು ನೀವು ಕಡೆಯ ಪಕ್ಷ ಹೊಗಳುವುದು ಬೇಡ. ಸರ್ಕಾರವನ್ನು ಹೊಗಳಿ ಎಂದು ನಾವು ನಿಮ್ಮನ್ನು ಕೇಳುವುದಿಲ್ಲ. ನಿಮ್ಮ ಸರ್ಟಿಫಿಕೇಟ್ ನಮಗೆ ಬೇಕಾಗಿಲ್ಲ. ನಮಗೆ ಬೇಕಾಗಿರುವಂಥದ್ದು ಓಟು ಕೊಟ್ಟಿರತಕ್ಕಂಥ ಜನಗಳ, ಆ ರೈತರ ಸರ್ಟಿಫಿಕೇಟ್ ಬೇಕಾಗಿದೆಯೇ ವಿನಹ ನಿಮ್ಮ ಸರ್ಟಿಫಿಕೇಟ್ ನಮಗೆ ಬೇಕಾಗಿರುವುದಿಲ್ಲ. ಆದರೆ ಈ ಸರ್ಕಾರ ಬರಗಾಲದಲ್ಲಿ ವ್ಯವಸ್ಥಿತವಾಗಿ ಕೂಡಿಕೊಂಡು ಬರಗಾಲದಲ್ಲಿ ಕೆಲಸವನ್ನು ಮಾಡಿದೆ ಎನ್ನತಕ್ಕಂಥ ಒಂದು ಅಭಿಮಾನದ

ಮಾತು ಇಲ್ಲದೇ ಹೋದರೆ ಏನಿದು? ಒಂದಿಷ್ಟು ಮಾನವೀಯತೆ ಮೌಲ್ಯವಾದರೂ ನಿಮ್ಮ ಹತ್ತಿರ ಇರುವುದು ಬೇಕಾಗಿಲ್ಲವೆ? ಹೇಳುವುದು ಬೇಡವೆ? ಏನು ಬೃಹದಾಕಾರವಾಗಿ ಭ್ರಷ್ಟಾಚಾರ ನಡೆದು ಹೋಗಿದೆ ಎಂದು ಶ್ರೀನಿವಾಸ ಗೌಡರು ಹೇಳಿದರು. ಏನಾದರೂ ಇದ್ದರೆ ಕೊಡಿ ತನಿಖೆ ಮಾಡಿಸುತ್ತಾರೆ. ತನಿಖೆಗೆ ನಾವು ಯಾವತ್ತೂ ಹೆದರುವುದಿಲ್ಲ. ನಾವ್ಯಾರು ಶಾಸಕರಾಗಲೀ ಮಂತ್ರಿಗಳಾಲೀ ಭ್ರಷ್ಟಾಚಾರವನ್ನು ಮಾಡುವುದಕ್ಕೆ ಹೋಗಿರುವುದಿಲ್ಲ. ಯಾರು ಅಧಿಕಾರಿಗಳು ಮಾಡಿದ್ದಾರೋ ಎಲ್ಲಿ ಲೋಪದೋಷಗಳು ಆಗಿವೆ ಅದನ್ನು ತನಿಖೆಯನ್ನು ಮಾಡಿಸೋಣ. ಆದರೆ ಇಡೀ ಕರ್ನಾಟಕ ರಾಜ್ಯದಲ್ಲಿಯೇ ಇದು ಅದ್ವಾನ ಆಗಿದೆ ಎನ್ನತಕ್ಕಂಥದ್ದು ನಾವು ಒಪ್ಪತಕ್ಕಂಥದ್ದಲ್ಲ. ಏಕೆಂದರೆ ಯಾವ ಸರ್ಕಾರದಲ್ಲಿಯೂ ಸಹಿತ ಬರಗಾಲ ಬಂದಂಥ ಸಂದರ್ಭದಲ್ಲಿ ಶಾಸಕರುಗಳ ಅಧ್ಯಕ್ಷತೆಯಲ್ಲಿ ಒಂದು ಟಾಸ್ಕ್‌ಫೋರ್ಸ್ ಕಮಿಟಿಯನ್ನು ಮಾಡಿ ಅವರ ಅಧ್ಯಕ್ಷತೆಯಲ್ಲಿ ಅದನ್ನು ಇಟ್ಟು ಕಾಲಕಾಲಕ್ಕೆ ಆ ಕೆಲಸವನ್ನು ರಿವ್ಯೂ ಮಾಡತಕ್ಕಂಥ ಅಧಿಕಾರವನ್ನು ತಂದು, ಏನು ಆಗಬೇಕು ಎನ್ನತಕ್ಕಂಥದ್ದನ್ನು ಮೂರು-ಮೂರು ತಿಂಗಳಿಗೆ ಒಂದು ಸಲ ಒಂದು ಪ್ರಾಜೆಕ್ಟ್‌ನ್ನು ಮಾಡಿ ಮುಂದೆ ಮೂರು ತಿಂಗಳಿಗೆ ಏನು ಮಾಡಬೇಕು ಅದರ ಮುಂದಿನ ಮೂರು ತಿಂಗಳಿಗೆ ಏನು ಮಾಡಬೇಕು ಎನ್ನತಕ್ಕಂಥ 9 ತಿಂಗಳುಗಳ ಒಂದು ಅಧ್ಯಯನವನ್ನು ಮಾಡಿ ಕೊಡಬೇಕು ಎನ್ನತಕ್ಕಂಥ ಒಂದು ಇನ್‌ಸ್ಟ್ರಕ್ಷನ್ ಕೊಟ್ಟಂಥ ಸರ್ಕಾರ ಯಾವುದಾದರೂ ಇದ್ದರೆ ಅದು ಮಾನ್ಯ ಎಸ್.ಎಂ. ಕೃಷ್ಣವರ ಈ ಸರ್ಕಾರವಾಗಿದೆ. ಮಾತೆತ್ತಿದ್ದರೆ ನಮ್ಮ ಸರ್ಕಾರ ಮಾಡಿತು ನಮ್ಮ ಸರ್ಕಾರ ಮಾಡಿತು ಎಂದು ಮಾನ್ಯ ಸೋಮಶೇಖರ್‌ರವರು ಹೇಳುತ್ತಿರುತ್ತಾರೆ. ಸೋಮಶೇಖರ್‌ರವರಿಗೆ ಯಾವ ಸರ್ಕಾರವಿತ್ತೋ ಅದು ನನಗಂತೂ ಗೊತ್ತಿಲ್ಲ. ಕಾರಣವೇನೆಂದರೆ, ಸೋಮಶೇಖರ್‌ರವರು ಈಗ ಇರತಕ್ಕಂತಹ ಪಾರ್ಟಿ ನನಗೆ ಆ ಹೆಸರನ್ನು ಹೇಳುವುದಕ್ಕೆ ಬರುವುದಿಲ್ಲ. ಅದು ಅಂತಹ ಪಾರ್ಟಿಯಾಗಿದೆ. ಯಾವುದು ಎಂದರ ಅಖಿಲ ಭಾರತ ಪ್ರಗತಿಪರ ಜನತಾದಳ ಎಂದು ಇನ್ನು ಆ ಪಕ್ಷಕ್ಕೆ ಸಿಂಬಲ್ ಕೂಡ ಸಿಕ್ಕಿಲ್ಲ. ಅವರು ಯಾವತ್ತೂ ಆಡಳಿತವನ್ನು ಮಾಡಿದರೋ ಗೊತ್ತಿಲ್ಲ. ಯಾವುದೋ ಒಂದು ಪಕ್ಷದ ಸರ್ಕಾರದಲ್ಲಿ ಅವರು ಮಂತ್ರಿಯಾಗಿದ್ದರು. ಈಗಿನ ಅವರ ಪಕ್ಷದ ಸರ್ಕಾರದಲ್ಲಿ ಅವರು ಮಂತ್ರಿಯಾಗಿದ್ದರೆ ಏನು ಸ್ವಾಮಿ...

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಏಕೆಂದರೆ, ಕರಿಯಣ್ಣನವರು ಆಗ ಸದನದಲ್ಲಿರಲಿಲ್ಲ. ಅವರು ಈ ಸಲ ಗೆದ್ದು ಪುನಃ ಬಂದಿರುವುದು. ಆದ್ದರಿಂದ ಅವರಿಗೆ ಗೊತ್ತಿಲ್ಲ. ಹಿಂದೆ ಅವರು ಇದ್ದರು ಅವರು ಮಂತ್ರಿಯಾದಾಗ ಅವರು ಇರಲಿಲ್ಲವೆಂದು ಹೇಳುತ್ತಿದ್ದೇನೆ.

ಶ್ರೀ ಬಿ. ರಮಾನಾಥರೈ (ಸಾರಿಗೆ ಸಚಿವರು) : ನಿಮಗಿಂತ ಮೊದಲು ಕರಿಯಣ್ಣನವರು ಸದನವನ್ನು ಕಂಡವರಾಗಿದ್ದಾರೆ. ನೀವು ಮತ್ತೆ ನೋಡಿದವರಾಗಿದ್ದೀರಿ.

ಶ್ರೀ ಕೆ. ಜಯಪ್ರಕಾಶ ಹೆಗ್ಡೆ : ನೀವು ಸದನದಲ್ಲಿ ಯಾರಾದರೂ ಮಾತನಾಡುವಾಗ ಕೇಳಿ ಮಾತನಾಡಬೇಕು ನಾನು ಏನು ಹೇಳಿದೆ ಎಂದರೆ, ಆ ಸರ್ಕಾರ ಇದ್ದಾಗ ಅವರು ಇರಲಿಲ್ಲವೆಂದು, ಹಿಂದೆ ಇದ್ದರು ಎಂದು ನಾನು ಹೇಳಿದೆ. ತಾವು ನಿದ್ದೆ ಮಾಡಿದರೆ ನಾನು ಏನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಕರಿಯಣ್ಣ (ಹೊಳೆಹೊನ್ನೂರು) : ಮಾನ್ಯ ಛೇರ್ಮನ್‌ರವರೆ, ಸನ್ಮಾನ್ಯ ಹೆಗ್ಡೆಯವರಿಗೆ ನಾನು ಧನ್ಯವಾದಗಳನ್ನು ಹೇಳಬೇಕಾಗುತ್ತದೆ. ಕಾರಣವೇನೆಂದರೆ, ಅವರು ಮಾಜಿ

ಮುಖ್ಯಮಂತ್ರಿಗಳಾದ ಶ್ರೀ ಜೆ.ಹೆಚ್. ಪಟೇಲ್‌ರವರ ಜೊತೆ ಹೋಗಲಿಲ್ಲ. ಇಂಡಿಪೆಂಡೆಂಟ್ ಆಗಿ ಚುನಾಯಿತರಾಗಿ ಬಂದರು. ಏಕೆಂದರೆ, ಜಾತ್ಯಾತೀತ ಪಕ್ಷಕ್ಕೆ ನಾವು ಹೋಗಬೇಕಾಗುತ್ತದೆ. ನಾವು ಜಾತಿವಾದಿಗಳಲ್ಲ ಅದಕ್ಕಾಗಿ ಅವರು ಬಿಜೆಪಿಯವರ ಜೊತೆಗೆ ಹೋಗಲಿಲ್ಲ. ಅದಕ್ಕಾಗಿ ನಾವು ಅವರಿಗೆ ಥ್ಯಾಂಕ್ಸ್‌ನ್ನು ಹೇಳಬೇಕಾಗುತ್ತದೆ. ಮಾನ್ಯ ಸೋಮಶೇಖರ್‌ರವರು ಮಂತ್ರಿಯಾಗಿರುವುದು ಗೊತ್ತು. ಅವರು ಯಾವ ಪಾರ್ಟಿಯಲ್ಲಿದ್ದರೂ ಎಂಬುದು ಗೊತ್ತು. ಆದರೆ ಈಗಿರುವ ಪಾರ್ಟಿಯೊಳಗೆ ಅವರ ಸರ್ಕಾರ ಇತ್ತಾ ಎಂದು ನಾನು ಕೇಳುತ್ತಿರುವುದು? ಮತ್ತೆ ಈಗಿರುವ ಪಾರ್ಟಿ ಅವರ ಸರ್ಕಾರ ಇಲ್ಲದೆ ಇದ್ದ ಮೇಲೆ ಅವರು ನಮ್ಮ ಸರ್ಕಾರ ನಮ್ಮ ಸರ್ಕಾರ ಎಮದು ಹೇಳುತ್ತಿದ್ದಾರಲ್ಲಾ, ಅವರು ಯಾವ ರೀತಿ ಹೇಳುತ್ತಿದ್ದಾರೆ ಎನ್ನತಕ್ಕಂಥದ್ದೇ ನನಗೆ ಅನುಮಾನ? ನೀವು ಬೇಕಾದರೆ ಅವರ ಪಕ್ಷಕ್ಕೆ ಹೋಗಿ ನನಗೆ ಸಂತೋಷ ಏಕೆಂದರೆ ನೀವು ಅವರ ಪಕ್ಷಕ್ಕೆ ಹೋದರೆ ಏಕೆಂದರೆ 1 ಇದ್ದದ್ದು ಈಗ 4 ಆಗಿದೆ, 4 ಇದ್ದದ್ದು 5 ಆಗಿದೆ. ಇನ್ನು ಏನೇನೂ ಆಗುತ್ತದೆಯೋ ಗೊತ್ತಿಲ್ಲ. ನಿಮ್ಮ ನೆಲೆಯೇ ನಿಮಗೆ ಗೊತ್ತಾಗಿಲ್ಲ. ಎಲ್ಲಿ ನಿಂತುಕೊಳ್ಳಬೇಕು. ಎಲ್ಲಿಗೆ ಹೋಗಬೇಕು? ಯಾವ ರೀತಿಯಾಗಿ ಮಾಡಬೇಕು ಎಂಬ ನೆಲೆಯೇ ಗೊತ್ತಿಲ್ಲದವರು ಈಗ ಭಾಷಣವನ್ನು ಮಾಡಿದರೆ ನಾವು ಏನು ಹೇಳೋಣ.

ಶ್ರೀ ಸಿ. ಚೆನ್ನಿಗಪ್ಪ : ನಿಮಗೆ ಮುಂದಿನ ತಿಂಗಳು ಗೊತ್ತಾಗುತ್ತದೆ? ಏನು ನೆಲೆ ಎಂದು ಮುಂದಿನ ತಿಂಗಳು 15ನೇ ತಾರೀಖು ಗೊತ್ತಾಗುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಛೇರ್ಮನ್‌ರವರೆ, ಕರಿಯಣ್ಣನವರ ಮಾತು ಹೇಗೆ ಇದೆ ಎಂದರೆ, ಮಹಾಭಾರತದಲ್ಲಿ ಒಂದು ವಿಶೇಷವಾದ ಪರ್ವ ಬರುತ್ತದೆ. ಅದು "ಕಂಸನ ಪರ್ವ" ಕಂಸನಿಗೆ ಅವನ ಪಾಪದ ಕೊಡ ತುಂಬಿದೆ ಎಂದು ಗೊತ್ತಾಗಿರುತ್ತದೆ. ಆಗ ಅವನು ಒಂದು ಕನಸನ್ನು ಕಾಣುತ್ತಾನೆ. ಆ ಕನಸಿನಲ್ಲಿ ಅವನ ವಧೆಯಾಗುತ್ತದೆ. ಅವನಿಗೆ ಆ ಕನಸಿನಿಂದ ಎಚ್ಚರಿಕೆಯಾಗುತ್ತದೆ. ಎಚ್ಚರಿಕೆಯಾದ ತಕ್ಷಣವೇ ಕನಸಿನಲ್ಲಿ ಬಿದ್ದಿರತಕ್ಕಂತಹ ಸತ್ಯ ಆಗಬಾರದು ಎಂದು ಹೇಳಿಬಿಟ್ಟು ಬಹಳ ಪರಿತಪಿಸಿಕೊಳ್ಳುತ್ತಾನೆ ಅದನ್ನು ಕುವೆಂಪುರವರು ಬಹಳ ಚೆನ್ನಾಗಿ ಬರೆದಿದ್ದಾರೆ. ನಮ್ಮ ಕರಿಯಣ್ಣನವರು ಆ ಕಂಸನ ತರಹ ಈಗ ಮಾತನಾಡುವುದಕ್ಕೆ ಶುರು ಮಾಡಿದ್ದಾರೆ. ಅಷ್ಟೇನೇ.

ಶ್ರೀ ಕರಿಯಣ್ಣ : ಮಹಾಭಾರತದ ವಿಷಯವನ್ನು ತಾವು ಜ್ಞಾಪಕ ಮಾಡಿಕೊಟ್ಟಿದ್ದೀರಿ ಬಹಳ ಸಂತೋಷ. ಮಹಾಭಾರತದಲ್ಲಿ ಇನ್ನೊಂದು ಇದೆ. ಕೌರವರಿಗೂ ಪಾಂಡವರಿಗೂ ಯುದ್ಧ ಆದಾಗ ಯಾರು ಗೆದ್ದರು ಎನ್ನತಕ್ಕಂಥದ್ದು, ಯಾರು ಸೋತರೂ ಎನ್ನತಕ್ಕಂಥದ್ದು ಗೊತ್ತಿದೆ. ಕೌರವರ ಸಂಖ್ಯೆ ಜಾಸ್ತಿ ಇರುವುದರಿಂದ ಅದು ವಿಭಾಗ, ವಿಭಾಗವಾಗಿ ಹೋಗುತ್ತದೆ. ಪಾಂಡವರ ಸಂಖ್ಯೆಯಲ್ಲಿ ಪಾಂಡವರು ಅತ್ಯಂತ ಒಳ್ಳೆಯ ಕೆಲಸವನ್ನು ಮಾಡಿರುವುದರಿಂದ ಅವರಿಗೆ ಧರ್ಮದಲ್ಲಿ ಶಕ್ತಿ ಸಿಕ್ಕಿ ಸಿಗುತ್ತದೆ.

ಶ್ರೀ ಸಿ. ಚೆನ್ನಿಗಪ್ಪ : ಪಾಂಡವರು ಮತ್ತು ಕೌರವರು ಎಲ್ಲಾ ನೀವೇ?

ಶ್ರೀ ಕರಿಯಣ್ಣ : ಆದ್ದರಿಂದ ಅವರು ಮುಂದೆ ಪ್ರಗತಿಪರವಾಗಿ ಹೋಗುವುದಕ್ಕೆ ಸಾಧ್ಯವಾಗುತ್ತದೆ. ಆ ರೀತಿಯಾಗಿ ನೀವು ಪಾಂಡವರ ಮೇಲೆ ಆಪಾದನೆ ಮಾಡುವುದರಿಂದ ಕೌರವರಿಗೆ ಶ್ರೇಯಸ್ಸು ಸಿಗುವುದಿಲ್ಲ. ಅದ್ದರಿಂದ ಏತಕ್ಕಾಗಿ ಸುಮ್ಮನೆ ಮಾಡುತ್ತೀರಿ? ನೀವು ಆಗಲೇ ವಿಭಾಗವಾಗಿದ್ದೀರಿ, ಒಂದಲ್ಲ ಒಂದು ದಿವಸ ತಾವು ಕೂಡಿಕೊಂಡು ಬನ್ನಿರಿ ನಮಗೆ ತಾವು

ಕೂಡಿಕೊಂಡು ಬಂದರೆ ಸಂತೋಷ. ತಾವು ಒಂದಾಗದಿದ್ದರೆ ಸರಿಯಾಗುವುದಿಲ್ಲ. ಆದ್ದರಿಂದ ತಾವು ಇಷ್ಟರತನಕ ಕಾನ್‌ಸ್ಟಿಟ್ಯೂಷನ್‌ಗೆ ಎಗೆನೆಸ್ಟ್ ಆಗಿ ದೇವಸ್ಥಾನಕ್ಕೆ ಮಾಡಿದ್ದೀರಿ. ನೀವು ಜಾತಿವಾದಿಗಳಾಗಿದ್ದೀರಿ. ಅಂತ ಹೇಳುತ್ತಿದ್ದರು. ನೀವು ಮತ್ತೊಂದು ಸಾರಿ ಜಾತ್ಯಾತೀತ ವಾದಿಗಳಾಗಬೇಕೆಂದು ವಾಪಸ್ಸು ಹೋಗಿದ್ದೀರಿ. ಮತ್ತೊಂದು ಸಾರಿ ಜಾತಿ ವಾದಿಗಳ ಜೊತೆಯಲ್ಲಿ ಸೆಕ್ಯುಲರ್ ಸಿಸ್ಟಮ್ ಜೊತೆಯಲ್ಲಿ ಕೂಡದೆಯೇ ಒಟ್ಟಾದರೆ ನಮಗೂ ಸಂತೋಷ. ಒಂದು ಪಕ್ಷ ಇರಬೇಕೆಂದು ನಾವೂ ಕೂಡ ಬಯಸುತ್ತೇವೆ. ರಾಷ್ಟದಲ್ಲಿ ಮತ್ತೊಂದು ಜಾತ್ಯಾತೀತ ವಾದದಲ್ಲಿ ನಂಬಿಕೆಯಿರತಕ್ಕಂತಹ ಪಕ್ಷ ಇರಬೇಕೆಂಬುದು ನಮ್ಮ ಆಶಯ.

ಶ್ರೀ ಕೆ. ಜಯಪ್ರಕಾಶ ಹೆಗ್ಡೆ : ಮಾನ್ಯ ಕರಿಯಣ್ಣನವರೆ, ಜಾತ್ಯಾತೀತ ವಾದ ಒಂದು ಪರ್ಯಾಯ ಪಕ್ಷ ಬೇಕಲ್ಲಾ.

ಶ್ರೀ ಕರಿಯಣ್ಣ : ನಾನು ಇರಬೇಕೆಂದು ಹೇಳುತ್ತಿದ್ದೆನಲ್ಲಾ, ಅದನ್ನು ನಾನೇ ಒಪ್ಪಿಕೊಳ್ಳುತ್ತಿದ್ದೇನೆ. ಇವತ್ತು ನಮ್ಮ ಪರಿಸ್ಥಿತಿ ಹೇಗಿದೆ ಎಂದರೆ ಇವತ್ತು ತಾವು ನೋಡಿದ ಹಾಗೆ, ನಮ್ಮ ಕಾಂಗ್ರೆಸ್ ಪಕ್ಷದ ಸರ್ಕಾರ ಅದರಲ್ಲೂ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಎಸ್.ಎಂ. ಕೃಷ್ಣರವರ ಮುಖಂಡತ್ವದಲ್ಲಿ ಇರತಕ್ಕಂತಹ ಸರ್ಕಾರ ರಸ್ತೆಗಳು ಸರಿಯಿಲ್ಲವೆಂದರೆ ಯಾವತ್ತೂ ಸಹಿತಿ ಕುದುರೆ ಮೇಲೆ ಹೋಗಿ ಎಂದು ಹೇಳಲಿಲ್ಲ. ಹೆಲಿಕಾಪ್ಟರ್‌ನಲ್ಲಿ ಹೋಗಿ ಎಂದು ಹೇಳಲಿಲ್ಲ. ಇವತ್ತು ಇಂತಹ ಭೀಕರವಾದ ಬರಗಾಲವಿದ್ದರೂ ಸಹಿತ ನಮ್ಮ ಸರ್ಕಾರ ಗುಂಡಿಗಳನ್ನು ಫಸ್ಟ್‌ಕ್ಲಾಸ್‌ನಲ್ಲಿ ಮುಚ್ಚಿದೆ. ಅನೇಕ ಕಡೆ ಒಳ್ಳೆಯ ಟಾರು ರಸ್ತೆಗಳನ್ನು ಮಾಡಿದೆ. ಇವತ್ತು ಬೆಂಗಳೂರಿನಲ್ಲಿ ಪ್ರತಿ ಸಾರಿಯೂ ಆಟೋರಿಕ್ಷಾದವರು ನಮ್ಮ ರಸ್ತೆಗಳು ಸರಿಯಿಲ್ಲ. ಆಟೋರಿಕ್ಷಾಗಳು ಹಾಳಾಗುತ್ತಿದೆ ಎಂದು ಚಳುವಳಿಯನ್ನು ಮಾಡುತ್ತಿದ್ದರು. ಇವತ್ತು ಬೆಂಗಳೂರಿನಲ್ಲಿ ಎಷ್ಟೊಂದು ಅಭಿವೃದ್ಧಿಯಾಗಿದೆ ಎಂಬುದನ್ನು ತಾವು ಗಮನಿಸಬೇಕು. ಇಷ್ಟೊಂದು ಭೀಕರವಾಧ ಬರಗಾಲವಿದ್ದರೂ ಸಹಿತ ಆರ್ಥಿಕತೆಯನ್ನು ಸಮರ್ಪಕವಾಗಿ ನಡೆಸಿಕೊಂಡು ಇವತು ಎ-1 ಮುಖ್ಯಮಂತ್ರಿಗಳು, ನಿಮ್ಮ ಬಾಯಿಯಿಂದ ಆ ಮಾತು ಬೇಕಾಗಿಲ್ಲ. ಆದರೆ ಪತ್ರಿಕೆಗಳು ಇಂಪಾರ್ಷಿಯಲ್ ಆಗಿರತಕ್ಕಂತಹ ಪತ್ರಿಕೆಗಳು ಈ ರಾಷ್ಟದಲ್ಲಿರತಕ್ಕಂತಹ ಎಲ್ಲಾ ಪತ್ರಿಕೆಗಳು ಸಹಿತಿ ಸನ್ಮಾನ್ಯ ಮುಖ್ಯಮಂತ್ರಿಗಳನ್ನು ಎ-1 ಎಂದು ಬರೆದರೆ ನಿಮಗ್ಯಾಕೆ ಸ್ವಾಮಿ ಅಸೂಯೆ? ನಿಮಗ್ಯಾಕೆ ಹೊಟ್ಟೆ ಉರಿ ನೀವೂ ಸಹಿತ ಆ ರೀತಿಯಲ್ಲಿ ನಮ್ಮ ಜೊತೆಯಲ್ಲಿ ಕೂಡ ಒಳ್ಳೆಯ ಸಜೆಷನ್ಸ್‌ಗಳನ್ನು ಕೊಡಿ. ನಾವು ಕೆಲಸವನ್ನು ಮಾಡೋಣ. ಎಲ್ಲರೂ ಕೈ ಜೋಡಿಸಿಕೊಂಡು ಕೆಲಸ ಮಾಡಿ ಈ ಕರ್ನಾಟಕವನ್ನು ಅತ್ಯಂತ ಪ್ರಗತಿಪರವಾದ ರಾಜ್ಯವನ್ನಾಗಿ ಮಾಡೋಣ. ಇಂಡಿಯಾ ದೇಶದಲ್ಲಿ ಅತ್ಯಂತ ಒಳ್ಳೆಯ ಸರ್ಕಾರ ಚೆನ್ನಾಗಿ ಕೆಲಸ ಮಾಡುತ್ತಿದೆನ್ನುವ ಕೀರ್ತಿಯನ್ನು ನಾವು ಪಡೆಯುವುದಕ್ಕೆ ನಿಮ್ಮ ಸಹಕಾರವೂ ಕೂಡ ನಮಗೆ ಬೇಕಾಗುತ್ತದೆ. ಆದನ್ನು ಕೊಟ್ಟರೆ ಒಳ್ಳೆಯದೇ ವಿನಹ ಪತ್ರಿಕೆಗಳು ಎ-1 ಮುಖ್ಯಮಂತ್ರಿಗಳು ಎಂದು ವರದಿ ಮಾಡಿವೆ. ಅದು ನನಗೂ ಕೂಡ ಸಂತೋಷವನ್ನು ತಂದಿದೆ. ಮಾತನ್ನೂ ಸಹಿತ ನಮ್ಮ ಸಿಂಧ್ಯಾಸಾಹೇಬರು ಹೇಳಿದರು. ಅವರು ಭ್ರಷ್ಟಾಚಾರದ ಬಗ್ಗೆಯೂ ಕೂಡ ಹೇಳಿದರು. ಅದೇನೆಂದರೆ, ಅದರ ಬಗ್ಗೆ ನಾನು ಹೆಚ್ಚಿಗೆ ವ್ಯಾಖ್ಯಾನ ಮಾಡುವುದಕ್ಕೆ ಹೋಗುವುದಿಲ್ಲ. ಅದನ್ನು ನಾನು ಮಾಡುವುದಕ್ಕೆ ಹೋದರೆ ಅದು ಬೇರೆ ಕಡೆಗೆ ತಿರುಗುತ್ತದೆ. ಅದಕ್ಕೆ ನಾನು ಹೆಚ್ಚಿಗೆ ರೂಪ ಕೊಡುವುದಕ್ಕೆ ಹೋಗುವುದಿಲ್ಲ. ಇವತ್ತು ನಾವು ರಾಷ್ಟದಲ್ಲಿ ನೋಡಿದ್ದೇವೆ. ಏನು ಕಾರ್ಗಿಲ್ ಯುದ್ಧದಲ್ಲಿ ಯೋಧರು ಮಡಿದರಲ್ಲಾ, ಆ ಸೈನಿಕರ ಹೆಣವನ್ನು

ತರುವ ಬಾಕ್ಸ್‌ನಲ್ಲಿಯೂ ಲಂಚವನ್ನು ಹೊಡೆದಿರುವಂತಹದ್ದು ಅಷ್ಟೊಂದು ಆಗಿದೆಯೇ ಇಲ್ಲಿ? ನಿರ್ಣಯ ಮಾಡಬೇಕು ಸದನ ಸಮಿತಿ ರಚನೆ ಮಾಡಬೇಕೆಂದು ಹೇಳುತ್ತಿದ್ದಿರಲ್ಲಾ, ಇವತ್ತು ಡಿಫೆನ್ಸ್‌ನಲ್ಲಿ ತೆಹಲ್ಕಾ ಪ್ರಕರಣದಲ್ಲಿ, ಡಿಫೆನ್ಸ್‌ನಲ್ಲಿ ನಮ್ಮ ಸೈನಿಕರನ್ನು ರಕ್ಷಣೆ ಮಾಡಬೇಕು. ಏನೂ ಯುದ್ಧವನ್ನು ಮಾಡಬೇಕು. ರಾಷ್ಟ್ರವನ್ನು ರಕ್ಷಣೆ ಮಾಡಬೇಕು. ಅಂತಹ ಕಡೆ ಭ್ರಷ್ಟಾಚಾರ ನಡೆಯಿತಲ್ಲಾ. ಇವತ್ತು ನೀವು ಅಲ್ಲಿ ಇದರ ಬಗ್ಗೆ ಪ್ರಶ್ನೆ ಮಾಡಿದ್ದೀರಾ? ಅಂತಹ ದೊಡ್ಡ ಒಂದು ಭ್ರಷ್ಟಾಚಾರ. ಇಲ್ಲಿ ಬರಗಾಲದಲ್ಲಿ ಆ ರೀತಿ ಆಗಿದೆಯೇ? ಸಾವಿರಾರು ಕೋಟಿ ರೂಪಾಯಿಗಳು ಏನಾದರೂ ಈ ಬರಗಾಲ ಪರಿಹಾರಕ್ಕೆ ಬಂದಿದೆಯೇ? ಇಂತಹ ಒಂದು ಪರಿಸ್ಥಿತಿ ಇರಬೇಕಾದರೆ, ನೀವು ಇವತ್ತಿನದಿವಸ ಬಹಳ ಇದರಲ್ಲಿ ಭ್ರಷ್ಟಾಚಾರ ಆಗಿ ಹೋಗಿದೆ. ಇವತ್ತು ಬರಗಾಲದಲ್ಲಿ ನಡೆಯಬಾರದೆಲ್ಲಾ ನಡೆದುಹೋಗಿದೆ ಎನ್ನತಕ್ಕಂಥದ್ದರ ಬಗ್ಗೆ ಏನಾದರೂ ಇದ್ದರೆ ಹೇಳಿ?

ಶ್ರೀ ಆರಗ ಜ್ಞಾನೇಂದ್ರ : ಸ್ಟಾಂಪ್ ಪೇಪರ್, ಬೊಫೋರ್ಸ್ ಇವೆಲ್ಲದರ ಕಡೆ ತಾವು ಸ್ವಲ್ಪ ಮುಂದೆ ಬನ್ನಿ. ನಗರಸಭೆಯ ಅವ್ಯವಹಾರಗಳು.

ಛೇರ್ಮನ್ : ಮಾನ್ಯ ಕರಿಯಣ್ಣನವರೆ, ತಮಗೆ ಮಾತನಾಡುವುದಕ್ಕೆ ಇನ್ನು ಎಷ್ಟು ಸಮಯ ಬೇಕು? ಬಹಳ ಸಮಯ ಆಯಿತು. ಕರಿಯಣ್ಣನವರು ಬೇಗನೆ ಮುಗಿಸಲಿ. ಬೇರೆಯವರು ಮಾತನಾಡಬೇಡಿ.

ಗೊಂದಲ

ಶ್ರೀ ಸಿ. ಚೆನ್ನಿಗಪ್ಪ : ಇವತ್ತಿನವರೆವಿಗೂ ಸಿಎಂಸಿಯ ಎನ್‌ಕ್ವಯರಿ ರಿಪೋರ್ಟ್ ಬರಲಿಲ್ಲ.

ಶ್ರೀ ಕರಿಯಣ್ಣನವರು : ಮಾನ್ಯ ಜ್ಞಾನೇಂದ್ರರವರು ಬಹಳ ಒಳ್ಳೆಯ ವಿಚಾರದ ಬಗ್ಗೆ ಪ್ರಸ್ತಾಪ ಮಾಡಿದರು. ಇವತ್ತು ಸ್ಟಾಂಪ್ ಹಗರಣ ಇದು ನಮ್ಮ ಹಗರಣವಲ್ಲ ಇದು ರಾಷ್ಟ್ರದಾದ್ಯಂತ ಅದಂತಹ ಹಗರಣ. ಇದು ಇಂಡಿಯಾದೇಶಕ್ಕೆ ಸಂಬಂಧಪಟ್ಟಿರುವುದು ಅದನ್ನು ಅವರು ಪ್ರಿಂಟ್ ಮಾಡಿಕೊಡುವುದು ಆ ಹಗರಣವನ್ನು ಹಿಡಿದಂತಹ ಕೀರ್ತಿ ನಮ್ಮ ಕರ್ನಾಟಕದ ಪೊಲೀಸ್‌ನವರಿಗೆ ಹೋಗಬೇಕು. ನಮ್ಮ ಕರ್ನಾಟಕ ರಾಜ್ಯದ ಪೊಲೀಸ್‌ನವರು ಪ್ರಪ್ರಥಮವಾಗಿ ಹಿಡಿದಂತಹ ಕೀರ್ತಿಗೆ ಪಾತ್ರರಾಗಿದ್ದಾರೆ. ನೀವು ಅದನ್ನು ಬಿಟ್ಟು ಸಿ.ಓ.ಡಿ. ಎನ್‌ಕ್ವಾಯರಿಗೆ ಕೊಡಿ ಎಂದು ಹೇಳುತ್ತಿದ್ದೀರಿ. ಇದು ಯಾರ ತಪ್ಪು ಸ್ವಾಮಿ? ಯಾರೋ ಮಾಡಿದ ತಪ್ಪನ್ನು ಯಾರಿಗೋ ಹಾಕುತ್ತಾರೆ. ಇದರ ಬಗ್ಗೆ ನೀವು ಹೇಳಿ? ಹಾಗೆಯೇ ಮಾನ್ಯ ಸದಸ್ಯರು ಸಿಎಂಸಿಯ ಬಗ್ಗೆ ಪ್ರಸ್ತಾಪ ಮಾಡಿದರು. ಇವತ್ತು ಲೋಕಾಯುಕ್ತವನ್ನು ಸ್ಟ್ರಾಂಗ್ ಮಾಡಿರತಕ್ಕಂಥದ್ದು, ಸರ್ಕಾರ ಲೋಪದೋಷಗಳನ್ನು ಮಾಡಿದರೆ ಸ್ಪಷ್ಟವಾಗಿ ಹೇಳಿ ಎಂದು ಅಧಿಕಾರ ಕೊಟ್ಟಿರುವುದು ಒಳ್ಳೆಯ ಲೋಕಾಯುಕ್ತರನ್ನು ಅಪಾಯಿಂಟ್ ಮಾಡಿರುವುದು, ಈ ಎಲ್ಲಾ ಗೌರವಗಳು ಕರ್ನಾಟಕ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳಿಗೆ ಸಲ್ಲಬೇಕು. ಅವರಿಗೆ ಇವರು ಸರ್ಟಿಫಿಕೇಟನ್ನು ಕೊಡುವುದೇ ಇಲ್ಲ. ಅವರು ಹೋಗಿ ಇದರ ಬಗ್ಗೆ ತನಿಖೆಯನ್ನು ಮಾಡುತ್ತಿದ್ದಾರೆ. ನಾವು ಮುಗಿಸಿದ ಮೇಲೆ ತಾವು ಮಾತನಾಡಿ.

ಛೇರ್ಮನ್ : ಚೆನ್ನಿಗಪ್ಪನವರೆ, ಅವರು ಮುಗಿಸಿದ ಮೇಲೆ ತಾವು ಮಾತನಾಡಿ.

ಗೊಂದಲ

ಛೇರ್ಮನ್ : ಕರಿಯಣ್ಣನವರೆ, ತಾವು ಸ್ವಲ್ಪ ಬೇಗ ಮುಗಿಸಿ. ದಯವಿಟ್ಟು ತಾವು ಮಾತನಾಡುವುದನ್ನು ನಿಲ್ಲಿಸಬೇಡಿ. ಯೀಲ್ಡ್ ಆಗಬೇಡಿ. ತಾವು ಮಾತನ್ನು ಮುಂದುವರಿಸಿ.

ಶ್ರೀ ಕರಿಯಣ್ಣ : ಈಗ ಆ ಸಿಎಂಸಿಯ ಹಗರಣ ಬಗ್ಗೆ ಲೋಕಾಯುಕ್ತದವರು ತನಿಖೆಯನ್ನು ಮಾಡುತ್ತಿದ್ದಾರೆ. ಅವರು ತನಿಖೆಯನ್ನು ಮಾಡಿ ವರದಿಯನ್ನು ಕೊಡಲಿ. ಅವರು ವರದಿಯನ್ನು ಕೊಟ್ಟ ಮೇಲೆ ಆಕ್ಷನ್ ತೆಗೆದುಕೊಳ್ಳಬೇಕೆಂಬುದರ ಬಗ್ಗೆ ಎಲ್ಲವನ್ನೂ ಸರ್ಕಾರವು ಮಾಡುತ್ತದೆ. ಸರ್ಕಾರ ಅದನ್ನು ಮುಚ್ಚಿಕೊಂಡಿಲ್ಲ. ಅವರ ಸರ್ಕಾರದವರ ಹಾಗೆ ತನಿಖೆ ಮಾಡದೆ ಕೈಬಿಟ್ಟಿಲ್ಲ. ಇವತ್ತು ಸಹಿತ ತನಿಖೆ ಮಾಡಲಿಕ್ಕೆ ನಾವು ಸಿದ್ದರಿದ್ದೇವೆ. ಇನ್ನು ಭೀಕರ ಬರಗಾಲವನ್ನು ಎದುರಿಸಬೇಕಾದರೆ ನಮಗೆ ಎಷ್ಟೊಂದು ಆರ್ಥಿಕವಾಗಿ ತೊಂದರೆ ಬಂತು ಎಂದರೆ ನಮಗೆ ಎರಡು ವರ್ಷಗಳಿಂದ ನಮ್ಮ ರಾಜ್ಯದ ಉತ್ಪತ್ತಿ ಕಡಿಮೆ ಆಯಿತು. ರೈತಾಪಿ ಜನಗಳ ವಹಿವಾಟು ಇಲ್ಲದಿರುವುದರಿಂದ, ಬೆಳೆ ಇಲ್ಲದಿರುವುದರಿಂದ, ಕೃಷಿ ಉತ್ಪನ್ನಗಳು ಇಲ್ಲದೆ ಕೃಷಿ ಉತ್ಪನ್ನಗಳ ಯಾವುದೇ ವಹಿವಾಟು ಇಲ್ಲದಿರುವುದರಿಂದ ಮಾರಾಟ ತೆರಿಗೆ ಆಗಲಿ, ಅಥವಾ ಮತ್ತೊಂದಾಗಲೀ ಬಹಳ ಕಡಿಮೆ ಆಯಿತು. ಆಗಿನ ಕೇಂದ್ರ ಸರ್ಕಾರದಲ್ಲಿ ಕಾಂಗ್ರೆಸ್ ಪಕ್ಷದ ಪ್ರಧಾನಮಂತ್ರಿಗಳಾಗಿದ್ದ ಶ್ರೀ ಲಾಲ್‌ಬಹುದ್ದೂರ್ ಶಾಸ್ತ್ರಿಗಳವರು ನಮಗೆಲ್ಲಾ ಕೆಂಪು ಜೋಳ, ಮುಸುಕಿನ ಜೋಳವೆಲ್ಲಾ ಕೊಟ್ಟು ನಮ್ಮ ರಕ್ಷಣೆಯನ್ನು ಮಾಡಿದ್ದರು. ಆದರೆ ಈಗಿನ ಸರ್ಕಾರ ಇಷ್ಟೊಂದು ಕಷ್ಟವಿದ್ದರೂ ಸಹಿತ ಕೇಂದ್ರ ಸರ್ಕಾರದವರು ನಮ್ಮ ರಾಜ್ಯಕ್ಕೆ ನೀಡಿದ ಗ್ರಾಂಟ್‌ನಲ್ಲಿ ಶೇಕಡ 35 ರಷ್ಟು ಪ್ಲಾನಿಂಗ್‌ನಲ್ಲಿ ಅಂಕಿಅಂಶಗಳ ಮಾಹಿತಿ ಪ್ರಕಾರ ಕಟ್ ಮಾಡಿದ್ದಾರೆಂದು ನಾನು ಹೇಳುತ್ತೇನೆ. ಹೀಗಾದರೆ ನಾವು ಯಾವ ರೀತಿ ಬರವನ್ನು ನಿವಾರಿಸಬೇಕು. ಇವತ್ತು ನಾವು ಕೇಂದ್ರ ಸರ್ಕಾರದವರ ಮೇಲೆ ಆಪಾದನೆಯಾಗಲೀ ದೂರನ್ನಾಗಲೀ ಮಾಡುತ್ತಿಲ್ಲ. ಅವರು ಸಾಕಷ್ಟು ಸಹಾಯವನ್ನು ನಮಗೆ ಮಾಡಿದ್ದಾರೆ. ಆದರೆ ಮಾಡಬೇಕಾದಂತಹ ಸಹಾಯವನ್ನು ಅವರು ನಮಗೆ ಮಾಡಿಲ್ಲ. ಹಾಗಾದರೆ ನಮ್ಮ ಪ್ರಯತ್ನವೇನು? ನಾವು ವಿರೋಧಪಕ್ಷದವರ ಜೊತೆಯಲ್ಲಾಗಲಿ, ಇನ್ನೊಬ್ಬರ ಜೊತೆಯಲ್ಲಿ ಆಗಲಿ ನೀವು ನಮ್ಮ ಜೊತೆಯಲ್ಲಿ ಬನ್ನಿ ಎಂದು ಅವರೊಂದಿಗೆ ಭಿಕ್ಷೆ ಬೇಡಬೇಕೆ? ಕೇಂದ್ರ ಸರ್ಕಾರದವರ ಕೈ ಕಾಲು ಹಿಡಿದುಕೊಂಡು ಬೇಡಬೇಕೆ? ಅವರಿಗೂ ಜವಾಬ್ದಾರಿ ಇಲ್ಲವೇ ಆಂಧ್ರ ರಾಜ್ಯಕ್ಕೆ ಒಂದು ಮಾದರಿ ಅನುದಾನ ಕೊಡುವುದು, ತಮಿಳುನಾಡು ರಾಜ್ಯಕ್ಕೆ ಒಂದು ಮಾದರಿ ಅನುದಾನ ಕೊಡುವುದು, ಇದು ಯಾವ ನ್ಯಾಯ? ಇದೊಂದೇ ಕಾರಣ ಅಲ್ಲ, ಕೇಂದ್ರ ಸರ್ಕಾರ ಬಿದ್ದು ಹೋಗುತ್ತದೆ ಎನ್ನುವ ಕಾರಣಕ್ಕೆ ರಾಜಕಾರಣಕ್ಕಾಗಿ ಸಾವಿರಾರು ರೂಪಾಯಿಗಳನ್ನು ಬೇರೆ ರೂಪದಲ್ಲಿ ಕೊಡುತ್ತಿದ್ದಾರೆ. ಕೊಡಲಿ ಚಿಂತೆಯಿಲ್ಲ. ಆಂಧ್ರದವರು ಬೆಂಬಲ ವಾಪಸ್ಸು ತೆಗೆದುಕೊಂಡರೆ ಕೇಂದ್ರದಲ್ಲಿ ಸರ್ಕಾರ ಬಿದ್ದು ಹೋಗುತ್ತದೆ. ಅದಕ್ಕೋಸ್ಕರವಾಗಿ ಆಂಧ್ರದವರಿಗೆ ಹಣ ಕೊಡುವಾಗ ಯಾವುದೇ ಕಾನೂನು ಕಟ್ಟಳೆ ಇಲ್ಲ ನೀವು ನಮ್ಮ ರಾಜ್ಯದಲ್ಲಿ ಹುಟ್ಟಿದ್ದೀರಿ. ನೀವೆಲ್ಲಾ ನಮ್ಮ ರಾಜ್ಯದ ಶಾಸಕರಾಗಿದ್ದೀರಿ. ನಿಮ್ಮ ಜಿಲ್ಲೆಗಳಲ್ಲಿ ನಮಗಿಂತ ಹೆಚ್ಚು ಭೀಕರವಾದ ಬರಗಾಲವಿದೆ. ನಮಗೆ ಒಳ್ಳೆಯ ಮಳೆಯಾದರೆ ನಮಗೆ ಚಾನೆಲ್‌ನಲ್ಲಿ ನೀರು ಬರಬಹುದು. ನಾವು ಎರಡು ವರ್ಷಗಳಿಂದ ಬೆಳೆ ಇಲ್ಲದೆ ಕಷ್ಟವನ್ನು ಅನುಭವಿಸಿದ್ದೇವೆ. ಮಳೆಗಾಲದಲ್ಲಿ ಬೇಸಿಗೆ ಕಾಲದಲ್ಲಿ, ಈ ಮಳೆಗಾಲದಲ್ಲಿಯೂ ಸಹ ನಮಗೆ ಮಳೆಯಾಗಿಲ್ಲ. ನಮಗೆ ಭೀಕರವಾದ ಬರಗಾಲ 3–4 ವರ್ಷಗಳಿಂದ ಕಾಡುತ್ತಿದೆ ಹೀಗಿದ್ದರೂ ಸಹ ಕೇವಲ ಇದನ್ನು ತನಿಖೆ ಮಾಡಿ ಅಂತ ಹೇಳುತ್ತಿದ್ದಾರಲ್ಲ ಏಕೆ ಇದರ ಬಗ್ಗೆ ಡೆಲಿಗೇಷನ್ ಹೋಗಬಾರದು? ಇವತ್ತಿನ ದಿವಸ ಏನಾದರೂ ಒಳ್ಳೆಯ ಕೆಲಸವನ್ನು ಮಾಡಿದರೆ ಅದನ್ನು ನೀವು ತನಿಖೆ ಮಾಡಿಸಿ ಅಂತ ಹೇಳಿದರೆ, ಅದರಲ್ಲಿ ಎಷ್ಟನ್ನು ತನಿಖೆ ಮಾಡಿಸಬೇಕು.

ಯಾವುದನ್ನು ಮಾಡಿಸಬೇಕು ಅನ್ನುವುದನ್ನು ಹೇಳಿ ಬೇಡವೆಂದು ಹೇಳುವುದಿಲ್ಲ. ಸಾರಸಗಟಾಗಿ ಎಲ್ಲವೂ ತಪ್ಪಾಗಿದೆಯೆಂದು ಹೇಳುವುದರಲ್ಲಿ ಅರ್ಥವಿಲ್ಲ. ಇವತ್ತು ವಿರೋಧ ಪಕ್ಷದ ಮುಖಂಡರು ಸಹಿತ ಮಾತನಾಡುವಾಗ ಯಾರೂ ಸಹಿತ ತಮ್ಮ ತಮ್ಮ ಕ್ಷೇತ್ರದಲ್ಲಿ ಇಂತಹದು ಹಾಳಾಗಿದೆ ಅಂತಾಗಲಿ, ಭ್ರಷ್ಟಾಚಾರವಾಗಿದೆ ಅಂತ ಹೇಳಲಿಲ್ಲ. ಆ ರೀತಿ ಪತ್ರವನ್ನು ಸರ್ಕಾರಕ್ಕೆ ಬರೆಯಲಿಲ್ಲ.

ಛೇರ್ಮನ್ : ಇನ್ನೆಷ್ಟು ಸಮಯ ಬೇಕು ಕರಿಯಣ್ಣನವರೆ?

ಶ್ರೀ ಕರಿಯಣ್ಣ : ನೀವು ಬೇಗ ಮುಗಿಸಿ ಅಂದರೆ ಮುಗಿಸಿಬಿಡುತ್ತೇನೆ.

ಛೇರ್ಮನ್ : ಬೇಗ ಮುಗಿಸಿ, ಏಕೆಂದರೆ ಇವತ್ತು ಚರ್ಚೆ ಮುಗಿಯುತ್ತದೆ.

ಶ್ರೀ ಕರಿಯಣ್ಣ : ನಮಗೆ ಇಷ್ಟು ಭೀಕರವಾದ ಬರಗಾಲ ಬಂದಿದ್ದರೂ ಸಹಿತ ಕೇಂದ್ರ ಸರ್ಕಾರ ನಮಗೆ ಕೈಜೋಡಿಸದೆ 2001–02ರಲ್ಲಿ ಶೇಕಡ 20 ರಷ್ಟು, 2002–03 ರಲ್ಲಿ ಶೇಕಡ 35 ರಷ್ಟು ಬಜೆಟ್ ಅನ್ನು ಕಟ್ ಮಾಡಿ ಇವತ್ತಿನ ದಿವಸ ಮತ್ತಷ್ಟು ಭೀಕರ ಬರಗಾಲವನ್ನು ರಾಜ್ಯ ಎದುರಿಸುವಂತಹ ಸಂಕಟವನ್ನು ಸೃಷ್ಟಿ ಮಾಡಿದೆ. ಹಾಗಾಗಿ ಇವತ್ತು ನಾವೆಲ್ಲಾ ಒಗ್ಗಟ್ಟಾಗಿ ಈ ಭೀಕರ ಬರಗಾಲವನ್ನು ಎದುರಿಸಬೇಕಾಗಿದೆ ಅದಕ್ಕೆ ನಾವೆಲ್ಲಾ ಸೇರಿ ಒಂದು ನಿರ್ಣಯ ಕೈಗೊಂಡು ಕೇಂದ್ರ ಸರ್ಕಾರವನ್ನು ವಿನಂತಿ ಮಾಡಬೇಕು. ನಮಗೆ ಇನ್ನೂ ಅನೇಕ ಕಡೆ ಕೂಲಿಯನ್ನು ಕೊಡತಕ್ಕಂತಹ ಜನಗಳಿಗೆ ಕೂಲಿ ಕೊಡುವಂತಹ ಅವಕಾಶವಿದೆ.

ಶ್ರೀ ಆರಗ ಜ್ಞಾನೇಂದ್ರ : ನಾವು ಮಾನ್ಯ ಖರ್ಗೆಯವರಿಗೆ, ಹಿರಿಯರಿಗೆ ಹೇಳುತ್ತಲೇ ಬಂದೆವು, ನಮ್ಮ ಕರಿಯಣ್ಣನವರನ್ನು ಮಂತ್ರಿ ಮಾಡಿ ನಮ್ಮ ಜಿಲ್ಲೆಗೆ ಕೊಡಿ ಎಂದು ಕೇಳುತ್ತಿದ್ದೇವೆ ಅವರಿಗೆ ಎಷ್ಟು ಕೆಪಾಸಿಟಿ ಇದೆ ನೋಡಿ? ಎಲ್ಲದಕ್ಕೂ ಸರ್ಕಾರದ ಪರವಾಗಿ ಉತ್ತರ ಕೊಡುತ್ತಿದ್ದಾರೆ. ಅವರನ್ನು ಮಂತ್ರಿ ಮಾಡಿರಿ ಅಂದರೆ ಮಾಡಿಲ್ಲ.

ಛೇರ್ಮನ್ : ಮಾನ್ಯ ಕರಿಯಣ್ಣನವರೇ ಮುಂದುವರಿಸಿ, ಬೇಗ ಮಾತನಾಡಿ ಮುಗಿಸಿ.

ಶ್ರೀ ಕರಿಯಣ್ಣ : ಈಗ ಜಗದೀಶ್ ಶೆಟ್ಟರ್ ಜಾಗಕ್ಕೆ ನೀವು ಬರಲಿ ಅನ್ನುವ ನಮ್ಮ ಅಪೇಕ್ಷೆ ಇದೆ. ನೀವು ವಿರೋಧಪಕ್ಷದ ನಾಯಕರಾಗಿ ಹೇಗೆ ಕೆಲಸ ಮಾಡುತ್ತಿರಿ ನೋಡೋಣ.

ಶ್ರೀ ಪಿ.ಹೆಚ್. ಪೂಜಾರ್ : ಮಾನ್ಯ ಕರಿಯಣ್ಣನವರೇ ನಮಗಿರುವುದು ಒಂದೇ ಜಾಗ, ಯಾರು ಬರಬೇಕಾದರೂ ಒಂದಕ್ಕೆ ಬರಬೇಕು ನಿಮಗಾದರೆ ಬಹಳಷ್ಟು ಜಾಗ ಇದೆ.

ಶ್ರೀ ಕರಿಯಣ್ಣ : ನೀವು ಅಷ್ಟಕ್ಕಾದರೂ ಒಪ್ಪಿಕೊಂಡಿದ್ದೀರಲ್ಲಾ, ನಾವಿನ್ನೂ ಅಲ್ಲೇ ಕೂರುತ್ತೇವೆ. ನಮಗೆ ಇಲ್ಲಿಗೆ ಗೆದ್ದು ಬರಲು ಸಾಧ್ಯವಿಲ್ಲ ಅಂತ. ನಾನು ಪ್ರಯತ್ನ ಮಾಡುತ್ತೇನೆ. ಆಗಬಹುದು. ನೀವು ಶಾಶ್ವತವಾಗಿ ಅದೇ ಕುರ್ಚಿಯಲ್ಲಿರಿ. ನಾವು ಬಂದಾಗ ಆ ಪ್ರಯತ್ನ ಮಾಡುತ್ತೇನೆ ನಾವು ಬರುತ್ತಲೇ ಇರುತ್ತೇವೆ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ. ನಮ್ಮ ಮುಖಂಡರು ಇದ್ದಾರೆ ಅವರು ನಮಗೆ ಕೊಡುತ್ತಾರೆ. ಬರಗಾಲ ಕೇವಲ ಒಂದು ವರ್ಷ ಎರಡು ವರ್ಷದ್ದಲ್ಲ. ಅತ್ಯಂತ ಭೀಕರವಾದ ಬರಗಾಲ ನಮ್ಮ ರಾಜ್ಯಕ್ಕೆ ಬಂದಿರುವುದರಿಂದ ನಾವೆಲ್ಲರೂ ಒಗ್ಗಟ್ಟಾಗಿ ಎದುರಿಸಬೇಕಾಗಿದೆ. ನಾವೆಲ್ಲ ಚುನಾಯಿತ ಪ್ರತಿನಿಧಿಗಳಾಗಿರುವುದರಿಂದ, ಒಗ್ಗಟ್ಟಾಗಿ ಈ ಭೀಕರ ಬರಗಾಲವನ್ನು ಎದುರಿಸಲು, ನಮ್ಮ ನಮ್ಮ ಕ್ಷೇತ್ರದ ಜನಗಳ ಹಿತವನ್ನು ಕಾಪಾಡಿಕೊಳ್ಳಲು ಒಂದು ಒಳ್ಳೆಯ ನಿರ್ಣಯವನ್ನು ಮಾಡಬೇಕಾಗುತ್ತದೆ. ಈ ಸದನದಲ್ಲಿ ನಾನು ಒಂದು ಒಳ್ಳೆಯ ಮಾತನ್ನು ಕೇಳಿದೆ, ನಮ್ಮ ಆಂಧ್ರದ ಮುಖ್ಯಮಂತ್ರಿಗಳನ್ನು ನಾವು ಹೊಗಳುತ್ತಿದ್ದೇವೆ. ನಾವು ಅನೇಕ ರಾಜ್ಯಗಳಲ್ಲಿ ಪ್ರವಾಸ ಹೋದಾಗ

ನಮ್ಮ ರಾಜ್ಯದ ಮುಖ್ಯಮಂತ್ರಿಗಳು ಒಳ್ಳೆಯ ಕೆಲಸವನ್ನು ಮಾಡುತ್ತಿದ್ದಾರೆ ಬಹಳ ಒಳ್ಳೆಯ ಮುಖ್ಯಮಂತ್ರಿಗಳು ಎಂದು ಜನ ಹೊಗಳಿದರು. ಆದರೆ ಇಲ್ಲಿರುವಂತಹ ಜನ ಆಂಧ್ರದ ಮುಖ್ಯಮಂತ್ರಿಗಳನ್ನು ಹೊಗಳುವ ಬದಲು ನಮ್ಮ ಮುಖ್ಯಮಂತ್ರಿಗಳು ಇಷ್ಟು ಭೀಕರ ಬರಗಾಲವನ್ನು ಎದುರಿಸಲು ಸತತವಾಗಿ ಮೂರು ವರ್ಷಗಳಿಂದ ಯಾವ್ಯಾವ ಕೆಲಸಗಳನ್ನು ಮಾಡಿದ್ದಾರೆ ಅನ್ನುವುದು ತಮಗೂ ಗೊತ್ತಿದೆ. ನೀವೆಲ್ಲಾ ಟಾಸ್ಕ್‌ಫೋರ್ಸ್‌ನ ಅಧ್ಯಕ್ಷರಲ್ಲದೆ ಕೆ.ಡಿ.ಪಿ. ಅಧ್ಯಕ್ಷರೂ ಸಹ ಆಗಿದ್ದೀರಿ. ಹೀಗಾಗಿ ನಮ್ಮ ಮುಖ್ಯಮಂತ್ರಿಗಳು ನಮ್ಮ ರಾಜ್ಯಕ್ಕೆ ಗೌರವ ಬರತಕ್ಕಂತಹ ರೀತಿಯಲ್ಲಿ ಬಹಳ ಹೋರಾಟವನ್ನು ಮಾಡುತ್ತಿದ್ದಾರೆ. ಆದ್ದರಿಂದ ನಾವೆಲ್ಲಾ ಕೂಡಿ ಈ ಬರಗಾಲವನ್ನು ಎದುರಿಸುವ ಶಲುವಾಗಿ ಒಂದು ಯುನಾನಿಮಸ್ ಆಗಿ ಒಂದು ನಿರ್ಣಯವನ್ನು ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿ ನಮಗೆ ಇನ್ನೂ ಹೆಚ್ಚಿನ ಅನುದಾನ ಕೊಡಬೇಕು. ಕುಡಿಯುವ ನೀರಿಗೆ, ಹಣ ಕೊಡಬೇಕು ಹಾಗೆ ಅಕ್ಕಿ ಕೊಡಬೇಕು ಅಲ್ಲದೆ ಬಜೆಟ್‌ನಲ್ಲಿ ಯಾವುದೇ ಹಣವನ್ನು ಕಡಿತಗೊಳಿಸದೆ ತಾವು ಒಪ್ಪಿಕೊಂಡಿರುವಂತಹ ಹಣವನ್ನು ನಮಗೆ ನೀಡಬೇಕು ಅನ್ನುವ ಒಂದು ನಿರ್ಣಯವನ್ನು ಸದನದಿಂದ ಮಾಡಿದರೆ ಅದು ಅನುಕೂಲವಾಗುತ್ತದೆಂದು ಹೇಳುತ್ತಾ, ಮತ್ತೊಂದು ನಾನು ಸರ್ಕಾರದಲ್ಲಿ ವಿನಂತಿ ಮಾಡುತ್ತೇನೆ. ಇನ್ನೂ ನಮಗೆ ಕುಡಿಯುವ ನೀರಿನ ಸಮಸ್ಯೆ ಇದೆ. ಅನೇಕ ಕಡೆ ನಾವು ಬೋರ್‌ವೆಲ್‌ಗಳನ್ನು ತೆಗೆಸಿದ್ದೇವೆ. ಅದಕ್ಕೆ ಮೋಟಾರ್ ಪೈಪ್‌ಗಳನ್ನು ಅಳವಡಿಸಿಕೊಳ್ಳಲಿಕ್ಕೆ ಆಗಿಲ್ಲ. ಅದಕ್ಕೆ ಹೆಚ್ಚಿನ ಹಣವನ್ನು ಬಿಡುಗಡೆ ಮಾಡಬೇಕು ಮತ್ತು ಮತ್ತೊಂದು ಅಪಪ್ರಚಾರ ಸೃಷ್ಟಿಯಾಗಿದೆ ಅಂದರೆ ಒಂದು ಕೆರೆಗೆ ಒಂದು ಲಕ್ಷ ಕೊಟ್ಟರೆ ಹೂಳೆತ್ತಲು ಸಾಧ್ಯವಾಗುವುದಿಲ್ಲ. ಒಂದೊಂದು ಕೆರೆಗೆ 5 ರಿಂದ 6 ಲಕ್ಷ ಬೇಕಾಗುತ್ತದೆ. ಒಂದು ಕೆರೆಗೆ 20 ಲಕ್ಷದವರೆಗೂ ಬೇಕಾಗುತ್ತದೆ ಆದರೆ ನಾವು ಎಲ್ಲರಿಗೂ ಸಾಮೂಹಿಕವಾಗಿ ಕೆಲಸ ಕೊಡಬೇಕೆನ್ನುವ ದೃಷ್ಟಿಯಿಂದ ಎಲ್ಲಾ ಕಡೆಗೂ ಸಹಿತ ಕ್ಷೇತ್ರಗಳಲ್ಲಿರತಕ್ಕ ವಿಭಾಗಗಳಲ್ಲಿ ಅನೇಕ ವಿಭಾಗಗಳನ್ನು ಮಾಡಿ ಪಂಚಾಯಿತಿವಾರು ಕೆರೆಗಳ ಹೂಳನ್ನು ತೆಗೆಸಲು ಕೆಲಸ ಕೊಡತಕ್ಕಂತಹ ವ್ಯವಸ್ಥೆಯನ್ನು ನಮ್ಮ ನಮ್ಮ ಕ್ಷೇತ್ರಗಳಲ್ಲಿ ಮಾಡಿರುವುದರಿಂದ ಸರ್ಕಾರ ಈ ಭೀಕರ ಬರಗಾಲವನ್ನು ಎದುರಿಸುವಂತಹ ಶಕ್ತಿಯನ್ನು ಹೊಂದಿದೆ. ಹೀಗಾಗಿ ನಮ್ಮ ಪ್ರಾಜೆಕ್ಟ್‌ನಲ್ಲಿ, ನಮ್ಮ ಸೂಪಾದಲ್ಲಿ ಎಷ್ಟು ಅಡಿ ನೀರು ಇದೆ, ಜೋಗದಲ್ಲಿ ಎಷ್ಟು ಅಡಿ ನೀರಿದೆ, ಭದ್ರಾವತಿಯಲ್ಲಿ ಎಷ್ಟು ಅಡಿ ನೀರು ಇದೆ? ನಾವು ವಿದ್ಯುತ್ ತಯಾರು ಮಾಡಲಿಕ್ಕೆ ಎಲ್ಲೂ ಸಹಿತ ನೀರಿಲ್ಲ. ನೀರಿಲ್ಲದಿದ್ದರೂ ಸಹಿತಿ ಹೊರಗಡೆ ರಾಜ್ಯಗಳಿಂದ ವಿದ್ಯುಚ್ಛಕ್ತಿಯನ್ನು ಕೊಂಡು ಸಕ್ಕರೆ ಕಾರ್ಖಾನೆಗಳಿಂದ ವಿದ್ಯುತ್ ಅನ್ನು ಕೊಂಡು ಇವತ್ತಿನ ದಿವಸ ಸಮರ್ಪಕವಾಗಿ, ವಿದ್ಯುತ್ ಅನ್ನು ಕೊಡತಕ್ಕಂತಹ ವ್ಯವಸ್ಥೆಯನ್ನು ಮಾಡಿರುವುದು ನಮ್ಮ ಕಾಂಗ್ರೆಸ್ ಸರ್ಕಾರ ಮೂರು ವರ್ಷಗಳ ಭೀಕರ ಬರಗಾಲವನ್ನು ನಿಭಾಯಿಸುತ್ತಿದೆಂದು ಈ ಸಂದರ್ಭದಲ್ಲಿ ಹೇಳಿ ಕುಡಿಯುವ ನೀರಿಗೆ ಇನ್ನು ಹೆಚ್ಚಿನ ಅನುದಾನವನ್ನು ಒದಗಿಸಬೇಕು ಮತ್ತು ಮುಂದೆ ಬರತಕ್ಕಂತಹ ಭೀಕರ ಬರಗಾಲವನ್ನು ಎದುರಿಸಲಿಕ್ಕೆ ತತ್‌ಕ್ಷಣಕ್ಕೆ ಕೇಂದ್ರ ಸರ್ಕಾರಕ್ಕೆ ಅನುದಾನ ಬಿಡುಗಡೆಗೆ ಶಿಫಾರಸ್ಸು ಮಾಡಬೇಕೆಂದು ಈ ಸಂದರ್ಭದಲ್ಲಿ ವಿನಂತಿಸುತ್ತೇನೆ. ಹಾಗೂ ನನಗೆ ಮಾತನಾಡಲಿಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅಧ್ಯಕ್ಷರನ್ನು ನಾನು ವಂದಿಸುತ್ತಾ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸಿ. ಚೆನ್ನಿಗಪ್ಪ : ಮಾನ್ಯ ಚೆಲುವರಾಯಸ್ವಾಮಿಯವರಿಗೆ ಮಾತನಾಡಲಿಕ್ಕೆ ಅವಕಾಶ ಕೊಡಬೇಕು. ಬಿಜೆಪಿ. ಯವರದು ಅವಕಾಶ ಮುಗಿದಿದೆ.

2.10 ಪಿ.ಎಂ.

ಗೊಂದಲ

ಶ್ರೀ ಸಿ. ಚೆನ್ನಿಗಪ್ಪ : ಈ ತಾರತಮ್ಯ ಏಕೆ ಬೇಕು?

ಛೇರ್ಮನ್ (ಯು.ಆರ್. ಸಭಾಪತಿ) : ರೇವು ನಾಯ್ಕರ ಭಾಷಣ ಆದ ಮೇಲೆ ಚಲುವರಾಯಸ್ವಾಮಿಯವರನ್ನೇ ಕರೆಯುತ್ತೇನೆ. ನಾನು ಅಧ್ಯಕ್ಷನಾಗಿ ಇಲ್ಲಿ ಕೂತಿದ್ದೇನೆ ಮತ್ತು ನನ್ನ ಕಾರ್ಯ ನಿರ್ವಹಿಸುತ್ತಿದ್ದೇನೆ. ಈಗ ನಾನು ರೇವುನಾಯ್ಕ ಅವರನ್ನು ಕರೆದಿದ್ದೇನೆ. ಅವರಾದ ಕೂಡಲೇ ನಿಮ್ಮವರನ್ನು ಕರೆಯುತ್ತಿದ್ದೇನೆ. ಚೆನ್ನಿಗಪ್ಪನವರೇ, ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಸಿ. ಚೆನ್ನಿಗಪ್ಪ : ಅವರಿಗೆ ಅವಕಾಶ ಕೊಡಬೇಕಾಗಿತ್ತು.

ಛೇರ್ಮನ್ : ನಾನು ಕರೆಯುತ್ತೇನೆ, ತಾವು ದಯವಿಟ್ಟು ಕುಳಿತುಕೊಳ್ಳಿ. ನೀವು ಹೇಳಿದ ಹಾಗೆ ಕರೆಯಬೇಕಾಗಿಲ್ಲ. ನಾನು ಕ್ರಮಪ್ರಕಾರ ಕರೆಯುತ್ತಿದ್ದೇನೆ. ನೀವು ಸಭಾಧ್ಯಕ್ಷರಿಗೆ ಮಾತನಾಡುತ್ತಿದ್ದೀರಿ, ಸ್ವಲ್ಪ ಗೌರವ ಕೊಟ್ಟು ಮಾತನಾಡಿ.

+ ಶ್ರೀ ರೇವುನಾಯ್ಕ ಬೆಳಮಗಿ (ಕಮಲಾಪುರ) : ಸನ್ಮಾನ್ಯ ಅಧ್ಯಕ್ಷರೆ, ನಾನು ಸತತವಾಗಿ ಮೂರು ದಿವಸದಿಂದ ಬರಗಾಲದ ಬಗ್ಗೆ ಮಾತನಾಡಬೇಕೆಂದು ಮನವಿಪತ್ರವನ್ನು ತಮಗೆ ಕೊಟ್ಟಿದ್ದೇನೆ. ನಾನು ಬಹಳ ಸಮಯ ತೆಗೆದುಕೊಳ್ಳುವುದಿಲ್ಲ. ಎರಡು ನಿಮಿಷಗಳಲ್ಲಿ ನನ್ನ ಮಾತನ್ನು ಮುಗಿಸುತ್ತೇನೆ. ಬಹಳಷ್ಟು ನಾಯಕರೆಲ್ಲಾ ಮಾತನಾಡಿದ್ದಾರೆ. ಆದ್ದರಿಂದ ನಾನು ಹೆಚ್ಚಿಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ನನಗೆ ಏನ್ನೊಂದು ದುಃಖವಾಗುತ್ತಿದೆ ಎಂದರೆ, ಮಳೆ ಬಂದಾಗ ವ್ಯಾಪಾರಸ್ಥರು ಹೇಳುವ ಹಾಗೆ ಉಪ್ಪಿನವಕೆಟ್ಟ ಅಂದರೆ, ತೆಂಗಿನ ಕಾಯಿನ ಕಾಯಿನವನು ಕೆಟ್ಟ ಎಂದು ಹೇಳುತ್ತಾನೆ. ನಾವು ಆ ಭಾಗದ ಜನರು ಉಪ್ಪಿನವರು ಇದ್ದೇವೆ ಮತ್ತು ನಿಮ್ಮ ಭಾಗದವರು ತೆಂಗಿನಕಾಯಿನ ಇದ್ದ ಹಾಗೆ. ಆದರೆ ಈ ಸಲ ಭಾರಿ ಭೀಕರ ಬರಗಾಲ ಬಂದಿರುವುದು ನಮ್ಮ ಹೈದರಾಬಾದ್ ಕರ್ನಾಟಕದಲ್ಲಿ, ಈ ಮಾತನ್ನು ನಾನು ಏಕೆ ಹೇಳುತ್ತಿದ್ದೇನೆ ಎಂದರೆ, ನಮಗೆ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಎಲ್ಲ ರೀತಿಯಲ್ಲೂ ಬರಗಾಲ ಇದೆ. ರೈತರು, ಕೂಲಿಕಾರ್ಮಿಕರು ನಮ್ಮ ಕಡೆಯಲ್ಲಿ ಹೆಚ್ಚಿಗೆ ಇದ್ದಾರೆ. ನಾವು ಮಳೆರಾಯನ ಕಡೆಗೇ ನೋಡಬೇಕಾಗುತ್ತದೆ. ಪ್ರತಿಯೊಂದು ಹಳ್ಳಿಯಲ್ಲಿ ಒಂದು, ಎರಡು, ಮೂರು ಮಂದಿ ಸಣ್ಣ ಗವರ್ನಮೆಂಟ್ ಸರ್ವೆಂಟ್ಸ್ ನಮ್ಮಕಡೆಗೆ ಸಿಗುತ್ತಾರೆ. ಈ ಭಾಗಕ್ಕೆ ಬಂದು ನೋಡಿದಾಗ ಪ್ರತಿಯೊಂದು ಮನೆಯಲ್ಲೂ ಕೂಡ ಗವರ್ನಮೆಂಟ್ ಸರ್ವೆಂಟ್ಸ್ ಇದ್ದಾರೆ ಎಂದು ನಾನು ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಿದ್ದೇನೆ. ಏಕೆ ಈ ಮಾತನ್ನು ನಾನು ಹೇಳುತ್ತಿದ್ದೇನೆ ಎಂದರೆ ನಮ್ಮ ಕಡೆ ರೈತರಿಗೆ ಒಂದು ವರ್ಷ ಬರಗಾಲ ಬಿತ್ತು ಎಂದರೆ ಮುಗಿದೇಹೋಯಿತು. ಎರಡನೇ ವರ್ಷ ಅವರು ಬದುಕಬೇಕು ಎಂದರೆ ಬಹಳ ಕಷ್ಟ ಇದೆ. ನಾನು ಪ್ರವಾಸ ಮಾಡಿ ನೋಡಿದಾಗ, ಬೀದರ್ ಮತ್ತು ಗುಲ್ಬರ್ಗಾದಲ್ಲಿ ಬಾಳೆಹಣ್ಣು ಕಬ್ಬಿನ ಬೆಳೆ ಮುಂತಾದ ಬೆಳೆಗಳು ನೀರು ಇಲ್ಲದೆ, ನೀರಾವರಿ ಇಲ್ಲದೆ ಪೂರಾ ಒಣಗಿಹೋಗಿದೆ. ನಾನು ಮೊದಲು ಕೂಡ ಎರಡು–ಮೂರು ಸಲ ಬರಗಾಲವನ್ನು ನೋಡಿದ್ದೇನೆ. ಆದರೆ ಇಂತಹ ಬರಗಾಲ ಪರಿಸ್ಥಿತಿಯನ್ನು ನಾನು ಎಂದೂ ನೋಡಿಲ್ಲ. ಆವೇಳೆಗೆ ಎಲ್ಲಿ ನೀರಾವರಿ ಇತ್ತು ಅಲ್ಲಿ ಕಬ್ಬು ಚೆನ್ನಾಗಿ ಇರುತ್ತಿತ್ತು. ಬಾಳೆ ಚೆನ್ನಾಗಿ ಇರುತ್ತಿತ್ತು. ಮೇಲಾಟಿಯಲ್ಲಿ ಮಾತ್ರ ಬೆಳೆ ಇರುತ್ತಾ ಇರಲಿಲ್ಲ. ಆದರೆ ಹಿಂದೆಂದೂ ನೋಡಲಾರದ ಬರಗಾಲ ಇವತ್ತು ನಮ್ಮ ಕಡೆಗೆ ಬಂದಿದೆ. ತಾವು ಹೈದರಾಬಾದ್ ಕರ್ನಾಟಕ ಮತ್ತು

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣ ಪರಿಷ್ಕರಿಸಿಲ್ಲವೆಂದು ಸೂಚಿಸುತ್ತದೆ.)

ಈ ಭಾಗಕ್ಕೆ ಹೋಲಿಸಬಾರದು. ಸರ್ಕಾರ ನಮ್ಮ ಕಡೆಗೆ ಹೆಚ್ಚು ಆದ್ಯತೆಯನ್ನು ಕೊಡಬೇಕು. ನಮ್ಮನ್ನು ಬೇರೆಯವರ ಹಾಗೆ ಸಮಾನವಾಗಿ ನೋಡಬಾರದು. ಏಕೆಂದರೆ ನಮ್ಮ ಕಡೆ ಕೂಲಿಕಾರ್ಮಿಕರು, ರೈತರು ಬಹಳ ಹೆಚ್ಚು ಇದ್ದಾರೆ. ನನ್ನ ಕ್ಷೇತ್ರಕ್ಕೆ ಸೀಮಿತವಾಗಿ ನಾನು ಮಾತನಾಡುತ್ತಿದ್ದೇನೆ. ಪ್ರತಿಯೊಂದು ಮೀಟಿಂಗ್‌ನಲ್ಲಿ ನಾಲ್ಕು ಲಕ್ಷ, ಎಂಟು ಲಕ್ಷ ಕೆಲಸ ಕೊಟ್ಟಿದ್ದು ಹೋಬಳಿಯಲ್ಲಿ ಒಂದೊಂದು ಕೆಲಸ ನಡೆಯುತ್ತಿದೆ. ಆದರೆ ಎಲ್ಲಾ ಕಡೆ ಹಾಹಾಕಾರ ಉಂಟಾಗಿ ಜನರು ಕೆಲಸ ಕೇಳುತ್ತಿದ್ದಾರೆ. ಕೂಲಿಕಾರ್ಮಿಕರು ಬೀದಿಪಾಲಾಗಿ ಹೊರಪ್ರದೇಶಗಳಿಗೆ ಹೋಗುತ್ತಿದ್ದಾರೆ. 'ನೀವು ಎಂ.ಎಲ್.ಎ. ಆಗಿ ನಿದ್ದೆ ಮಾಡುತ್ತಿದ್ದೀರೇನು? ನಮ್ಮ ಕೈಗೆ ಕೆಲಸ ಕೊಡಿ' ಎಂದು ಅವರು ಹೇಳುತ್ತಿದ್ದಾರೆ. ನಾನು ಕೆಲಸ ಕೊಟ್ಟಿಲ್ಲ ಎಂದು ಹೇಳುವುದಿಲ್ಲ. ಇದರಲ್ಲಿ ನಾನು ರಾಜಕೀಯವನ್ನು ಉಪಯೋಗ ಮಾಡುವುದಿಲ್ಲ. ಆದರೆ ಜನರ ನೋವುನಲಿವಿನ ಮಧ್ಯದಲ್ಲಿ ನಾವು ಇರಬೇಕಾಗುತ್ತದೆ. ನಮ್ಮ ಕಡೆ ಬಹಳಷ್ಟು ಕಬ್ಬಿನ ಬೆಳೆ ಬಾಳೆ ಬೆಳೆ ನೀರಾವರಿ ಇಲ್ಲದ ಕಾರಣಕ್ಕೆ ಸಂಪೂರ್ಣವಾಗಿ ಒಣಗಿಹೋಗಿದೆ. ಅದಕ್ಕೆ ಸರ್ಕಾರ ಪರಿಹಾರಧನ ಕೊಡಬೇಕು. ಅವರು ಅನುಕಂಪದ ಆಧಾರದಮೇಲೆ ರೈತರಿಗೆ ಎಷ್ಟಾದರೂ ಪರಿಹಾರಧನ ಕೊಟ್ಟರೆ ಮುಂದೆಮುಂದೆ ಅವರಿಗೆ ಮತ್ತೆ ಸಾಗು ಮಾಡುವುದಕ್ಕೆ ಅನುಕೂಲವಾಗುತ್ತದೆ ಎಂದು ನಾನು ತಮ್ಮ ಮೂಲಕ ಸರ್ಕಾರಕ್ಕೆ ಹೇಳುತ್ತೇನೆ. ಅದರಲ್ಲೂ ನೀರಿನ ಬಗ್ಗೆ ನನ್ನ ಕ್ಷೇತ್ರ ಮತ್ತು ನಮ್ಮ ಭಾಗದಲ್ಲಿ ಬಹಳ ಹಾಹಾಕಾರ ಉಂಟಾಗಿದೆ. ಎಷ್ಟು ಬೋರ್ ಹಾಕಿದರೂ ಕೂಡ ನೀರು ಬರುತ್ತಿಲ್ಲ. ಸರ್ಕಾರದ ಒಂದು ಆದೇಶ ಇದೆಯೆಂದು ಅಧಿಕಾರಿಗಳು ಹೇಳುತ್ತಾರೆ. ಅವರು ಏನು ಹೇಳುತ್ತಾರೆ ಎಂದರೆ ಟ್ಯಾಂಕರ್ ಮೂಲಕ ನೀರು ಸಪ್ಲೈ ಮಾಡಬೇಡಿ. ಪರ್ಮನೆಂಟ್ ಆಗಿ ಒಂದು ಸೋರ್ಸನ್ನು ಮಾಡಿ ಅದಕ್ಕೆ ಎಷ್ಟಾದರೂ ಖರ್ಚು ಬರಲಿ ಎಂದು ಅವರು ಹೇಳುವಾಗ ಅದಕ್ಕೆ ನಾನೂ ಕೂಡ ಸಹಮತ ಹೊಂದಿದ್ದೇನೆ. ನಮ್ಮ ಕ್ಷೇತ್ರದಲ್ಲಿ ಖಜೂರಿ ಅಂತ ಒಂದು ಗ್ರಾಮ ಮಹಾರಾಷ್ಟ್ರ ಬಾರ್ಡರ್‌ನಲ್ಲಿದೆ. ಅಲ್ಲಿ ಇಪ್ಪತ್ತೈದು ಸಾವಿರಕ್ಕಿಂತ ಹೆಚ್ಚು ಜನಸಂಖ್ಯೆ ಇದೆ. ಅಲ್ಲಿ ನಾನು ಒಂದು ಕಾರ್ಯಕ್ರಮಕ್ಕೆ ಹೋದಾಗ ನಮ್ಮ ತಾಯಂದಿರು ಎಂ.ಎಲ್.ಎ.ಯವರು ಬಂದಿದ್ದಾರೆ ಎಂದಾಗ ಕೊಡ ತೆಗೆದುಕೊಂಡು ಬಂದು ತೋರಿಸಿ ನಿಂತುಬಿಟ್ಟರು. ತಾವು ಇದರ ಬಗ್ಗೆ ಪ್ರಜಾವಾಣಿ, ಸಂಯುಕ್ತ ಕರ್ನಾಟಕ ಪತ್ರಿಕೆಗಳಲ್ಲಿ ಓದಿರಬಹುದು. ಅಲ್ಲಿ ಅವರು 'ನಮಗೆ ಟ್ಯಾಂಕರ್ ಮೂಲಕ ನೀರು ಕೊಡಿಸಿ, ನಮಗೆ ಎಲ್ಲೂ ನೀರು ಸಿಗುತ್ತಿಲ್ಲ. ನಾವು ರಾತ್ರಿಹೊತ್ತು ಹಗಲುಹೊತ್ತು ನೀರಿಗೋಸ್ಕರ ಹೋಗಬೇಕು. ರಾತ್ರಿ ಹೊತ್ತು ನಮಗೆ ಹಾವು, ಚೇಳು ಇದ್ದರೆ ಕಾಣಿಸುವುದಿಲ್ಲ. ಮೂರು-ನಾಲ್ಕು ಕಿಲೋಮೀಟರ್ ದೂರ ಹೋಗಿ ಹೆಣ್ಣುಮಕ್ಕಳು ನೀರನ್ನು ತರಬೇಕು. ಏನಾದರೂ ಮಾಡಿ ಟ್ಯಾಂಕರ್ ಮೂಲಕ ನೀರು ಕೊಡಿಸಿ ಅಣ್ಣಾವ್ರೆ' ಎಂದು ಅವರು ಕೇಳಿಕೊಂಡರು. ಆಗ ತಹಸೀಲ್ದಾರ್ ಅವರು ಬಂದರು, ಅಸಿಸ್ಟೆಂಟ್ ಕಮಿಷನರ್ ಅವರು ಬಂದರು ಮತ್ತು ಸಂಬಂಧಪಟ್ಟ ಇಂಜಿನಿಯರ್ ಅವರು ಕೂಡ ಬಂದರು. ಎಲ್ಲಾ ಸೇರಿ ನಮ್ಮ ಚೀಫ್ ಸೆಕ್ರೆಟರಿಯವರು ಒಂದು ನಿರ್ಣಯವನ್ನು ತೆಗೆದುಕೊಂಡು ಎಲ್ಲಿಯಾದರೂ ಒಂದು ಕಡೆ ಬೋರ್ ಹಾಕಿರಿ, ಎಂಟು ದಿವಸದಲ್ಲಿ ಪೈಪ್‌ಲೈನ್ ಮಾಡಿ ನೀರು ಕೊಡಿಸ್ತೀನಿ ಎಂದಾಗ ಆ ನಿರ್ಣಯಕ್ಕೆ ನಾವು ಸಹಮತ ಆದೆವು. ಆದರೆ ಎಷ್ಟು ಬೋರ್ ಹಾಕಿದರೂ ಕೂಡ ನೀರು ಬರಲಿಲ್ಲ. ಆ ತಾಯಿ ಇವತ್ತು ನನ್ನ ಕಣ್ಣುಮುಂದೆ ಬರುತ್ತಾಳೆ. ಆಕೆಯ ಹೆಸರು ಮಲ್ಲಮ್ಮ ಕಲ್ಯಾಣಿ ಭೀಮಾಪುರಿ ಖಜೂರಿಯಾಕಿ ಒಂದು ವಾರ ಆ ಕಡೆ ಹೋಗಿಲ್ಲ. ಒಣಗಿದ ಬಾವಿಯಲ್ಲಿ ನೀರು ಸೇದುವಾಗ ಬಗ್ಗಿ

ಅದರಲ್ಲಿ ಬಿದ್ದು ಆಕೆ ತನ್ನ ಪ್ರಾಣ ಕಳೆದುಕೊಂಡಳು. ಆಕೆ ಪ್ರಾಣ ಕಳೆದುಕೊಂಡ ಮರುದಿವಸ ನಾನು ಹೋದಾಗ, ಅವರ ಮಕ್ಕಳು ಹೇಳುತ್ತಿದ್ದರು ಏನೆಂದರೆ ಈ ಟ್ಯಾಂಕರ್ ಮೂಲಕ ನೀರು ಕೊಡುವ ವ್ಯವಸ್ಥೆಯನ್ನು ಸರ್ಕಾರದವರು ಮತ್ತು ನೀವು ಮಾಡಿದ್ದರೆ ನಮ್ಮ ತಾಯಿ ಸಾಯುತ್ತಿರಲಿಲ್ಲ ಎಂದು ಗೋಳು ಅಂದರೆ ಗೋಳು ಅವರ ಕಣ್ಣೀರು ನೋಡುವುದಕ್ಕೆ ಆಗುವುದಿಲ್ಲ. ಸನ್ಮಾನ್ಯ ಅಧ್ಯಕ್ಷರೇ, ಅಂತಹ ದುಃಖದ ಸಂಗತಿ ಅದಾಗಿತ್ತು. ಇದು ಒಂದೇ ಅಲ್ಲ, ಮತ್ತೊಂದು ಕೊಟ್ರಗಾಂವ ಅಂತ ಗ್ರಾಮದಲ್ಲಿ ನಾನು ಮೊದಲು ಹೋದಾಗ ಅಲ್ಲಿ ನೀರಿನ ಸಮಸ್ಯೆ ಇತ್ತು ಮತ್ತು ಬೋರ್ ಹಾಕಿದರೂ ನೀರು ಬರುತ್ತಿರಲಿಲ್ಲ. ಇದು ಒಂದು ಹಳೆಯ ಬಾವಿ ಇದೆ. ಇದಕ್ಕೆ ಏನಾದರೂ ಮಾಡಿ ನೀರು ಕೊಡಿಸಿ ಎಂದು ಜನರು ಹೇಳಿದರು. ನಾನು ಎಂ.ಎಲ್.ಎ ಫಂಡ್‌ನಿಂದ ಹತ್ತು ಲಕ್ಷರೂಪಾಯಿ ಪೂರಾ ನೀರಿಗಾಗಿ ಕೊಟ್ಟೆ. ಅದರ ಅಂದಾಜುವೆಚ್ಚ ಕೇಳಿದಾಗ ಢೇಡ್‌ಲಾಖ್ ರೂಪಾಯಿ ಕೆಲಸ ಆಗುತ್ತದೆ ಎಂದು ಹೇಳಿದಾಗ ಢೇಡ್‌ಲಾಖ್ ರೂಪಾಯಿ ಅದಕ್ಕಾಗಿ ಇಟ್ಟೆವು. ಎಷ್ಟು ಬಾವಿ ಇದೆ ಅಷ್ಟು ಕಟ್ಟುವುದಕ್ಕೆ ಕೆಲಸ ಪ್ರಾರಂಭ ಮಾಡಿದರು. ಅದು ಬಾವಿ ಎಂದರೆ ಗಿರಕಿಯಿಂದ ನೀರು ಜಗ್ಗುವ ಬಾವಿ. ಬಾವಿ ಛಲೋ ಇದ್ದರೆ ಗಿರಾಕಿಯಲ್ಲಿ ನೀರು ಸೇದುತ್ತಾರೆ. ಆ ನಾಗಮ್ಮ ಈರಣ್ಣ ಪೂಜಾರಿ ಅಂತ ಹೆಣ್ಣುಮಗಳು ಮೂರು ಗಂಟೆಗೆ ನೀರಿಗೆ ಹೋಗಿದ್ದಾಳೆ. ಆ ಗಿರಾಕಿ ಪೂರಾ ಒಳಗೆ ಬಿದ್ದು ಅದರ ಜೊತೆಯಲ್ಲಿ ಆಕೆನೂ ಬಿದ್ದು ಪ್ರಾಣ ಕಳೆದುಕೊಂಡಳು. ಆಗ ನಾನು ಫೋನ್ ಮುಖಾಂತರ ಎಲ್ಲೆಲ್ಲಿ ಈ ತರಹ ಸಮಸ್ಯೆ ಇದೆಯೆಂದು ಕೇಳಿದಾಗ ಈ ತರಹ ಕೊಟ್ರಗಾಂವದಲ್ಲಿ ಹೆಣ್ಣುಮಗಳೊಬ್ಬಳು ಇವತ್ತು ಬಾವಿಯಲ್ಲಿ ಗಿರಾಕಿ ಕಳೆದುಕೊಂಡು ಸತ್ತುಹೋದಳು ಎಂದು ಹೇಳಿದರು. ಸನ್ಮಾನ್ಯ ಅಧ್ಯಕ್ಷರೇ, ನಾನು ಭಾಷಣ ಮಾಡುತ್ತಿಲ್ಲ, ಬಹಳ ನೊಂದು ಈ ಮಾತನ್ನು ಹೇಳುತ್ತಿದ್ದೇನೆ. ನಮ್ಮ ಕ್ಷೇತ್ರದಲ್ಲಿ ಎಷ್ಟು ಕಷ್ಟವಾಗಿದೆ ಎಂಬುದನ್ನು ಸರ್ಕಾರಕ್ಕೆ ನಾನು ಮನವರಿಕೆ ಮಾಡಿಕೊಡುತ್ತಿದ್ದೇನೆ. ನಾನು ಹೋಗಿ ನೋಡಿದಾಗ, ಆ ದೃಶ್ಯವನ್ನು ನೋಡಬೇಕಾದರೆ ಹೆಣ್ಣುಗಂಡು ಸೇರಿ ಖರೇ ನನ್ನನ್ನು ಹೊಡೆಯಬೇಕಿತ್ತು. ಹಾಗಿತ್ತು ಅಲ್ಲಿ ಪರಿಸ್ಥಿತಿ. "ನೀವು ಬಂದ್ರಿ, ಬಾವಿಯಿಂದ ನೀರು ಕೊಡಿಸುತ್ತೇವೆ ಎಂದು ಹೇಳಿ ಈಗ ಹೆಣ್ಣುಮಗಳು ಸತ್ತ ಬಳಿಕ ಹೊರಟಿದ್ದಿರೇನ್ರಿ" ಎಂದು ಹೇಳಿ ಎಂ.ಎಲ್.ಎ.ಯವರನ್ನು ಒಳಗೆ ಹಾಕಿರಿ ಎಂದು ಕುಳಿತರು. ಆಗ ಅನೇಕ ಪ್ರಮುಖರು ಅಂದರು ಏನೆಂದರೆ ಆಕೆ ಸತ್ತಿದ್ದಾಳೆ ಅಂತ ತಿಳಿದು ಇವರು ಬಂದಿದ್ದಾರೆ ಎಂದು. ಒಂದೇ ತಾಸಿನಲ್ಲಿ ಅಸಿಸ್ಟೆಂಟ್ ಕಮೀಷನರ್ ಅವರು ಬಂದರು. ತಹಸೀಲ್ದಾರ್ ಅವರು ಬಂದರು ಮತ್ತು ಎ.ಇ.ಓ. ಅಂತ ಎಲ್ಲರೂ ಬಂದರು. ಸತ್ತಿದ್ದಕ್ಕೆ ಏನಾದರೂ ಪರಿಹಾರ ಕೊಡಿಸಬೇಕು ಎಂದಾಗ ಅದಕ್ಕೆ ಏನೂ ಮಾಡುವುದಕ್ಕೆ ಬರುವುದಿಲ್ಲ. ಇಲ್ಲಿ ಪರ್ಮನೆಂಟ್ ಆಗಿ ನೀರು ಕೊಡುವ ವ್ಯವಸ್ಥೆ ಮಾಡಿಕೊಡುತ್ತೇವೆ ಎಂಬ ಆಶ್ವಾಸನೆಯನ್ನು ತಹಸೀಲ್ದಾರ್ ಅವರು ಮತ್ತು ಎ.ಇ.ಓ. ಮುಖಾಂತರ ಅಸಿಸ್ಟೆಂಟ್ ಕಮಿಷನರ್ ಅವರು ಮಂದಿಗೆ ಹೇಳಿದರು. ಆದರೆ ಅಲ್ಲಿಯ ಜನರಿಗೆ ಭಯ ಇದೆ. ಏಕೆಂದರೆ ಈಗಲೂ ಕೂಡ ಅಲ್ಲಿ ಜನ ಆ ಬಾವಿಗೆ ಬಿದ್ದು ಸಾಯಬಹುದು. ಆ ಬಾವಿಯನ್ನು ರಿಪೇರಿ ಮಾಡುವುದಕ್ಕೆ ಇಂಜಿನಿಯರ್‌ಗಳು ಅಂಜುತ್ತಿದ್ದಾರೆ. ಅದು ಹಿಂದಿನ ಕಾಲದ್ದು ಹಳೆಯ ಬಾವಿ ಇರುತ್ತದೆ. ಅದನ್ನು ರಿಪೇರಿ ಮಾಡುವುದಕ್ಕೆ ಕಷ್ಟ ಇದೆ ಮತ್ತು ರಿಪೇರಿಗೆ ಹತ್ತು ಲಕ್ಷ ರೂಪಾಯಿ ಖರ್ಚಾಗುತ್ತದೆ ಎಂದು ಅಂದಾಜು ಮಾಡಿದ್ದರೂ ಕೂಡ ಅದನ್ನು ರಿಪೇರಿ ಮಾಡುವುದಕ್ಕೆ ಇಂಜಿನಿಯರುಗಳು ಸಹ ಅಂಜುತ್ತಿದ್ದಾರೆ. ಆದು ಬಾವಿ ಊರಿನ ಮಧ್ಯದಲ್ಲೇ ಇದೆ. ನಾನು ಸರ್ಕಾರಕ್ಕೆ ಈ ಸಂದರ್ಭದಲ್ಲಿ

ಮನವಿ ಮಾಡಿಕೊಳ್ಳುತ್ತಿದ್ದೇನೆ. ಇಂತಹ ಬಾವಿಗಳನ್ನು ಯಾವರೀತಿಯಿಂದಾದರೂ ಸರಿಯಾಗಿ ಕಟ್ಟಡಮಾಡಿ ಆ ಜನರಿಗೆ ಅನುಕೂಲ ಮಾಡಿಕೊಡಬೇಕು. ಮತ್ತೊಂದು ಪ್ರಾಣ ಅಲ್ಲಿ ಕಳೆದುಕೊಳ್ಳುವ ಹಾಗೆ ಆಗಬಾರದು ಎಂದು ಹೇಳಿ ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಅದರ ಜೊತೆಯಲ್ಲಿ ಇವತ್ತು ಸರ್ಕಾರದ ನಿಯಮಾವಳಿ ಪ್ರಕಾರ ನೋಡಿದರೆ ಸಿಡಿಲು ಬಿದ್ದರೆ ಒಂದು ಲಕ್ಷ ರೂಪಾಯಿ ಕೊಡುತ್ತೀರಿ. ಆದರೆ ಬಾವಿಗೆ ಬಿದ್ದುಪ್ರಾಣ ಕಳೆದುಕೊಂಡರೆ ಅಷ್ಟು ಕೊಡುವುದಕ್ಕೆ ಆಗುವುದಿಲ್ಲ ಎಂದು ಅಲ್ಲಿಯ ಅಸಿಸ್ಟೆಂಟ್ ಕಮಿಷನರ್ ಅವರು ಹೇಳುತ್ತಿದ್ದಾರೆ. ಆದ್ದರಿಂದ ನಾನು ತಮ್ಮ ಮೂಲಕ ಸರ್ಕಾರಕ್ಕೆ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತಿದ್ದೇನೆ. ಆ ಇಬ್ಬರು ತಾಯಂದಿರು ಏನು ತೀರಿಕೊಂಡಿದ್ದಾರೆ ಅವರ ಕುಟುಂಬಕ್ಕೆ ತಲಾ ಒಂದು ಲಕ್ಷ ರೂಪಾಯಿ ಪರಿಹಾರಧನ ಕೊಡಬೇಕು. ಅವರಿಗೆ ಚಿಕ್ಕಚಿಕ್ಕ ಮಕ್ಕಳು ಇದ್ದಾರೆ ಮತ್ತು ಹಾಗೆ ಮಾಡಿದರೆ ಆ ತಾಯಂದಿರ ಆತ್ಮಕ್ಕೆ ಶಾಂತಿ ಸಿಗಬಹುದು ಹಾಗೂ ಆ ಮಕ್ಕಳಿಗೂ ಕೂಡ ಅನುಕೂಲವಾಗಬಹುದು ಎಂದು ಹೇಳಿ ತಮ್ಮ ಮೂಲಕ ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಅದರ ಜತೆಯಲ್ಲಿ ಬಹಳಷ್ಟು ರೈತರು ಎರಡು-ಮೂರು ವರ್ಷದಿಂದ ಬರಗಾಲದಿಂದ ನೊಂದಿದ್ದಾರೆ. ರೈತರ ಸಾಲ ಬಡ್ಡಿ ಮನ್ನಾ ಮಾಡಬೇಕೆಂದು ಸಹಕಾರ ಬ್ಯಾಂಕುಗಳು ಮತ್ತು ಸೊಸೈಟಿಗಳ ಬಗ್ಗೆ ಹೇಳಿದ್ದೀರ. ನನ್ನ ಒತ್ತಾಯ ಇಷ್ಟೆ. ರೈತರೆಂದರೆ ಅವರು ದೊಡ್ಡ ರೈತರಾಗಲೀ, ಸಣ್ಣ ರೈತರಾಗಲೀ ಎಲ್ಲರೂ ಎರಡು-ಮೂರು ವರ್ಷದಿಂದ ಬರಗಾಲಕ್ಕೆ ಈಡಾಗಿದ್ದಾರೆ. ಅವರಿಗೆಲ್ಲ ಸರ್ಕಾರ ಅದು ಯಾವುದೇ ಬ್ಯಾಂಕು ಇರಲಿ, ಅವರ ಬಡ್ಡಿ ಮನ್ನಾ ಮಾಡಿಸಬೇಕು. ಹಾಗೆ ಮಾಡಿದ ಸರ್ಕಾರಕ್ಕೂ ಒಳ್ಳೆಯ ಹೆಸರು ಬರುತ್ತದೆ ಮತ್ತು ಅವರಿಗೆ ಅನುಕೂಲ ಮಾಡಿಕೊಟ್ಟ ಹಾಗೆ ಆಗುತ್ತದೆ ಎಂದು ತಮ್ಮ ಮೂಲಕ ನಾನು ಒತ್ತಾಯ ಮಾಡುತ್ತೇನೆ. ಅದರ ಜತೆಯಲ್ಲಿ ನಮ್ಮ ಬೆಳೆವಿಮೆಯಲ್ಲಿ ಹೋದವರ್ಷ ಬಹಳ ತಾರತಮ್ಯ ಆಗಿದೆ. ಗುಲ್ಬರ್ಗಾ ಜಿಲ್ಲೆಯಲ್ಲಿ ಜೇವರ್ಗಿಗೆ ಹೆಚ್ಚು ಕೊಟ್ಟಿದ್ದಾರೆ ಎಂಬ ಕೂಗಿದೆ. ಏಕೆಂದರೆ ಈ ಸರ್ಕಾರಿ ಅಧಿಕಾರಿಗಳು ವಿಲೇಜ್ ಅಕೌಂಟೆಂಟ್ ಆಗಲಿ, ಕೃಷಿ ಅಧಿಕಾರಿಗಳಾಗಲೀ, ಹೋದವರ್ಷ ವಿಮೆಹಣ ಕೊಡಬೇಕಾದಾಗ ಅವರು ಕಣ್ಣಾರೆ ನೋಡಿದ್ದಾರೆ. ಪಕ್ಕದಲ್ಲಿ ಚೆನ್ನಾಗಿ ಬೆಳೆದಿದೆ. ಅದೇ ಹೊಲಕ್ಕೆ ವಿಮೆಹಣ ಕೊಟ್ಟಿದ್ದಾರೆ ಮತ್ತು ಯಾವ ಹೊಲದಲ್ಲಿ ಬೆಳೆ ಬೆಳೆದಿಲ್ಲ ಅದಕ್ಕೆ ಕೊಟ್ಟಿಲ್ಲ. ಈ ಮಾತನ್ನು ನಾನು ಏಕೆ ಹೇಳುತ್ತಿದ್ದೇನೆ ಎಂದರೆ ಅವರು ಕೂತಲ್ಲೇ, ಕಚೇರಿಯಲ್ಲೇ ಕುಳಿತು ಈ ಕೆಲಸ ಮಾಡುತ್ತಾರೆ. ಸರ್ಕಾರದವರು ಒತ್ತಾಯ ಮಾಡಿ ಅವರಿಗೆ ಸ್ಪಾಟ್ ವಿಸಿಟ್ ಮಾಡಿ ಹೊಲಹೊಲಗಳಿಗೆ ಓಡಾಡಿ, ಹೋಬಳಿಗಳಲ್ಲಿ ಓಡಾಡಿ ಅವರು ಕರೆಕ್ಟ್ ಆಗಿ ರೈತರಿಗೆ ಬೆಳವಿಮೆ ಕೊಡಿಸಬೇಕೆಂದು ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇನೆ. ಅದರ ಜೊತೆಯಲ್ಲಿ ಹೆಚ್ಚಿಗೆ ನಮ್ಮ ಹೈದ್ರಾಬಾದ್-ಕರ್ನಾಟಕ ಭಾಗದ ಗುಲ್ಬರ್ಗಾ ಮತ್ತು ಬೀದರ್‌ಗೆ, ನಮ್ಮ ಕರಿಯಣ್ಣನವರು ಮೇಲಿಂದ ಮೇಲೆ ಹೇಳುತ್ತಿದ್ದರು, ಕೇಂದ್ರ ಸರ್ಕಾರ ಕೇಂದ್ರ ಸರ್ಕಾರ ಎಂದು, ನಾನು ಕೇಂದ್ರ ಸರ್ಕಾರ ರಾಜ್ಯ ಸರ್ಕಾರವೆಂದು ಹೇಳುವುದಿಲ್ಲ. ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರ ಎರಡನ್ನೂ ಜನರೇ ಆಯ್ಕೆ ಮಾಡಿ ಕೊಟ್ಟಿರುವುದು. ಎಲ್ಲಾ ಸರ್ಕಾರಗಳೂ ಒಂದೇ ಎಂದು ತಿಳಿದುಕೊಂಡು ಕೆಲಸ ಮಾಡಬೇಕಾಗುತ್ತದೆ. ನಾಳೆ ಚುನಾವಣೆಯಲ್ಲಿ ನಿಂತು ಆರಿಸಿ ಬರಬೇಕೆಂದು ರಾಜಕೀಯ ಮಾಡಬಾರದೆಂದು ನನ್ನ ಒತ್ತಾಯ. ಎಲ್ಲಾ ಒಂದು ಮನಸ್ಸಿನಿಂದ, ಒಗ್ಗಟ್ಟಾಗಿ ಕೆಲಸ ಮಾಡಬೇಕು. ನಮ್ಮ ಭಾಗದ ಹಿರಿಯ ಸಚಿವರಾದ ಮಾನ್ಯ ಖರ್ಗೆಯವರಿದ್ದಾರೆ. ಅವರನ್ನು ನಮ್ಮ ಭಾಗದಲ್ಲಿ

ಬಂದು ಕೆ.ಡಿ.ಬಿ ಮೀಟಿಂಗ್ ತೆಗೆದುಕೊಳ್ಳುತ್ತಾರೆ. ಒಂದು ಚೂರೂ ನಾವು ಯಾವುದನ್ನೂ ಅವರಿಗೆ ಹೇಳುವುದಿಲ್ಲ. ಎಲ್ಲಾ ಮಾರ್ಗದರ್ಶನವನ್ನು ಕೊಡುತ್ತಾರೆ. ಆದರೆ ಕೇಂದ್ರ ಸರ್ಕಾರದ ಹಣವೆಂದು ಒಂದು ಶಬ್ದವೂ ಇಲ್ಲ. ಆದರೆ ನಮ್ಮ ಸರ್ಕಾರದ ಹಣವಿದೆ. ಇದನ್ನು ಜನರಿಗೆ ಹೇಗೆ ಸ್ಪಂದಿಸಬೇಕು. ನೀರು ಇಲ್ಲವೆಂದು ಯಾರೂ ಹೇಳಬಾರದು, ನೀರಿಗೆ ಹಾಹಾಕಾರವಿದೆಯೆಂದು ಯಾರೂ ಹೇಳಬಾರದು, ಆ ರೀತಿ ಹೇಳಿದರೆ ನಿಮ್ಮ ಮೇಲೆ ಆ್ಯಕ್ಷನ್ ತೆಗೆದುಕೊಳ್ಳುತ್ತೇನೆಂದು ಬಹಳ ಒತ್ತಾಯದಿಂದ ಹೇಳುತ್ತಾರೆ. ಅದಕ್ಕಾಗಿ ನಾವೂ ಏನೂ ಒಂದು ಶಬ್ದವನ್ನೂ ಮಾತನಾಡುವುದಿಲ್ಲ. ಇದರ ಜೊತೆಯಲ್ಲಿ ಶಾಸಕರನ್ನೂ ಅಧ್ಯಕ್ಷರನ್ನಾಗಿ ಮಾಡಿದ್ದೇವೆಂದು ಎಲ್ಲರೂ ಹೇಳುತ್ತಿದ್ದಾರೆ. ಆದರೆ ನನ್ನ ವ್ಯೆಂಯಕ್ತಿಕವಾದ ಅಭಿಪ್ರಾಯುವನ್ನು ವ್ಯಕ್ತಪಡಿಸುವುದೇನೆಂದರೆ, ಮೊದಲಿನ ಡಿ.ಸಿ ಲಕ್ಷ್ಮಿನಾರಾಯಣರವರು ಬಹಳ ಒಳ್ಳೆಯವರಿದ್ದರು. ಬಾಬೂರಾವ್ ಚೌವಾಣ್‌ನವರು ನಮ್ಮ ತಮ್ಮನವರಿದ್ದಾರೆ, ಅವರು ಮಂತ್ರಿಯಾಗಿದ್ದಾರೆ, ಅರ್ಧ ಭಾಗ ಅವರಿಗೆ ಇದೆ, ಅರ್ಧ ಭಾಗ ನನಗಿದೆ, ಅವರ್‍ಯಾರು ಛೇರ್ಮನ್ ಇದ್ದಾರೆ ಅವರು ಮೀಟಿಂಗ್‌ನ್ನು ತೆಗೆದುಕೊಂಡು ಮಾಡಿದ್ದ ಪೊಸೀಡಿಂಗ್ಸ್‌ನ್ನು ರದ್ದು ಮಾಡಿ ಅವರೇ ಪಾಸ್ ಮಾಡಿಸುವವರು, ಹೀಗಾದರೆ ಎಲ್ಲಿ ನಾನು ಛೇರ್ಮನ್ ಆಗಿ ಉಳಿದೆ? ಎಲ್ಲಾ ಶಾಸಕರು ಛೇರ್ಮನ್ ಛೇರ್ಮನ್ ಎಂದು ಹೇಳುತ್ತಾರೆ, ಆದರೆ ನಾನು ಎಲ್ಲಿ ಛೇರ್ಮನ್ ಆಗಿ ಉಳಿದೆ? ಅದೊಂದು ಕೆಲಸ ನಮ್ಮ ಪ್ರಪೋಸಲ್ ಇದೆ. ನಾನೊಬ್ಬನೇ ಮಾಡಿಸಿದೆ, ಅದರಲ್ಲಿ ಜಿಲ್ಲಾಪಂಚಾಯಿತಿಯ ಮೆಂಬರ್ ಇದ್ದಾರೆ, ತಾಲ್ಲೂಕು ಪಂಚಾಯಿತಿಯ ಅಧ್ಯಕ್ಷರಿದ್ದಾರೆ, ಎಲ್ಲರೂ ನಾವು ಕೂಡಿ ಅಭಿಪ್ರಾಯ ತೆಗೆದುಕೊಂಡು ನಾವು ಪಾರ್ಟಿ, ಪಕ್ಷದ ಭೇದವನ್ನು ಮರೆತು ಜನರಿಗೆ ಯಾವ ರೀತಿಯಲ್ಲಿ ಕೆಲಸ ಕೊಡಬೇಕು, ಜನರಿಗೆ ಹೇಗೆ ನೀರನ್ನು ಕೊಡಿಸಬೇಕು ಆ ರೀತಿಯಲ್ಲಿ ನಾವು ಒಂದು ಪ್ರೊಸೀಡಿಂಗ್ಸ್‌ನ್ನು ಮಾಡಿ ಕಳಿಸಿದ್ದೆವು ಆದರೆ ಅದು ಆಗಲಿಲ್ಲ. ಅಂದರೆ ಎಲ್ಲಿಯ ಛೇರ್ಮನ್ ಎಂದು ನಾನು ಕೇಳುತ್ತಿದ್ದೇನೆ? ಅದರ ಜೊತೆಯಲ್ಲಿ ನಾನು ಸರ್ಕಾರಕ್ಕೆ ಮನವಿ ಮಾಡುತ್ತೇನೆ. ಹೆಚ್ಚಿಗೆ ಪ್ರತಿಯೊಂದು ಗ್ರಾಮಪಂಚಾಯಿತಿಯಲ್ಲಿ ಬರಗಾಲ ಕಾಮಗಾರಿ ನಡೆಯಬೇಕು. ಕೂಲಿಕಾರ್ಮಿಕರಿಗೆ ಕೆಲಸ ಸಿಗಬೇಕು. ನಮ್ಮ ಭಾಗಕ್ಕೆ ಈಗೇನೋ ಮಳೆ ಬಂದಿದೆಯೆಂದು ತಾವು ಹೇಳಬಹುದು, ಆದರೆ ನನ್ನ ಅರ್ಧ ಭಾಗಕ್ಕೆ ಇನ್ನೂ ಮಳೆ ಬಂದಿಲ್ಲ. ಇವತ್ತೂ ನಾನು ಫೋನ್ ಮಾಡಿ ಕೇಳಿದ್ದೇನೆ. ಅಣೂರಾ ಮತ್ತು ತೂಗಾಂವ ಎಂಬುದು ಮಹಾರಾಷ್ಟ್ರದ ಬಾರ್ಡರ್‌ನಲ್ಲಿದೆ ಅಲ್ಲಿ ಮಳೆಯೇ ಇಲ್ಲ, ನಿಜವಾಗಿ ಹೇಳುತ್ತೇನೆ, ನಾನು ಇವತ್ತು ಮುಂಜಾನೆ ಫೋನ್ ಮಾಡಿದ್ದೇನೆ ಮಳೆಯೇ ಇಲ್ಲ. ಅದಕ್ಕಾಗಿ ಬೀಜದ ವ್ಯವಸ್ಥೆಯನ್ನು ಕೂಡ ಸರ್ಕಾರ ಮಾಡಬೇಕು. ಸಬ್ಸಿಡಿ ರೂಪದಲ್ಲಿ ಬೀಜದ ಪೂರೈಕೆ ಮಾಡಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡಿ, ರೈತರ ಸಾಲದ ಮೇಲೆ ಬಡ್ಡಿಯನ್ನು ಸಂಪೂರ್ಣವಾಗಿ ಮನ್ನಾ ಆಗಬೇಕು. ಮತ್ತು ನಮ್ಮಲ್ಲೇನು ಇಬ್ಬರು ತಾಯಂದಿರು ನೀರು ಸೇದಲಿಕ್ಕೆ ಹೋಗಿ ಅಗಲಿ ಹೋಗಿದ್ದಾರೆ ಅವರಿಗೆ ಒಂದೊಂದು ಲಕ್ಷ ರೂ ಪರಿಹಾರವನ್ನು ಕೊಡಬೇಕೆಂದು ತಮ್ಮ ಮೂಲಕ ಅವರಿಗೆ ಒತ್ತಾಯ ಮಾಡಿ ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಆರಗಜ್ಞಾನೇಂದ್ರ : ಮಾನ್ಯ ಖರ್ಗೆಯವರಿದ್ದಾರೆ, ಮಾನ್ಯ ಕಮಲಾಪುವ ಎಂ.ಎಲ್.ಎ ರವರು ಈಗಾಗಲೇ ಹೇಳಿದಂತೆ ಅವರು ಕೊಟ್ಟಂಥ ಎಲ್ಲಾ ಪ್ರಪೋಸಲ್‌ಗಳನ್ನು ಹೊಡೆದುಹಾಕಿ ಜಿಲ್ಲಾಧಿಕಾರಿಯವರು ಬೇರೆ ರೀತಿಯಿಂದ ಮಾಡುತ್ತಾರೆ, ಅಲ್ಲಿ ಎರಡು ತಾಲ್ಲೂಕು ಇದೆ, ಆದರೂ

ಕೂಡ ಇವರ ಪ್ರಪೋಸಲ್‌ಗಳನ್ನು ಮಾನ್ಯ ಮಾಡುವುದಿಲ್ಲವೆಂದಾದರೆ ಹೇಗೆ ಇಡೀ ರಾಜ್ಯದಲ್ಲಿ ನಾವೆಲ್ಲಾ ಕೊಟ್ಟಿರುವ ಕಾರ್ಯಕ್ರಮಗಳನ್ನು ಅನುಷ್ಟಾನಕ್ಕೆ ತರುವುದು ಜಿಲ್ಲಾಧಿಕಾರಿಯವರ ಕರ್ತವ್ಯ ಆದರೆ ಕಮಲಾಪುರ ಶಾಸಕರು ಕೊಟ್ಟಿರುವಂಥ ಪ್ರಪೋಸಲ್‌ನ್ನು ಹೊಡೆದುಹಾಕುತ್ತಾರೆ, ಒಂದು ತಾಲ್ಲೂಕಿಗೆ ಇಬ್ಬರು ಎಂ.ಎಲ್.ಎ. ಗಳಾದರೂ ಕೂಡ ಪ್ರಪೋರ್ಶನೇಟ್ ಆಗಿ ಅವರಿಗೆ ಹಣ ಬರಬೇಕಾಗುತ್ತದೆ. ಅವರು ಹೇಳಬೇಕಾಗುತ್ತದೆ. ಆದರೆ ಮಾನ್ಯ ಶಾಸಕರು ಆ ರೀತಿ ಹೇಳುತ್ತಿದ್ದಾರೆ ದಯವಿಟ್ಟು ಗಮನಿಸಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅವರೂ ಹಾಗೆಯೇ ಮಾಡಿದ್ದಾರೆ. ಇವರೂ ಕೂಡ ಇವರಿಗೇನು ಪ್ರಪೋರ್ಷನೇಟ್ ಬರುತ್ತದೆ ಅಷ್ಟೇ ತೆಗೆದುಕೊಳ್ಳುತ್ತಾರೆ. ಇನ್ನೂ ಸ್ವಲ್ಪ ಹೆಚ್ಚಿಗೆಯೇ ತೆಗೆದುಕೊಳ್ಳುತ್ತಾರೆ. ಕಡಿಮೆ ಏನಿಲ್ಲ, ನಮ್ಮಲ್ಲಿ ನೀರಿನ ಟ್ರಾನ್ಸ್‌ಪೋರ್ಟೇಷನ್ ತೊಂದರೆ ಏನಿದೆ ಎಂದು ತಮಗೆ ಗೊತ್ತಾ? ಕೆಲವು ಹಳ್ಳಿಯಲ್ಲಿ ಇದೊಂದು ಪರ್ಮನೆಂಟ್ ಬಿಸ್‌ನೆಸ್ ಆಗಿಬಿಟ್ಟಿದೆ. ಏನೆಂದರೆ, ನೀವು ಪರ್ಮನೆಂಟ್ ಏನಾದರೂ ರಿಸೋರ್ಸ್ ಮಾಡಿಕೊಡುತ್ತೇವೆಂದರೂ ಕೂಡ ಅಲ್ಲಿ ಕೆಲವರು ಇಲ್ಲಾ ನಮಗೆ ಕಾರ್ಟ್‌ನಲ್ಲಿಯೇ ನೀರನ್ನು ಒಡೆಯಬೇಕು, ನಮ್ಮದೇ ಟ್ರಾಕ್ಟರ್‌ನ್ನು ಉಪಯೋಗ ಮಾಡಬೇಕು ಎನ್ನತಕ್ಕವರೂ ಇರುತ್ತಾರೆ. ಅವರಿಗೇ ಗೊತ್ತಿದೆ, ನೀರಿನದ್ದು ಒಂದು ಸಲ ಅಲ್ಲ, ನಾವು ಎಲ್ಲೂ ಅರ್ಧ ಗಂಟೆ ಹದಿನೈದು ನಿಮಿಷದಲ್ಲಿ ಸಭೆ ಮಾಡಿ ಅಷ್ಟಕ್ಕೇ ಮುಗಿಸುವುದಿಲ್ಲ. ಪ್ರತಿಯೊಂದು ಕ್ಷೇತ್ರದಲ್ಲಿ ಪ್ರತಿಯೊಂದು ಹಳ್ಳಿಯಲ್ಲಿ ನೀರಿನದ್ದೇ ಆಗಿರಲಿ ಮತ್ತೊಂದೇ ಸಮಸ್ಯೆ ಇದ್ದರೆ ಕೂಡ ಡೀಟೇಲ್ ಡಿಸ್‌ಕಷನ್ ಮಾಡಿ ಯಾವುದೇ ಒಂದು ಸಭೆ ಇದ್ದರೂ ಕನಿಷ್ಟ ಐದಾರು ಗಂಟೆಗಳ ಕಾಲವಾದರೂ ಆಗುತ್ತದೆ. ಅದು ಅವರಿಗೂ ಗೊತ್ತಿದೆ. ಅದರಲ್ಲಿ ಅವರೊಬ್ಬರೇ ಸದಸ್ಯರು ಕೊನೆಯವರೆಗೆ ಕೂರುತ್ತಿರತಕ್ಕವರು ಮತ್ತು ಅವರಿಗೆ ಬೇಕಾಗಿದ್ದನ್ನು ಮಾಡಿಸಿಕೊಂಡು ಹೋಗತಕ್ಕವರು. ಆದರೆ ಇನ್ನೂ ಕೂಡ ಜಾಸ್ತಿ ಬೇಕು ಎಂದು ಹೇಳುತ್ತಾರೆ, ಆದರೆ ಅವರ ತಮ್ಮ ಬಾಬೂರಾವ್‌ಚೌವಾಣ್ ರವರೇನಿದ್ದಾರೆ, ಅವರದ್ದೂ ಇವರದ್ದೂ ಮನೆ ಕೊಡುವಾಗ, ಆಶ್ರಯ ಸ್ಕೀಮ್‌ನಲ್ಲಿ ಇಲ್ಲೆಲ್ಲಾ ಸ್ವಲ್ಪ ತೊಂದರೆ ಬರುತ್ತದೆ, ಆದ್ದರಿಂದ ಹೇಳುತ್ತಿದ್ದಾರೆಯೇ ಹೊರತು, ತಮಗೆ ಗೊತ್ತಿದ್ದಂತೆ ಲಾರ್ಜೆಸ್ಟ್ ಏರಿಯಾ ಇದ್ದವರು ಛೇರ್ಮನ್ ಆಗುತ್ತಾರೆ. ಅದನ್ನು ಸ್ವಲ್ಪ ಹೆಚ್ಚು ಕಡಿಮೆಯಾದರೂ ಕೂಡ ಸಂಭಾವಿಸಿಕೊಂಡು ಹೋಗುತ್ತಾರೆ, ಆದರೆ ಇವರ ಪಾಲಿನ ಹಣವನ್ನು ಯಾರೂ ತೆಗೆದುಕೊಳ್ಳಲು ಸಾಧ್ಯವೇ ಇಲ್ಲ, ಇನ್ನೂ ಇವರು ಹೆಚ್ಚಿಗೆ ತೆಗೆದುಕೊಳ್ಳುತ್ತಾರೆಯೇ ಹೊರತು ಕಡಿಮೆಯೇನೂ ಮಾಡುವುದಿಲ್ಲ.

ಶ್ರೀ ರೇವೂನಾಯ್ಕ ಬೆಳಮಗಿ : ಹೆಚ್ಚಿಗೆ ಏನನ್ನೂ ತೆಗೆದುಕೊಂಡಿಲ್ಲ. ತೆಗೆದುಕೊಳ್ಳುವಷ್ಟನ್ನು ಕೊಟ್ಟಿರಬೇಕು ಅಷ್ಟೆ. ಆದರೆ ಮೊದಲಿನ ಡಿ.ಸಿ. ಯವರು ಏನಿದ್ದರು ಅವರಿಗೆ ಗೊತ್ತಿತ್ತು. ಅವರು ಅವರದ್ದು ಅವರಿಗೇ ನಮ್ಮದು ನಮಗೇ ಮಾಡುತ್ತಿದ್ದರು. ಈಗ ಏನು ಡಿ.ಸಿ. ಬಂದಿದ್ದಾರಲ್ಲಾ ಒಂದು ಪ್ರೊಸೀಡಿಂಗ್ಸ್ ಮಾಡಲು ಪಾಪ ಅವರಿಗೆ ನಾಲೆಜ್ಡ್ ಇಲ್ಲ. ಇವರಿಗೆ ಗೊತ್ತಿಲ್ಲ ಅದೂ ಪ್ರೊಸೀಡಿಂಗ್ ಮಾಡಿ ಹಾಗೆಯೇ ಇಟ್ಟಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಸುಮ್ಮನೆ ಏಕೆ ಹೇಳುತ್ತೀರಿ? ಪಾಪ ಅವರ ಬಂದು ಒಂದು ತಿಂಗಳು ಮಾತ್ರ ಆಯಿತು. ಈಗ ಅವರಿಗೆ ಎಲ್ಲಾ ಗೊತ್ತಾಗಿದೆ ಮಾಡುತ್ತಾರೆ. ಆದರೆ ಬಹಳ ಹುಷಾರ್ ನಿಮ್ಮ ಎಂ.ಎಲ್.ಎ. ಸಾಹೇಬರು ಅಷ್ಟೇನೂ ಈಜಿಯಲ್ಲ. ಹತ್ತಾರು ಕಡೆ ನಮಗೆ

ಗೊತ್ತಿಲ್ಲದಂತೆಯೇ ಮಾಡಿಸಿಕೊಂಡು ಬರುತ್ತಾರೆ ಆನಂತರ ಸಹಿ ಮಾಡಿಸಿಕೊಂಡು ಹೋಗುತ್ತಾರೆ. ನೀವು ಅದೂ ಕೊಡುವುದಿಲ್ಲವಲ್ಲಾ, ಮತ್ತೆ ಈ ರೀತಿ ಟೀಕೆ ಮಾಡಿಸಿಕೊಳ್ಳುವುದೇ ನಮ್ಮ ಪಾಲಿಗಿದೆ.

ಶ್ರೀ ರೇವೂನಾಯ್ಕ ಬೆಳಮಗಿ : ಇದನ್ನು ಜಿಲ್ಲಾಪಂಚಾಯಿತಿಯ ಸದಸ್ಯರೂ ಎಲ್ಲರೂ ಕೂಡಿಯೇ ನಾವು ಮಾಡಿದ್ದು. ನಾನೊಬ್ಬನೇ ಮಾಡಿಲ್ಲ.

ಛೇರ್ಮನ್ : ಈಗ ತಮಗೆ ಸರ್ಟಿಫಿಕೇಟ್ ಸಿಕ್ಕಿತಲ್ಲಾ?

ಶ್ರೀ ರೇವೂನಾಯ್ಕ ಬೆಳಮಗಿ : ಅವರು ಎಲ್ಲರನ್ನೂ ಕೂಡಿಯೇ ಮಾಡಿಸುತ್ತಾರೆ, ಎಲ್ಲರೂ ಕೂಡಿಯೇ ಕೊಟ್ಟಿದ್ದೇವೆ. ಅದು ಆಗಲಿಲ್ಲ. ನನಗೆ ನೆನಪಿದೆ, ಹಜರೂರಿನಲ್ಲಿ ಹಾಹಾಕಾರ ಇನ್ನೂ ಇದೆ, ಆದ್ದರಿಂದ ನೀರಿನ ಸಮಸ್ಯೆಯನ್ನು ಯಾವ ರೀತಿಯಲ್ಲಿ ಸರ್ಕಾರ ಪರಿಹಾರ ಮಾಡುತ್ತದೆ ಅದನ್ನು ಮಾಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಎನ್. ಚಲುವರಾಯಸ್ವಾಮಿ (ನಾಗಮಂಗಲ) : ಮಾನ್ಯ ಅಧ್ಯಕ್ಷರೆ, ಸಮಯ ಮಧ್ಯಾಹ್ನ ಎರಡೂವರೆ, ಹೊಟ್ಟೆ ಹಸಿಯುತ್ತಿರುವ ಊಟದ ಸಮಯದಲ್ಲಿ ಮತನಾಡಲು ಅವಕಾಶ ಕೊಟ್ಟಿದ್ದೀರಾ, ದಯಮಾಡಿ ಇನ್ನು ಮುಂದೆ ಈ ರೀತಿ ಮಾಡಬೇಡಿ ಎಂದು ವಿನಂತಿ ಮಾಡುತ್ತಾ, ಈಗಾಗಲೇ ವಿರೋಧ ಪಕ್ಷದಿಂದ ಸಾಕಷ್ಟು ಎಲ್ಲಾ ಮುಖಂಡರುಗಳು ಮೂರು ವರ್ಷದ ನಮ್ಮ ರಾಜ್ಯದ ದುರಾದೃಷ್ಟ, ಯಾವತ್ತೂ ಈ ರೀತಿ ಹಿಂದೆ ಬಾರದಿರತಕ್ಕ ಈ ಸನ್ನಿವೇಶವನ್ನು ಸರ್ಕಾರ ಯಾವ ರೀತಿ ಎದುರಿಸುತ್ತದೆ ಎಂಬ ಬಗ್ಗೆ ಮೂರು ದಿವಸಗಳಿಂದ ಚರ್ಚೆ ನಡೆದಿದೆ. ಆದರೆ ಇವತ್ತು ಬಹಳ ಪ್ರಮುಖವಾಗಿ ನಾವು ಬರಗಾಲದಲ್ಲಿ ಕಾಮಗಾರಿಯನ್ನು ಕೈಗೆತ್ತಿಕೊಂಡಿದ್ದೇವೆ. ಅಕ್ಕಿ ಕೊಟ್ಟಿದ್ದೇವೆ, ಹಣ ಕೊಟ್ಟಿದ್ದೇವೆ, ಕೆಲಸ ನಡೆದಿದೆ. ಕ್ಷೇತ್ರದ ಶಾಸಕರು ಅದಕ್ಕೆ ಅಧ್ಯಕ್ಷರು, ಆದರಿಂದ ನಾವು ಏನು ಮಾಡಬೇಕು ಎನ್ನುವುದನ್ನು, ಸರ್ಕಾರದ ಪರವಾಗಿ ಮಾನ್ಯ ಹಿರಿಯ ಸದಸ್ಯರಾದ ಕರಿಯಣ್ಣನವರು ಉತ್ತರವನ್ನೇ ಕೊಟ್ಟುಬಿಟ್ಟರು, ನಾವು ಮಂತ್ರಿಗಳ ಉತ್ತರಕ್ಕೆ ಕಾಯುವಂಥ ಅವಶ್ಯಕತೆಯೇ ಇಲ್ಲ. ಅಷ್ಟು ಸ್ಪಷ್ಟವಾಗಿ ಉತ್ತರ ಕೊಟ್ಟಿದ್ದಾರೆ. ಆದರೆ ಇಲ್ಲಿ ಮಾಡಬೇಕಾಗಿರುವಂಥದ್ದು ಏನೆಂದರೆ, ಒಂದು ವರ್ಷದಿಂದ ಪ್ರಾರಂಭ ಮಾಡಿದಂಥ ಬರದ ಕಾಮಗಾರಿಗಳನ್ನು ಒಂದೊಂದು ತಾಲ್ಲೂಕಿನಲ್ಲಿ, ಜಿಲ್ಲಾವಾರು ಕೆಲವು ಜಿಲ್ಲೆಯಲ್ಲಿ ಹೆಚ್ಚಾಗಿ ಕೊಟ್ಟಿದ್ದಾರೆ. ಕೆಲವು ಜಿಲ್ಲೆಯಲ್ಲಿ ಕಡಿಮೆಯಾಗಿ ಕೊಟ್ಟಿದ್ದಾರೆ, ತಾಲ್ಲೂಕಿನಲ್ಲಿ ಕೆಲವು ವ್ಯತ್ಯಾಸವಾಗಿರಬಹುದು, ಆದರೆ ಮಾಡಬೇಕಾದಂಥ ರೀತಿ ಒಂದಷ್ಟು ಕಾಮಗಾರಿಗಳನ್ನು ನಾವು ಕೊಟ್ಟಿದ್ದೇವೆ. ಜನರಿಗೆ ಕೆಲಸ ಸಿಕ್ಕಿದೆ ಎಂಬುದಷ್ಟೇ ಅಲ್ಲ ತೃಪ್ತಿ ಯಾವ ರೀತಿ ಕಾಮಗಾರಿಗಳನ್ನು ಪ್ರತಿ ಗ್ರಾಮಕ್ಕೆ ಗ್ರಾಮಪಂಚಾಯಿತಿ ಹಂತದಲ್ಲಿ ಕಡು ಬಡವನಿಗೆ ಇವತ್ತೇನು ಊಟ ಮಾಡಲು ಮತ್ತು ಸಮಸ್ಯೆಯಾಗಿರತಕ್ಕ ಬರಗಾಲದ ಈ ಸಂದರ್ಭದಲ್ಲಿ ಕೆಲಸ ಸಿಕ್ಕಿದೆಯೇ, ಪ್ರತಿ ಗ್ರಾಮದಲ್ಲಿ ಇದು ನಡೆಯುತ್ತಿದೆಯೇ ಎಂಬ ಬಗ್ಗೆ ಸರ್ಕಾರ ಉಸ್ತುವಾರಿಯನ್ನು ಮಾಡಿಲ್ಲ ಎಂಬುದನ್ನು ಮೊದಲನೆಯದಾಗಿ ಇವತ್ತು ಹೇಳಲು ಇಚ್ಛೆ ಪಡುತ್ತೇನೆ. ಏಕೆಂದರೆ, ಒಂದು ಸಾರಿ ಕೊಟ್ಟರೆ ಒಂದು ಮೂವತ್ತು ಲಕ್ಷ ರೂಪಾಯಿ ಹಣವನ್ನು ಏಳೂವರೆ ಲಕ್ಷ ರೂ ಹಣ ಇನ್ನು ಇಪ್ಪತ್ತೆರಡೂವರೆ ಲಕ್ಷದ ರೂಪದಲ್ಲಿ ಅಕ್ಕಿಯ ಕೊಟ್ಟರೆ, ಇವತ್ತು ಮೂವತ್ತು ಪಂಚಾಯಿತಿಗಳು ಇರುತ್ತದೆ, ಪಂಚಾಯಿತಿಗೆ ಒಂದೊಂದು ಲಕ್ಷ ರೂ ಕೊಟ್ಟರೆ, ಅಲ್ಲಿ ಗ್ರಾಮಗಳು ಎಷ್ಟು ಇರುತ್ತವೆ ಎನ್ನುವುದನ್ನು ಹತ್ತರಿಂದ ಹದಿನೈದು ಹಳ್ಳಿಗಳು ಬರುತ್ತದೆ. ಈ ರೀತಿ ಎಲ್ಲೂ ಸಹ ಸರಿಯಾದ ರೀತಿಯಲ್ಲಿ ಸಮರ್ಪಕವಾಗಿ ಸಂಪೂರ್ಣವಾಗಿ ಯಶಸ್ವಿಯಾಗಿ

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣ ಪರಿಷ್ಕರಿಸಿಲ್ಲವೆಂದು ಸೂಚಿಸುತ್ತದೆ.)

ಕಾಮಗಾರಿಯನ್ನು ಕೊಟ್ಟು ಇವತ್ತಿನ ರೈತರ ಸಮಸ್ಯೆಗೆ ಯಾರು ಕೂಲಿ ಮಾಡಿ ಜೀವನ ಮಾಡತಕ್ಕ ಜನಗಳು ಇದ್ದಾರೆ ಅವರೆಲ್ಲರಿಗೂ ಕೂಲಿ ಸಿಗತಕ್ಕಂಥ ಒಂದು ಸನ್ನಿವೇಶವಂತೂ ಸ್ಪಷ್ಟವಾಗಿ ನಡೆದಿಲ್ಲ. ಅದು ಆಗಿಲ್ಲ ಎನ್ನುವುದನ್ನು ಮೊದಲನೆಯದಾಗಿ ಸರ್ಕಾರಕ್ಕೆ ಮನವರಿಕೆನ್ನು ಮಾಡಿಕೊಡಲು ಇಷ್ಟಪಡುತ್ತೇನೆ. ಕಳೆದ ಫೆಬ್ರವರಿಯಾದ ಮೇಲೆ ನಮ್ಮ ಮಂಡ್ಯ ಜಿಲ್ಲೆಯಲ್ಲಿ ಯಾವುದೇ ತರದ ಹಣವನ್ನಾಗಲಿ, ಸ್ಕೇರ್‌ಸಿಟಿಯಲ್ಲೇ ಆಗಲಿ ಅಥವಾ ಕುಡಿಯುವ ನೀರಿನ ಹಣವನ್ನೇ ಆಗಲಿ ಬಿಡುಗಡೆ ಮಾಡಿಲ್ಲ. ಇವತ್ತು ಫೆಬ್ರವರಿಗಿಂತ ಹಿಂದೆ ಸ್ವಲ್ಪಮಟ್ಟಿಗೆ ಅಲ್ಲಲ್ಲಿ ಸಣ್ಣಪುಟ್ಟ ಕಡೆಗಳಲ್ಲಿ ನೀರಿತ್ತು. ನಂತರ ಏಪ್ರಿಲ್ ಮೇ ನಲ್ಲಿ ಸಂಪೂರ್ಣವಾಗಿ ಬತ್ತಿಹೋಗಿದೆ, ಇವತ್ತು ಕುಡಿಯುವ ನೀರಿನ ತೊಂದರೆ ಜಾನುವಾರುಗಳಿಗೆ ತೊಂದರೆ ಇರುವುದರಿಂದ ಸಣ್ಣಪುಟ್ಟ ಗುಂಡಿ ತೋಡಲೂ ಬಹಳ ಸಮಸ್ಯೆಯಾಗಿದೆ. ಇದಕ್ಕೆ ಪರಿಹಾರವನ್ನು ಯಾವುದೇ ಜಿಲ್ಲಾಧಿಕಾರಿಗಳು ನಾನು ತಿಳಿದ ಮಟ್ಟಿಗೆ ಸೂಕ್ತವಾದ ಪರಿಹಾರವನ್ನು ಕೊಡುತ್ತಿಲ್ಲ. ನಂತರ ಇವತ್ತು ಮಾಡಿದಂಥ ಬರದ ಕೆಲಸದ ಬಗ್ಗೆ ಇವತ್ತು ಈಗಾಗಲೇ ಸಾಕಷ್ಟು ಚರ್ಚೆಯಾದಾಗ ಆಂಧ್ರದಲ್ಲಿ 47 ಲಕ್ಷ ಮೆಟ್ರಿಕ್ ಟನ್ ಅಕ್ಕಿಯನ್ನು ಕೇಂದ್ರ ಸರ್ಕಾರದಿಂದ ಕೊಟ್ಟಿದ್ದಾರೆ. ಆದರೆ ಕರ್ನಾಟಕ ರಾಜ್ಯಕ್ಕೆ 8 ಲಕ್ಷ ಮೆಟ್ರಿಕ್ ಟನ್ ಅಕ್ಕಿಯನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ಸಾಕಷ್ಟು ಚರ್ಚೆ ಎರಡು ದಿವಸದಿಂದಲೂ ಆಯಿತು. ಇದಕ್ಕೆ ಕಾರಣ ಕೇಂದ್ರ ಸರ್ಕಾರ ಕೊಡದಿದ್ದರೆ ರಾಜ್ಯ ಸರ್ಕಾರ ಏನು ಸಮರ್ಪಕವಾಗಿ ಎದುರಿಸಬೇಕಾಗಿತ್ತು, ಯಾವ ರೀತಿಯಾಗಿ ಕೇಂದ್ರ ಸರ್ಕಾರದ ಮೇಲೆ ಒತ್ತಡವನ್ನು ತರಬೇಕು. ಆಂಧ್ರದಲ್ಲಿ ಇವತ್ತು ಹೆಚ್ಚಿನ ಪ್ರಮಾಣದಲ್ಲಿ ಬರಗಾಲದಲ್ಲಿ ಜನರ ಸಮಸ್ಯೆಗೆ ಸ್ಪಂದಿಸುತ್ತಿದ್ದಾರೆ, ಕರ್ನಾಟಕ ರಾಜ್ಯದ ಸರ್ಕಾರದ ಜವಾಬ್ದಾರಿ, ಇವತ್ತು ವಿರೋಧಪಕ್ಷ ಇರತಕ್ಕದ್ದು ಅವರ ಗಮನಕ್ಕೆ ತರತಕ್ಕದ್ದಕ್ಕೆ, ಟೀಕೆ ಮಾಡುವುದಕ್ಕೆ, ನ್ಯೂನತೆಗಳನ್ನು ಎತ್ತಿಹಿಡಿಯುವುದಕ್ಕೆ, ಆದರೆ ಸರ್ಕಾರ ನಡೆಸತಕ್ಕಂಥ ಮಂತ್ರಿಗಳು ಮತ್ತು ಮುಖ್ಯಮಂತ್ರಿಗಳಿದ್ದಾರೆ ಅವರು ಕೇಂದ್ರ ಸರ್ಕಾರದ ಮೇಲೆ ನೀವು ಯಾವ ರೀತಿಯಲ್ಲಿ ಅವರ ಮೇಲೆ ಒತ್ತಡ ತರುತ್ತೀರೋ, ಅಲ್ಲಿ ಧರಣಿ ಮಾಡುತ್ತೀರೋ ಅಲ್ಲಿ ರಿಕ್ವೆಸ್ಟ್ ಮಾಡುತ್ತೀರೋ, ವಿನಂತಿ ಮಾಡಿಕೊಂಡು ತರುತ್ತೀರೋ ಅಥವಾ ಪಕ್ಷದ ಎಂ.ಪಿ. ಗಳನ್ನು ಉಪಯೋಗಿಸಿಕೊಳ್ಳುತ್ತೀರೋ ಅಥವಾ ವಿರೋಧ ಪಕ್ಷದ ನಾಯಕರನ್ನು ಉಪಯೋಗಿಸಿಕೊಳ್ಳುತ್ತೀರೋ ಅದು ನಮಗೆ ಸಂಬಂಧವಲ್ಲ. ಅದು ಸರ್ಕಾರದ ಜವಾಬ್ದಾರಿ, ನೀವು ಸಂಪೂರ್ಣವಾಗಿ, ಯಶಸ್ವಿಯಾಗಿ ಕೇಂದ್ರ ಸರ್ಕಾರದಿಂದ ಪಕ್ಕದ ರಾಜ್ಯಕ್ಕೆ ಕೊಡತಕ್ಕಂಥ ನೆರವು ಏನಿದೆ, ಅದೇ ರೀತಿ ನಮ್ಮ ರಾಜ್ಯಕ್ಕೂ ಕೊಡಬೇಕೆಂಬ ಬೇಡಿಕೆಯನ್ನು ಕಳುಹಿಸಿ, ಅದರಲ್ಲಿ ಯಶಸ್ವಿಯಾಗಬೇಕಾಗಿತ್ತು. ಆ ಹಂತದಲ್ಲಿ ಸಂಪೂರ್ಣವಾಗಿ ಸರ್ಕಾರ ವಿಫಲವಾಗಿದೆ ಎಂಬುದನ್ನು ನೀವೂ ಒಪ್ಪಬೇಕಾಗುತ್ತೆ. ಇವತ್ತು ಜನರೂ ಒಪ್ಪಿದ್ದಾರೆ. ಅದನ್ನೇ ನಾವೂ ಹೇಳುತ್ತಾ ಇದ್ದೇವೆ. ಇಂತಹ ಒಂದು ಸಂದರ್ಭದಲ್ಲಿ ಇವತ್ತು ಬಿ.ಜೆ.ಪಿ.ಯವರು ಮತ್ತು ಕಾಂಗ್ರೆಸ್‌ನವರು ಇಲ್ಲಿ ಕುಸ್ತಿ ಆಡತಕ್ಕಂಥಾದ್ದಲ್ಲ ಇವತ್ತು ನೀವು ಜನಕ್ಕೆ ಹೇಳಬೇಕಾಗುತ್ತದೆ. ವಿರೋಧ ಪಕ್ಷ ಬಿ.ಜೆ.ಪಿ.ಯ ಶಾಸಕರೂ ಹೇಳಬೇಕಾಗುತ್ತೆ. ಅಥವಾ ಕಾಂಗ್ರೆಸ್ಸಿನ ಆಡಳಿತ ಪಕ್ಷದವರೂ ಹೇಳಬೇಕಾಗುತ್ತೆ. ನಮ್ಮ ಪಾತ್ರ ಏನು, ನಾವು ಏನು ಮಾಡಿದ್ದೇವೆಂಬುದನ್ನು ಹೇಳಬೇಕಾಗುತ್ತೆ. ಇಲ್ಲಿ ನೀವು ಹೇಳಲಿಲ್ಲ. ನಾವು ಹೇಳಲಿಲ್ಲ ಎಂಬುದು ಮುಖ್ಯವಲ್ಲ. ಒಟ್ಟಾರೆ, ಇವತ್ತು ಸಂಪೂರ್ಣವಾಗಿ ಕೇಂದ್ರಸರ್ಕಾರದ ನೆರವನ್ನು ನಾವು ಪಡೆಯುವುದರಲ್ಲಿ ವಿಫಲರಾಗಿದ್ದೇವೆಂಬುದನ್ನು ಸದನದಲ್ಲಿ ಹೇಳಬೇಕಾಗುತ್ತೆ ಮತ್ತು ಕಳೆದ ಮೂರು ವರ್ಷಗಳ ಬರಗಾಲದ

ಇತ್ತೀಚಿನ ಕೆಲಸಗಳ್ನು ನೋಡಿದಾಗ ಗೊತ್ತಾಗುತ್ತದೆ. ನಂತರ, ಪ್ರತಿ ವಾರ ಬರಗಾಲ ಕಾಮಗಾರಿಯನ್ನು ಕೈಗೆತ್ತಿಕೊಂಡರೆ, ಯಾವತ್ತೋ ಆರು ತಿಂಗಳಿಗೋ, ಒಂದು ವರ್ಷಕ್ಕೋ ಹೇಮಾವತಿಯಲ್ಲಿ ಪಿ.ಡಬ್ಲ್ಯು.ಡಿ.ನವರು ಬೆಲೆ ಕೊಟ್ಟಹಾಗೆ ಕೊಡುವುದಾದರೆ ಅದಕ್ಕೆ ಅರ್ಥ ಇದೆಯೇ? ಪ್ರತಿ ವಾರ ಹಣ ಕೊಡತಕ್ಕಂಥಾದ್ದು ಕೊಡಬೇಕು. ಅಕ್ಕಿ ಕೊಡತಕ್ಕಂಥಾದ್ದು ಕೊಡಬೇಕು. ಯಾವ ಜಿಲ್ಲೆಯಲ್ಲಿ ನೀವು ಸಿಸ್ಟಂ ಆಗಿ ಕೊಡುತ್ತಿದ್ದೀರಿ ಎಂಬುದನ್ನು ದಯಮಾಡಿ ನೀವು ಉತ್ತರ ಹೇಳತಕ್ಕಂಥ ಸಂದರ್ಭದಲ್ಲಿ ಹೇಳಿ. ಯಾವ ಯಾವ ಜಿಲ್ಲೆಯಲ್ಲಿ ಈಗ ತೆಗೆದುಕೊಂಡಿರತಕ್ಕ ಕಾಮಗಾರಿಗಳಿಗೆ ಪ್ರತಿ ವಾರ ಹಣ ಮತ್ತು ಅಕ್ಕಿ ಬಿಡುಗಡೆಯಾಗಿದೆ. ಯಾವರೀತಿ ಕಾಮಗಾರಿ ನಡೆದಿದೆ? ಇವತ್ತು ಆ ಕಮಿಟಿಗೆ ಶಾಸಕರು ಉಸ್ತುವಾರಿ ಇರಬಹುದು. ಆದರೆ, ಆ ಕೆಲಸವನ್ನು ನಿರ್ವಹಿಸತಕ್ಕಂಥವರು ಶಾಸಕರು ಅಲ್ಲ. ಅಧಿಕಾರಿಗಳು ನಿರ್ವಹಿಸುತ್ತಾರೆ. ಜಿಲ್ಲಾಧಿಕಾರಿಗಳು ಮಾನಿಟರ್ ಮಾಡುತ್ತಾರೆ. ರಾಜ್ಯಮಟ್ಟದ ಸೆಕ್ರೆಟರಿಗಳು ಸಹಿತ ಜಿಲ್ಲೆಯಲ್ಲಿ ನೋಡಲ್ ಆಫಿಸರ್ ಆಗಿ ಮಾಡಿದ್ದೀರಿ. ಯಾವ ರೀತಿ ನೀವು ಇಲ್ಲಿಯವರೆಗೆ ಕಾಮಗಾರಿಗಳನ್ನು ನಿರ್ವಹಿಸಿ, ಯಾವರೀತಿಯಲ್ಲಿ ಜನಗಳಿಗೆ, ಅದು ಯಾವುದೋ ಒಂದು ಸಂದರ್ಭದಲ್ಲಿ ರಾಜ್ಯದ ಹಿತದೃಷ್ಟಿಯಿಂದ ಒಂದು ಒಳ್ಳೆಯ ಕೆಲಸ ಮಾಡಬೇಕಾದರೆ ಯಾವುದಾದರೊಂದು ದೊಡ್ಡಕಾಮಗಾರಿಯನ್ನು ಈ ಬರ ಪರಿಹಾರದ ಹಣ ಮೂಲಕ ಕೈಗೆತ್ತಿ ಕೊಂಡಿದ್ದರೆ, ಒಂದು ಜೆ.ಸಿ.ಬಿ.ಯಲ್ಲಿ ಮಾಡಿದರೆ ಅದು ಅಪರಾಧ ಅಲ್ಲ. ಆದರೆ ಉಳಿದಂತೆ ಎಲ್ಲವನ್ನೂ ಅದೇರೀತಿ ಮಾಡಿದರೆ, ನಾವು ಮಾಡತಕ್ಕಂಥ ಉದ್ದೇಶ ಈಡೇರುವುದಿಲ್ಲವೆಂಬುದನ್ನು ಈ ಸಂದರ್ಭದಲ್ಲಿ ನಾನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಆದರೆ, ಪ್ರಮುಖವಾಗಿ ನಮ್ಮ ಈ ವ್ಯವಸ್ಥೆಯಲ್ಲಿ ಈ ಸಿಸ್ಟಂನಲ್ಲಿ ನಡೆದಿರತಕ್ಕಂಥ ಒಂದು ರೀತಿಯಲ್ಲಿ ಸಂಪೂರ್ಣವಾಗಿ ನಾವು ಜನಗಳಿಗೆ ತಲುಪಿಸತಕ್ಕಂಥ ದೃಷ್ಟಿಯಿಂದ ಮತ್ತು ಜನಗಳೇನು ತೊಂದರೆಯಲ್ಲಿದ್ದರು, ಅವರಿಗೆ ನೆರವಾಗತಕ್ಕಂಥ ನಿಟ್ಟಿನಲ್ಲಿ ಈ ಕಾಮಗಾರಿಗಳು ಯಾವುದೇ ರೀತಿಯಲ್ಲಿ, ಯಾವುದೇ ತಾಲ್ಲೂಕಿನಲ್ಲಿ ನಡೆದಿಲ್ಲವೆಂಬುದನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮತ್ತೊಂದು ಬಹಳ ಪ್ರಮುಖವಾಗಿ, ನಮ್ಮ ನಾಯಕರಾದ ಮಾನ್ಯ ಚೆನ್ನಿಗಪ್ಪನವರು ಮಧ್ಯೆ ಎದ್ದು ಈಗಾಗಲೇ ಹೇಳಿದರು. ನಾವು ಎಲ್ಲಿ ಹೋದರೂ, ತಪ್ಪು ಮಾಡಿದ್ದರೆ ಕ್ರಮ ತೆಗೆದುಕೊಂಡಿದ್ದೇವೆ. ಅಧಿಕಾರಿಗಳನ್ನು ಸಸ್ಪೆಂಟ್ ಮಾಡಿದ್ದೇವೆ. ನಮಗೆ ಯಾರಿಗೂ ಪತ್ರ ಬರೆದಿಲ್ಲವೆಂದರು. ಇವತ್ತು ಶಾಸಕರು ಪತ್ರ ಬರೆದ ತಕ್ಷಣ, ಕ್ರಮ ತೆಗೆದುಕೊಂಡು ಅವರನ್ನು ಸಸ್ಪೆಂಡ್ ಮಾಡುವುದಾಗಿದ್ದರೆ, ಇಷ್ಟೊತ್ತಿಗೆ ಎಲ್ಲರೂ ಪತ್ರ ಬರೆಯುತ್ತಿದ್ದರೇನೋ. ಈ ತರಹ ಈ ಸಂದರ್ಭದಲ್ಲಿ ನಾನು ನೋಡಿಲ್ಲ. ಇಂತಹ ನ್ಯೂನ್ಯತೆಗಳು ನಡೆದಿದೆಯೆಂದು ಜಿಲ್ಲಾಧಿಕಾರಿಗಳಿಗೋ ಮಂತ್ರಿಗಳಿಗೋ ಪತ್ರ ಬರೆದರೆ ತಕ್ಷಣ ಅವನ ಮೇಲೆ ಕ್ರಮ ತೆಗೆದುಕೊಂಡು, ವಾಪಸ್ ಆ ಶಾಸಕರಿಗೆ ತಿಳಿಸತಕ್ಕಂಥ ವ್ಯವಸ್ಥೆ ಇವತ್ತು ಈ ರಾಜ್ಯದಲ್ಲಿ ಇಲ್ಲ. ಇದು ಎಲ್ಲರಿಗೂ ಗೊತ್ತಿರತಕ್ಕಂಥ ವಿಚಾರ. ನಾವು ಪತ್ರವನ್ನು ಬರೆಯಬಹುದೇ ವಿನಹ ಪತ್ರದಿಂದ ಅದಕ್ಕೆ ಫಲ ಸಿಗತಕ್ಕಂಥ ಸನ್ನಿವೇಶ ನಮ್ಮ ಕಣ್ಮುಂದೆ ಇದ್ದರೆ ಅದನ್ನು ಮಾಡಬಹುದಾಗಿತ್ತು. ಈ ದೃಷ್ಟಿಯಿಂದ ನಮಗೆ ಸಂದರ್ಭ ಬಂದಾಗ, ಅವಕಾಶ ಸಿಕ್ಕಿದಾಗ, ನಾವು ಸರ್ಕಾರದ ಮುಂದೆ ನಿಮ್ಮ ನ್ಯೂನತೆಗಳನ್ನು ಹೇಳಲಿಕ್ಕೆ ನಿಂತುಕೊಳ್ಳಬೇಕಾಗುತ್ತೆ, ಈ ರೀತಿ ಹೇಳಬೇಕಾಗುತ್ತೆ. ಇವತ್ತು ದೊಡ್ಡಬಳ್ಳಾಪುರದಲ್ಲಿ ಶ್ರೀಮತಿ ಸರ್ವರ್ ಮರ್ಚೆಂಟ್ ಎಂಬ ಇ.ಓ. ಅವರ ಮಾರ್ಗದರ್ಶನದಲ್ಲೇ, ಅವರಿಂದಲೇ ಅಕ್ಕಿ ಕಳುವಾಗಿ ಮಾರಿದ್ದಾರೆ ಎನ್ನುವುದರ ಬಗ್ಗೆ

ಜಿಲ್ಲಾಧಿಕಾರಿಗಳಿಂದ ಒಂದು ಪತ್ರವನ್ನು, ಎನ್‌ಕ್ವೈರಿಯನ್ನು ಕಾಯ್ದಿರಿಸಿ ಅಮಾನತ್ ಮಾಡಿ ಎಂದು ಪತ್ರ ಬರೆದಿದ್ದರೂ, ಅವರಿಂದ ನೋಟ್ ಹೋಗಿದ್ದರೂ ಇಲ್ಲಿಯವರೆಗೆ ಸಸ್ಪೆಂಡ್ ಮಾಡಿಲ್ಲ. ಯಾರೋ ಒಬ್ಬ ಅಧಿಕಾರಿ ಅಮಾಯಕನನ್ನು ಸಸ್ಪೆಂಡ್ ಮಾಡುವುದು ಮುಖ್ಯವಲ್ಲ. ಅದರ ಬಗ್ಗೆ ನಡೆದಂಥ ದಾಖಲೆಗಳು ಇವೆ. ಚಿಕ್ಕಬಳ್ಳಾಪುರದಲ್ಲಿ ಅವರು ಹೋಗುತ್ತಾ ಲಾರಿಯನ್ನು ಹಿಡಿದು, ಪೋಲೀಸ್ ಸ್ಟೇಷನ್‌ನಲ್ಲಿ ಕೇಸ್ ದಾಖಲೆಯಾಗಿ, ಜಿಲ್ಲಾಧಿಕಾರಿಗಳು ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ, ಸಸ್ಪೆಂಡ್ ಮಾಡುವುದಕ್ಕೆ ಅವರಿಂದ ನೋಟ್ ಹೋಗಿದ್ದರೂ ಸಹ ಇಲ್ಲಿಯವರೆಗೆ ಯಾವುದೇ ರೀತಿಯ ಕ್ರಮ ಆಗಿಲ್ಲ. ಇಂತಹ ಒಂದೆರಡು ನಿದರ್ಶನಗಳು ಇದ್ದರೆ, ಮತ್ತೊಬ್ಬ ಅಧಿಕಾರಿಗಳು ಯಾವರೀತಿ ಕೆಲಸವನ್ನು ಪ್ರಮಾಣಿಕವಾಗಿ ನಿರ್ವಹಿಸುತ್ತಾರೆ ಎನ್ನುವುದಕ್ಕೆ ನಮ್ಮ ಇಂತಹ ನಿದರ್ಶನಗಳು ಮುಖ್ಯ. ಮತ್ತೆ ಇವತ್ತು ಬರ ಕಾಮಗಾರಿಗಳನ್ನು ಮಾಡುವುದಷ್ಟೆ ಅಲ್ಲ. ತಾಲ್ಲೂಕಿನಲ್ಲಿ, ಜಿಲ್ಲೆಯಲ್ಲಿ ಒಂದಷ್ಟು ಕೆಲಸಗಳನ್ನು ತೆಗೆದುಕೊಳ್ಳುವುದರಿಂದ ನಾವು ಜನರ ಸಮಸ್ಯೆಗಳಿಗೆ ಸ್ಪಂದಿಸಿದ್ದೇವೆಂದು ಬೆನ್ನುತಟ್ಟಿಕೊಳ್ಳುವುದಕ್ಕಾಗುವುದಿಲ್ಲ. ಯಾರೋ ಒಂದಷ್ಟು ಕೂಲಿಕಾರರಾಗಿ ಬರತಕ್ಕಂಥವರಿಗೆ ಸ್ವಲ್ಪ ಕೆಲಸ ಸಿಕ್ಕಿರುತ್ತೆ, ಅದರಿಂದ ಅಕ್ಕಿಯೋ ಅಥವಾ ಪೇಮೆಂಟೋ ಸಿಕ್ಕಿರುತ್ತೇ. ಉಳಿದಂತೆ, ಇವತ್ತು ಎಲ್ಲರಿಗೂ ಕೆಲಸಗಳು ಸಿಕ್ಕಿರುವುದಿಲ್ಲ. ಜನರ ಸಮಸ್ಯೆಗೆ, ಮೂರು ವರ್ಷಗಳ ಈ ಬರಗಾಲದಲ್ಲಿ ಬಹುತೇಕ ಇನ್ನು ಮುಂದೆ ಮಳೆ ಬಂದರೂ, ಸುಭಿಕ್ಷವಾಗಿ ಆದರೂ ಸಹ ಇನ್ನು 4–5 ವರ್ಷವಾದರೂ ಒಂದು ಸ್ಟೇಜಿಗೆ ಬರುವುದಕ್ಕಾಗುವುದಿಲ್ಲ. ಅಂತಹ ಒಂದು ಸಂದರ್ಭದಲ್ಲಿ ಇವತ್ತು ಕರ್ನಾಟಕದಲ್ಲಿ ಆಡಳಿತ ಮಾಡುತ್ತಿರತಕ್ಕ ಕಾಂಗ್ರೆಸ್ ಸರ್ಕಾರ, ಜನರಿಗೆ, ರೈತರಿಗೆ ಯಾವರೀತಿ, ಸಮಗ್ರವಾಗಿ ಮೂರು ವರ್ಷದ ಬರಗಾಲದ ನೆರವು ಏನು ಎಂಬುದನ್ನು ಸದನದಲ್ಲಿ ಸ್ಪಷ್ಟ ಮಾಡಬೇಕಾಗುತ್ತದೆ. ಇವತ್ತು ಅಬಕಾರಿ, ಸೇಲ್ಸ್‌ಟ್ಯಾಕ್ಸ್ ಮತ್ತು ಕಮರ್ಷಿಯಲ್ ಟ್ಯಾಕ್ಸ್, ಇನ್‌ಕಮ್ ಟ್ಯಾಕ್ಸ್‌ನಲ್ಲಿ ಮೊನ್ನೆ ನಮ್ಮ ಮಾನ್ಯ ಶ್ರೀನಿವಾಸಗೌಡರು ಮಾತನಾಡುವಾಗ ಹೇಳಿದರು. ಇವತ್ತು ನಾವು ಕಟ್ಟಬೇಕಾದ ಸರ್ಕಾರದ ಬಾಕಿಯನ್ನು ಕೋರ್ಟ್ ಮೂಲಕ ಮತ್ತೆ ಇನ್ನಾವುದೋ ಇಂದು ಮನವಿ ಮೂಲಕ 3–4 ವರ್ಷಗಳು ಮುಂದುವರಿಸಿಕೊಂಡು ಹೋಗುವುದನ್ನು ನೋಡಿದ್ದೇವೆ. ಆದರೆ, ಪಿ.ಎಲ್.ಡಿ. ಬ್ಯಾಂಕಿನಲ್ಲಿ, ಸೊಸೈಟಿಯಲ್ಲಿ 10 ಸಾವಿರಕ್ಕೇ ಹೋಗಿ ಜಪ್ತಿ ಮಾಡುತ್ತಾರೆ. ಕಾನೂನು ತರತಕ್ಕಂಥವರು, ಅದು ಪಾರ್ಲಿಮೆಂಟ್‌ನಲ್ಲಿ ಆಗಿರಬಹುದು ಅಥವಾ ಅಸೆಂಬ್ಲಿಯಲ್ಲಿ ಆಗಿರಬಹುದು. ಇವತ್ತು ಅಂತಹ ಕಾನೂನು ತರತಕ್ಕಂಥ ಅವಕಾಶ ಇದೆ. ಯಾರಿಗೆ ಶಕ್ತಿ ಇದೆ ಅಂಥವರಿಗೆ, ಯಾವುದೇ ರೀತಿಯಲ್ಲಿ ಬಾಕಿಯನ್ನು ಕಟ್ಟಲಿಕೆ, ಅವರ ಮೇಲೆ ಕಟ್ಟುನಿಟ್ಟಾದ ಕ್ರಮ ಜರುಗಿಸುವುದಕ್ಕೆ ಸರ್ಕಾರ ಮುಂದಾಗುವುದಿಲ್ಲ. ಆದರೆ, ಒಬ್ಬ ಸಣ್ಣ ರೈತ 10 ಸಾವಿರ ರೂಪಾಯಿಗಳ ಒಂದು ಕೆ.ಇ.ಬಿ. ಬಿಲ್ಲಿಗೆ, ಒಬ್ಬ ಟ್ರಾಕ್ಟರ್ ಇಟ್ಟುಕೊಂಡಿರತಕ್ಕ ಸಣ್ಣ ರೈತನಿಗೆ ನೀವು ವಸೂಲಿ ಮಾಡುವುದಕ್ಕೆ ಮುಂದಾಗಿ, ಅವರ ಟ್ರಾಕ್ಟರನ್ನು ಸೀಜ್ ಮಾಡಿ ನಿಲ್ಲಿಸತಕ್ಕಂಥಾದ್ದು, ಅವನ ಮನೆಯಲ್ಲಿ ಅಕ್ಕಿ ಇದ್ದರೆ, ಅಕ್ಕಿ ಎತ್ತಿಕೊಂಡು ಬರತಕ್ಕಂಥಾದ್ದು ಜೋಳ ಇದ್ದರೆ, ಜೋಳ ಎತ್ತಿಕೊಂಡು ಬರತಕ್ಕಂಥಾದ್ದು ಈ ರೀತಿ. ಅದೂ ಇಂತಹ ಒಂದು ಸಂದರ್ಭದಲ್ಲಿ ಇದು ಸರಿಯೇ? ನೀವು ಕಾಮಗಾರಿ ಕೊಟ್ಟ ಕೂಡಲೇ, ಇವತ್ತು ಬರ ನೀಗತ್ತಿರತಕ್ಕ ಇಂತಹ ಒಂದು ಕೆಟ್ಟ ಸನ್ನಿವೇಶದಲ್ಲಿ ಜನರಿಗೆ ನಿಮ್ಮ ನೆರವು ಈ ರೀತಿ ನಾಲ್ಕು ಕಾಮಗಾರಿಗಳನ್ನು ತೆಗೆದುಕೊಂಡು, ಯಾವುದೋ ಒಂದು ಕೆರೆ ಹೂಳು ಎತ್ತುವುದೋ ಇನ್ನೊಂದೋ ಮಾಡಿದರೆ ಇದರಿಂದ ಜನರಿಗೆ ಪರಹಾರ ಸಿಗುತ್ತೆ ಎನ್ನುವುದನ್ನು ನೀವು ಯೋಚನೆ ಮಾಡಬೇಕಾಗಿ

ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಇವತ್ತು ಕೆ.ಇ.ಬಿ.ನವರು ಈಗಾಗಲೇ ಮೀಟರನ್ನು ಫಿಕ್ಸ್ ಮಾಡುತ್ತಿದ್ದಾರೆ. ಇಷ್ಟೊಂದು ಕಠಿಣವಾದ ಸಮಸ್ಯೆಯನ್ನು ಎದುರಿಸತಕ್ಕ ರೈತರಿಗೆ, ಇವತ್ತು ಒಳ್ಳೆಯ ಮಳೆ ಬಿದ್ದು, ಬೆಳೆಯಾಗಿ, ಬೆಳೆಗಳಿಗೆ ರೇಟ್ ಇಲ್ಲದೇ ವನವಾಸಪಡುತ್ತಿರತಕ್ಕ ರೈತರಿಗೆ ಈ ಮೂರು ವರ್ಷಗಳಿಂದ ಇಂತಹ ಒಂದು ಕಠಿಣವಾದ ಬರಗಾಲ ಎದುರಿಸತಕ್ಕ ಸಂದರ್ಭದಲ್ಲಿ ಮೀಟರ್ ಫಿಕ್ಸ್ ಮಾಡಿ, ಕೆ.ಇ.ಬಿ.ನಲ್ಲಿ ನೀವು ವಿದ್ಯುತ್‌ಸರಬರಾಜನ್ನು ಸರಿಯಾದ ರೀತಿಯಲ್ಲಿ ಕೊಟ್ಟಿದ್ದರೆ ಮಾಡಬಹುದಾಗಿತು. ಇವತ್ತು ನೀವು 6 ಗಂಟೆ ಎಂದು ಹೇಳಿ, 2 ಗಂಟೆ ಕೊಡುವುದಿಲ್ಲ. 2 ಗಂಟೆ ಎಂದು ಹೇಳಿ, 1 ಗಂಟೆ ಕೊಡಲಿಕ್ಕಾಗಲ್ಲ. ಒಂದು ಗಂಟೆ ಕೊಟ್ಟರೂ ಸಹ 10–10 ನಿಮಿಷಕ್ಕೆ ಪವರ್ ಕಟ್ ಆಗತಕ್ಕ ಸನ್ನಿವೇಶ ಇದು. ಇಂತಹ ಅನೇಕ ಸಮಸ್ಯೆಗಳನ್ನು ಇಟ್ಟುಕೊಂಡು ವಿದ್ಯುತ್ ಮೀಟರನ್ನು ಅಳವಡಿಸತಕ್ಕಂಥಾದ್ದು ಮತ್ತು ಜುಲೈ 30ಕ್ಕೆ ಬಡ್ಡಿಯನ್ನು ಮನ್ನಾ ಮಾಡಿದ್ದೇವೆ. ಅಷ್ಟರೊಳಗೆ ಕಟ್ಟಬೇಕು ಎಂದು ಹೇಳುತ್ತೀರಿ. ರೈತ ಎಲ್ಲಿಂದ ತಂದು ಕಟ್ಟಲಿಕ್ಕಾಗುತ್ತೆ? ಜುಲೈ 30 ಅಲ್ಲ, ನೀವು ಇನ್ನೊಂದು ವರ್ಷ ಕೊಟ್ಟರೂ ಕಟ್ಟಲಿಕ್ಕಾಗುವುದಿಲ್ಲ. ವಿದ್ಯುತ್ ಪಂಪುಸೆಟ್ಟುಗಳ ಮೇಲೆ ಫಿಕ್ಸ್ ಮಾಡಿರತಕ್ಕಂಥ ಸಣ್ಣ ರೈತರ ಹಣವನ್ನು ಮನ್ನಾ ಮಾಡುವುದರಿಂದ ನೀವೇನಾದರೂ ರೈತರ ನೆರವಿಗೆ ಹೋಗಬಹುದೇ ವಿನಹ ಅದು ಬಿಟ್ಟು ಜುಲೈ, ಆಗಸ್ಟ್, ಸೆಪ್ಟೆಂಬರ್‌ಗೆ ನಾವು ಬಡ್ಡಿ ಮನ್ನಾ ಮಾಡುತ್ತೇವೆಂದು ಹೇಳಿದರೆ ಯಾವುದೇ ತರದ ರೈತರ ಸಮಸ್ಯೆಗೆ, ನೆರವಿಗೆ ನೀವು ಹೋದಂತಾಗಲ್ಲ. ಈ ಕಾಮಗಾರಿಗಳ ಮೂಲಕ ಇವತ್ತು ಜನರ ಮನಸ್ಸನ್ನು ಗೆಲ್ಲುವುದೇ ಆಗಲೀ ಅಥವಾ ಜನರ ಸಮಸ್ಯೆಯನ್ನು ಪರಿಹಾರ ಮಾಡುವುದೇ ಆಗಲೀ ಸಾಧ್ಯವಿಲ್ಲ. ನೀವೇನಾದರೂ ವಿದ್ಯುತ್ ಇಲಾಖೆಯಲ್ಲಿರತಕ್ಕ ಬಾಕಿ ಬಿಲ್ಲನ್ನು ಸಂಪೂರ್ಣವಾಗಿ ಮನ್ನಾ ಮಾಡತಕ್ಕಂಥಾದ್ದಾಗಲೀ ಅಥವಾ ಪಿ.ಎಲ್.ಡಿ. ಬ್ಯಾಂಕಿನಲ್ಲೋ, ಸೊಸೈಟಿಯಲ್ಲೋ ಇರತಕ್ಕಂಥ ಸಣ್ಣ ರೈತರ ಸಾಲವನ್ನು, ಬಡ್ಡಿಯನ್ನು ಸಂಪೂರ್ಣವಾಗಿ ಮನ್ನಾ ಮಾಡತಕ್ಕಂಥಾದ್ದಾಗಲಿ ಅಥವಾ ಅವರಿಗೆ ಇನ್ನೂ ಒಂದು ವರ್ಷ ಕಾಲ ಟೈಮ್ ಕೊಟ್ಟು ನಂತರ ಅಸಲನ್ನು ಕಟ್ಟುವುದಕ್ಕೆ ಅವಕಾಶ ಕೊಡತಕ್ಕಂಥಾದ್ದಾಗಲೀ ಯಾವುದಾದರೂ ಒಂದು ರೀತಿಯಲ್ಲಿ ನೀವು ಸಮಗ್ರವಾಗಿ ರೈತರಿಗೆ ಈ ಮೂರು ವರ್ಷದ ಬರದ ಸನ್ನಿವೇಶದಲ್ಲಿ ನಿಮ್ಮದೇ ಆದಂಥ ರೀತಿಯಲ್ಲಿ ಚಿಂತನೆ ಮಾಡಿ, ವಿರೋಧಪಕ್ಷದವರು ಹೇಳಿರುವುದೆಲ್ಲವನ್ನೂ ಗಮನಹರಿಸಿ, ಅವರಿಗೇನಾದರೂ ನೀವು ಹೊಸ ಯೋಜನೆಯನ್ನು ಕೊಡದೇ ಇದ್ದರೆ ಖಂಡಿತ ಈ ಜನ ನಿಮ್ಮನ್ನು ಕ್ಷಮಿಸುವುದಿಲ್ಲವೆಂಬುದನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಏಕೆಂದರೆ, ಕಾಮಗಾರಿ ಸಾಂದರ್ಭಿಕವಾಗಿ ಸ್ವಲ್ಪ ಜನರಿಗೆ ಮಾತ್ರ, ಅವತ್ತಿನ ಒಂದು ದಿನದ ಊಟಕ್ಕೋ, ಒಂದು ದಿನದ ಕಷ್ಟಕ್ಕೋ ಪರಿಹಾರಕ್ಕೆಷ್ಟೇ ಬಿಟ್ಟರೆ, ಉಳಿದಂತೆ ಇವತ್ತು ಮೂರು ವರ್ಷದ ಈ ನೋವಿಗೆ ಯಾವತ್ತೂ ಪರಿಹಾರ ಸಿಕ್ಕುವುದಿಲ್ಲ. ನಂತರ ಕುಡಿಯುವ ನೀರಿನ ಸಮಸ್ಯೆಗೆ ಬಂದರೆ, ಸಂಪೂರ್ಣವಾಗಿ ಪತ್ರಿಕೆಯಲ್ಲಿ ನೋಡಿದ್ದೇವೆ. ಕುಡಿಯುವ ನೀರಿನ ವಿಚಾರದಲ್ಲಿ ಯಾವ ಸಮಸ್ಯೆಯೂ ಇಲ್ಲ ಎಷ್ಟು ಬೇಕಾದರೂ ಹಣ ಕೊಡುತ್ತೇವೆ. ಯಾವ ಜಿಲ್ಲೆಯಲ್ಲೂ ನಾನು ಕೇಳಿಲ್ಲ. ಕುಡಿಯುವ ನೀರಿಗೆ ಇವತ್ತು ನೂರಾರು ಹಳ್ಳಿಗಳು ವಿದ್ಯುತ್ ಕೋ ಆರ್ಡಿನೇಷನ್ ಇಲ್ಲದೇ ಇರಬಹುದು ಅಥವಾ ಕೆಲವು ಬೋರ್‌ವೆಲ್ ಫೇಲ್ ಆಗಿರಬಹುದು, ಕೆಲವು ಸ್ಕೀಮ್‌ಗಳಲ್ಲಿ ಸರಿಯಾದ ರೀತಿಯಲ್ಲಿ ನೀರು ಸಿಕ್ಕದೇ ಮತ್ತೊಂದು ಬೋರ್‌ವೆಲ್ ಹಾಕತಕ್ಕಂಥ ವ್ಯವಸ್ಥೆಯಲ್ಲಿ ಫೇಲ್ ಆಗಿರಬಹುದು. ಒಟ್ಟಾರೆ, 50ಕ್ಕೂ ಹೆಚ್ಚಿನ ಪರ್ಸೆಂಟೇಜ್ ಹಳ್ಳಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು

ಎದುರಿಸುತ್ತಿದ್ದಾರೆ. ಇವತ್ತು ಹಳ್ಳಕೊಳ್ಳದಲ್ಲಿ ನೀರು ಸಿಗುವುದಿಲ್ಲ. ಬಾವಿಯಲ್ಲಿ ನೀವು ಸಿಗುವುದಿಲ್ಲ. ವಿದ್ಯುತ್ ಇಲಾಖೆಯಲ್ಲಿ ಯಾವತ್ತು ಸರಿಯಾದ ರೀತಿಯಲ್ಲಿ ಕರೆಂಟ್ ಕೊಡುವುದಿಲ್ಲ. ಯಾವರೀತಿ ಕುಡಿಯುವ ನೀರನ್ನು ಸಮಗ್ರವಾಗಿ ರೈತರಿಗೆ ಹಳ್ಳಿಗಳಿಗೆ ಕೊಡುತ್ತಿದ್ದೇವೆಂಬುದನ್ನು ಯೋಚನೆ ಮಾಡಿಯೇ ಇಲ್ಲವೆಂದು ಈ ಸಂದರ್ಭದಲ್ಲಿ ಖಡಾಖಂಡಿತವಾಗಿ ಹೇಳಬೇಕಾಗುತ್ತೆ. ಮತ್ತೆ ಜಾನುವಾರುಗಳು. ಈ ಜಾನುವಾರುಗಳಿಗೆ ನಾವು ಮೇವನ್ನು ಸಪ್ಲೈ ಮಾಡುತ್ತೇವೆ ಅಥವಾ ಮೇವಿನ ವಿತರಣಾ ಕೇಂದ್ರವನ್ನು ತೆಗೆಯುತ್ತೇವೆಂದು ಹೇಳುತ್ತೇವೆ. ಗೋಶಾಲೆಗಳನ್ನು ನಮ್ಮ ಜಿಲ್ಲೆಯಲ್ಲೇನೋ ತೆಗೆದಿಲ್ಲ ಆದರೆ, ಮೇವನ್ನು ಇದುವರೆಗೂ ಖರೀದಿ ಮಾಡಿ, ಸಪ್ಲೈ ಮಾಡಿಲ್ಲ. ಇಂತಹ ಒಂದು, ಕಾರ್ಯಕ್ರಮವನ್ನು ಮಾಡದೇ ನಾವು ಕೇಂದ್ರ ಸರ್ಕಾರದಿಂದ ಬಂದಿರತಕ್ಕಂಥ ಒಂದಷ್ಟು ಅಕ್ಕಿಯನ್ನು, ಇನ್ನೂ ಫೆಬ್ರವರಿಯಲ್ಲಿ ಮಾಡಿದಂಥ ಕೆಲಸಗಳಿಗೆ ಪಾವತಿ ಮಾಡಿಲ್ಲ.

2.40 ಪಿ.ಎಂ.

ನೀವು ಫೆಬ್ರವರಿಯಿಂದ ಇಲ್ಲಿಯವರೆಗೆ ಬಾಕಿ ಇಟ್ಟುಕೊಂಡರೆ.... ಹೇಮಾವತಿಯಲ್ಲೋ. ಪಿಡಬ್ಲುಡಿಯಲ್ಲೋ, ಜಿಲ್ಲಾಪಂಚಾಯತ್‌ನಲ್ಲೋ, ಎರಡು, ಮೂರು ವರ್ಷಗಳು ಬಾಕಿ ಮಾಡಿಕೊಂಡು ಬಂದಿರುವ ರೀತಿಯಲ್ಲಿ ಇವೊತ್ತು ನೀವು ಬರಕಾಮಗಾರಿಗಳಿಗೆ ಬಾಕಿ ನಿಲ್ಲಿಸಿಕೊಂಡು ಬಂದರೆ, ನೀವು ಯಾವರೀತಿಯಲ್ಲಿ ಅದನ್ನು ನಿರ್ವಹಿಸುತ್ತೀರಿ ಎನ್ನುವುದನ್ನು ನೀವೇ ಯೋಚನೆ ಮಾಡಬೇಕು. ಇದು ಕಣ್ಣ ಮುಂದೆ ಇರುವ ಚಿತ್ರ. ನಾವೇನೂ ಹೇಳಬೇಕಾಗಿಲ್ಲ. ಏನಾಗಿದೆ, ನಾವು ಏನು ಮಾಡುತ್ತಿದ್ದೇವೆ, ನಾವು ಯಾವರೀತಿಯಲ್ಲಿ ನಿರ್ವಹಿಸುತ್ತಾ ಇದ್ದೇವೆ ಎನ್ನುವುದು. ಒಟ್ಟಾರೆ ಮೂರು ವರ್ಷಗಳ ಕಾಲದ ಬರದ ಒಂದು ಕಷ್ಟದ ದಿನಗಳಲ್ಲಿ ಯಾವುದೇ ರೀತಿಯಲ್ಲಿ ರೈತರಿಗೆ ಇವೊತು ಸಂಪೂರ್ಣವಾದಂಥ ಪರಿಹಾರವನ್ನು ಕೊಡಲು ಸರಕಾರ ವಿಫಲವಾಗಿದೆ ಎನ್ನುವುದನ್ನು ಸರಕಾರವು ಮನವರಿಕೆ ಮಾಡಿಕೊಂಡಿದೆ ಎನ್ನುವ ವಿಶ್ವಾಶ ನನಗೆ ಇದೆ. ಇನ್ನು ಬಹಳ ಪ್ರಮುಖವಾಗಿ ಕಾಮಗಾರಿಗಳಿಗಿಂತ ಹೆಚ್ಚಾಗಿ, ಕುಡಿಯುವ ನೀರಿನ ವ್ಯವಸ್ಥೆ ಎಲ್ಲೆಲ್ಲಿ ಸ್ಥಗಿತಗೊಂಡಿದೆ. ಸಮಸ್ಯೆಯಿದೆ ಅದಕ್ಕೆ ಏನಾದರೊಂದು ಪರಿಹಾರವನ್ನು ಹುಡುಕದೆ ಇದ್ದರೆ, ನಾವು ಬಹಳಷ್ಟು ಸಮಸ್ಯೆಗಳನ್ನು ಎದುರಿಸ ಬೇಕಾಗುತ್ತದೆ ಮತ್ತೆ ಅದಕ್ಕಿಂತ ಮುಖ್ಯವಾಗಿ ರೈತರಿಗೆ, ಇವೊತ್ತು ಒಳ್ಳೆಯ ಮಳೆ ಬಿದ್ದರೂ ಒಳ್ಳೆಯ ಬೆಳೆಯಾಗತಕ್ಕಂಥ ಸನ್ನಿವೇಶವಿದ್ದರೂ ರೈತರಿಗೆ ಚೇತರಿಸಿಕೊಂಡು ಬಡ್ಡಿಯಾಗಲೀ, ಸಾಲವಾಗಲೀ, ಅವರು ಜೀವನವಾಗಲಿ ನಡೆಸುವುದು ಅಷ್ಟು ಸುಲಭವಾಗಿಲ್ಲ. ಇನ್ನೂ ಒಂದೆರಡು ವರ್ಷಗಳು ಬೇಕಾಗುತ್ತವೆ. ಅದನ್ನು ಯೋಚನೆ ಮಾಡಿ ಅವರಿಗೆ ವಿದ್ಯುತ್ ಇಲಾಖೆಯಲ್ಲಾಗತಕ್ಕಂಥ ಸಹಾಯವಾಗಲೀ, ಬೇರೆ ಇಲಾಖೆಗಳಲ್ಲಿ ಸಹಕಾರ ಇಲಾಖೆಯಲ್ಲಿ ಆಗಿರತಕ್ಕಂತಹ ಸಾಲದ ಬಡ್ಡಿಯನ್ನು ಅಥವಾ ದೀರ್ಘಾವಧಿ ಸಾಲವನ್ನಾಗಿ ಮಾಡತಕ್ಕಂಥಾದ್ದಾಗಲೀ, ಇಂಥ ಅನೇಕ ಪರಿಹಾರಗಳನ್ನು ಜನರಿಗೆ ಕೊಟ್ಟು ಸಹಾಯವನ್ನು ಮಾಡಬೇಕೆಂದು ನಾನು ಹೇಳುತ್ತಾ, ಈ ಸಂದರ್ಭದಲ್ಲಿ ಒತ್ತಾಯವನ್ನು ಮಾಡುತ್ತೇನೆ. ನಮ್ಮ ಸಣ್ಣ ನೀರಾವರಿ ಇಲಾಖೆಯಲ್ಲಿ ನಮ್ಮ ಹಿರಿಯ ಸಚಿವರಾದಂಥ ಖರ್ಗೆಯವರು ಅವರು ಬಂದಮೇಲೆ ಬಹಳ ಜನರು ಆಶಾದಾಯಕರಾಗಿ, 3-4 ವರ್ಷಗಳಿಂದ ಬಾಕಿ ಇದ್ದಂಥ ಪಾವತಿಯನ್ನು ಏನಾದರೂ ಮಾಡಿಸಿ ಮಾಡುತ್ತಾರೆಂದು ಭಾವಿಸಿದ್ದರು, ಆದರೂ ಕೂಡ ದುರಾದೃಷ್ಟವಶಾತ್ ಬಜೆಟ್‌ನಲ್ಲಿ ಹಣ ಇಲ್ಲದಿರುವುದರಿಂದ ಮಾಡಿಕೊಂಡು ಬರಲಿಲ್ಲ. ನಂತರ ಬರಗಾಲದ ಈ ಸಂದರ್ಭದಲ್ಲಿ ರೈತಕಾಯಕ ಕೆರೆ ಮತ್ತು ಬರಗಾಲದ ಕಾಮಗಾರಿಗಳಲ್ಲಿ ಪ್ರತಿ ಕ್ಷೇತ್ರಕ್ಕೆ

ಸಣ್ಣಪುಟ್ಟ ಕೆಲಸಗಳಿಗೆ ಕೊಟ್ಟರು. ಆದರೆ ಅದಕ್ಕೂ ಸಹ ಇಲ್ಲಿಯವರೆಗೆ ಸಂಪೂರ್ಣವಾಗಿ ಅಕ್ಕಿ ಬಿಡುಗಡೆಯಾಗಿಲ್ಲ. ಹಣ ಕೆಲವು ಬಿಡುಗಡೆಯಾಗಿಲ್ಲ. ದಯಮಾಡಿ ತಾವು ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ಒಟ್ಟಾರೆ ಈ ರಾಜ್ಯದಲ್ಲಿ ಸಣ್ಣ ನೀರಾವರಿ ಇಲಾಖೆಯಲ್ಲಿ ತೆಗೆದುಕೊಂಡಿರತಕ್ಕಂಥ ಬರದ ಕಾಮಗಾರಿಯಲ್ಲಿ ಎಷ್ಟು ಕೆಲಸಗಳು ಕಂಪ್ಲೀಟ್ ಆಗಿವೆ, ಎಷ್ಟು ಹಣ ಜಿಲ್ಲಾವಾರು ಬಿಡುಗಡೆಯಾಗಿದೆ, ರೈತ ಕಾಯಕ ಕೆರೆ ಯೋಜನೆಯು ಎಷ್ಟು ಕಂಪ್ಲೀಟ್ ಆಗಿದೆ, ಇನ್ನೂ ಎಷ್ಟು ಹಣ ಬಾಕಿ ಇದೆ ಎನ್ನುವುದನ್ನು ಸ್ಪಷ್ಟಪಡಿಸಬೇಕಾಗಿದೆ. ಮತ್ತೆ ಈಗ, 3–4 ಹಂತಗಳಲ್ಲಿ ಬರದ ಕಾಮಗಾರಿಗಳನ್ನು ಏನು ತೆಗೆದುಕೊಂಡಿದ್ದೀರಿ, ಯಾವ ಯಾವ ಜಿಲ್ಲೆಗಳಲ್ಲಿ ಸಂಪೂರ್ಣವಾಗಿ ಹಣ ಅಥವಾ ಅಕ್ಕಿ ಬಿಡುಗಡೆಯಾಗಿದೆಯೋ ಇಲ್ಲವೋ, ಸಂಪೂರ್ಣವಾಗಿ ಅಕ್ಕಿಯು ಬಿಡುಗಡೆಯಾಗಿದ್ದರೆ, ಅದರ ವಿವರಗಳನ್ನು ಸ್ಪಷ್ಟವಾಗಿ ಕೊಡಬೇಕಾಗುತ್ತದೆ. ಮುಂದಿನ ದಿನಗಳಲ್ಲಿ ಮಳೆ ಬೀಳುತ್ತಾ ಇದೆ ಎಂದು ನಾವು ಉದಾಸೀನ ಮಾಡತಕ್ಕಂಥ ಸನ್ನಿವೇಶವಿಲ್ಲ. ಇವೊತ್ತು ಮಳೆಯು ಒಂದು ಕಡೆ ಬೀಳುತ್ತದೆ, ಇನ್ನೊಂದು ಕಡೆ ಬೀಳುತ್ತಿಲ್ಲ. ಬಿದ್ದರೂ ಸಂಪೂರ್ಣವಾಗಿ ಯಶಸ್ವಿ ಆಗುತ್ತಾ ಇಲ್ಲ. ಆದುದರಿಂದ ನಮಗೆ ಇರತಕ್ಕಂಥ ಸಮಸ್ಯೆಗಳ ಬಗ್ಗೆ ಇನ್ನೂ ಹೆಚ್ಚಿನ ಕಾಳಜಿಯನ್ನು ವಹಿಸಿ, ಜನರಿಗೆ ಪರಿಹಾರವನ್ನು ಕೊಡಬೇಕೆಂದು ನಾನು ಒತ್ತಾಯ ಮಾಡಿ, ರೈತರ ಸಾಲದ ವಿದ್ಯುತ್‌ಕ್ಷೇತ್ರದಲ್ಲಿರತಕ್ಕಂಥ ಬಾಕಿ ಬಿಲ್‌ನ್ನು ಸಾಕಷ್ಟು ದೊಡ್ಡದೊಡ್ಡ ಬಿಲ್ ಇರತಕ್ಕಂಥವರು ಕೋರ್ಟ್ ಮೂಲಕ ನಿಲ್ಲಿಸಿಕೊಂಡಿದ್ದಾರೆ. ಆದರೆ ಸಣ್ಣ ರೈತರಾರೂ ಕೋರ್ಟ್‌ಗೆ ಹೋಗುವುದಕ್ಕಾಗುವುದಿಲ್ಲ. 2–3–5 ಸಾವಿರ ಇರತಕ್ಕಂಥವರು ಕೋರ್ಟ್‌ಗೆ ಹೋಗುವುದಕ್ಕಾಗುವುದಿಲ್ಲ. ಅವರಿಗೆ ಸರಕಾರವೇ ಸಹಾಯ ಮಾಡಬೇಕು. ಅದನ್ನು ಮನ್ನಾ ಮಾಡುವ ಮೂಲಕ ಏನಾದರೂ ರೈತರಿಗೆ ನೀವು ಸಹಾಯ ಮಾಡಲು ಮುಂದೆ ಬರಬೇಕೆಂದು ಒತ್ತಾಯ ಮಾಡಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಛೇರ್ಮನ್ : ಸದನದಲ್ಲಿ ಬರಗಾಲದ ಬಗ್ಗೆ 16 ಗಂಟೆ 50 ನಿಮಿಷಗಳ ಚರ್ಚೆಯಾಗಿದೆ. ಈ ಚರ್ಚೆಯನ್ನು ಇಲ್ಲಿಗೆ ಮುಕ್ತಾಯ ಮಾಡುತ್ತಿದ್ದೇನೆ. ಈಗ ಸದನವನ್ನು ನಾಡಿದ್ದು ಸೋಮವಾರ ಬೆಳಿಗ್ಗೆ 11 ಗಂಟೆವರೆಗೆ ಮುಂದೂಡುತ್ತಿದ್ದೇನೆ.

[ಸದನವು 2–45 ಗಂಟೆಗೆ ಮುಂದೂಡಲ್ಪಟ್ಟು ದಿನಾಂಕ: 21.07.03 ರಂದು ಬೆಳಿಗ್ಗೆ 11–00 ಘಂಟೆಗೆ ಸಮಾವೇಶಗೊಳ್ಳಲು ನಿರ್ಧರಿಸಿತು]

5. ಅನುಬಂಧ – I

ಬೆಂಗಳೂರು ನಗರದಲ್ಲಿರುವ ಶ್ರೀ ತ್ಯಾಗರಾಜ ಸಹಕಾರ ಬ್ಯಾಂಕ್‌ನಲ್ಲಿ ಸಾಲ ಸೌಲಭ್ಯ ನೀಡದೇ ಇರುವ ಬಗ್ಗೆ

3152 (3712) ಶ್ರೀ ಅಂಗಾರ್ ಎಸ್. (ಸೂಳ್ಯ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರಿನಲ್ಲಿ ಶ್ರೀ ತ್ಯಾಗರಾಜ ಸಹಕಾರಿ ಬ್ಯಾಂಕ್‌ನ ಶ್ರೀ ತ್ಯಾಗರಾಜ ಕೋ–ಅಪರೇಟಿವ್ ಬ್ಯಾಂಕ್) ಎಷ್ಟು ಶಾಖೆಗಳಿವೆ; ಈ ಶಾಖೆಗಳಲ್ಲಿರುವ ಸದಸ್ಯರ ಸಂಖ್ಯೆ ಎಷ್ಟು; (ಶಾಖೆವಾರು ಮಾಹಿತಿ ನೀಡುವುದು)